
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಮಾರ್ಚ್ 30, 2011 ಪುಟ 20 ರೂ. 12/-

ಶೂದ್ರ ತಪಸ್ವಿ ನಾಟಕ ವಿವಾದ




ಈಶ್ವರಪ್ಪ & ಕಂ
ಕಿರಿಕ್



ವಿಶ್ವ ಕನ್ನಡ ಸಮ್ಮೇಳನ

ಆಪರೇಷನ್ ಕನ್ನಡ



ಸೋಸಲೆ ಮಠ ಕಳ್ಳ ಸ್ವಾಮಿ ವಿದ್ಯಾ ಮನೋಹರ




ಸೋಮಣ್ಣನ ಬುಡಕ್ಕೇ ಬೆಂಕಿ ಇಟ್ಟ ರವೀಂದ್ರ

ಮೈಸೂರು ಪಾಲಿಕೆ ಆಸ್ತಿ ಕದ್ದ ಚೆಲುವೇಗೌಡ




ನೋ ಕಾಮೆಂಟ್ಸ್

"ಜನಮನವನ್ನು ಕಲಕಿರುವ ಸಂಗತಿಗಳ ಅನುಸಂಧಾನ ಮಾಡದೆ, ಆತ್ಮರತವಾದ ಸಾಹಿತ್ಯವು ಹುಟ್ಟುವಾಗಲೇ ಸತ್ತಿರುತ್ತದೆ. ಕೋಮುವಾದ, ಜಾಗತೀಕರಣ, ಪರಿಸರ ನಾಶ, ಅಳತೆ ಮೀರಿದ ಕೈಗಾರೀಕರಣ ಮತ್ತು ಎಲ್ಲಾ ಕಡೆಯೂ ಹರಡಿಕೊಂಡಿರುವ ಬಂದಳಿಕೆಯಾದ ಭ್ರಷ್ಟಾಚಾರಗಳು ನಮ್ಮ ಈ ಕಾಲದಲ್ಲಿ ಅತ್ಯಂತ ತೀವ್ರವಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಸಂಗಡವೇ ಬದುಕಿರುವವರ ಬವಣೆಗಳ ಬಗ್ಗೆ ತಳೆದಿರುವ ಜಾಣ ಕಿವುಡು ಮತ್ತು ಜಾಣ ಕುರುಡುಗಳು ಅಸಹ್ಯವಾದ ಪ್ರಮಾಣವನ್ನು ತಲುಪಿವೆ. ಈ ಪರಿಸ್ಥಿತಿಯನ್ನು ಸರಿಪಡಿಸಲೆಂದು ನಡೆಯುವ ಪ್ರಯತ್ನಗಳು ಮತ್ತು ಚಳವಳಿಗಳು



ಈಚಿನ ವರ್ಷಗಳಲ್ಲಿ ಹಿಂಜರಿತ ಅಥವಾ ಹತಾಶೆಯನ್ನು ಅನುಭವಿಸಿವೆ. ಅಥವಾ ತಾವೂ ವ್ಯವಸ್ಥೆಯ ಭಾಗವೇ ಆಗಿಬಿಟ್ಟು ಅಧಿಕಾರ ಸಂಗಾತದ ಫಲವಾದ ಸುಖಭೋಗಗಳಲ್ಲಿ ಮಗ್ನವಾಗಿವೆ. ಉಳ್ಳವರು ಅವಮಾನ ಅಥವಾ ಅಭಿಮಾನಗಳ ಲವಲೇಶವೂ ಇಲ್ಲದೆ ಸ್ವಂತ ಸುಖಗಳಲ್ಲಿ ಮುಳುಗಿದ್ದಾರೆ."

- ಜಿ.ಎಸ್. ಶಿವರುದ್ರಪ್ಪ



"ಪ್ರಪಂಚದಲ್ಲಿ ಇಂಗ್ಲಿಷ್, ಸ್ಪಾನಿಷ್ ಮತ್ತು ಪೋರ್ಚುಗೀಸ್ ಭಾಷೆಗಳು ಕೊಲೆಗಡುಕ ಭಾಷೆಗಳು. ಈ ಮೂರೂ ಭಾಷೆಗಳು ಸ್ಥಳೀಯ ಭಾಷೆಗಳೊಂದಿಗೆ ಮಿಳಿತಗೊಂಡು ಭಾಷೆಯ ನೈಜತೆಯನ್ನು ಕೆಡಿಸುತ್ತಿವೆ."

- ಪ್ರೊ. ಜಿ. ವೆಂಕಟಸುಬ್ಬಯ್ಯ

"ಮಹಿಳೆಯ ಚಾರಿತ್ರ್ಯ ಹರಣವಾದರೂ ಅದನ್ನು ಮತ್ತೆ ಪಡೆಯಬಹುದು. ಆದರೆ ಪತ್ರಿಕೆಯೊಂದಕ್ಕೆ ಕೆಟ್ಟ ಹೆಸರು ಬಂದರೆ ಜನರು ಅದನ್ನು ಮಾನ್ಯ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಪತ್ರಿಕೋದ್ಯಮಿ ಎಂದಿಗೂ ಮಾರಾಟದ ವಸ್ತುವಲ್ಲ ಎಂಬುದನ್ನು ಸಾಬೀತುಪಡಿಸಬೇಕು."

- ಪಾಟೀಲ್ ಪುಟ್ಟಪ್ಪ

"ಬೆಳಗಾವಿ ವಿಶ್ವ ಕನ್ನಡ ಸಮ್ಮೇಳನವಷ್ಟೆ ಕನ್ನಡದ ವರ್ತಮಾನವಲ್ಲ, ಸದ್ಯದ ಕರ್ನಾಟಕ ಭ್ರಷ್ಟಾಚಾರದಲ್ಲಿ ಮುಳುಗಿದೆ. ಎರಡು ವರ್ಷವಾದರೂ



ನೆರೆ ಸಂತ್ರಸ್ತರು ಇನ್ನೂ ತಗಡಿನ ಶೆಡ್‌ಗಳಲ್ಲೇ ಏದುಸಿರು ಬಿಡುತ್ತಿದ್ದಾರೆ. ರೈತರ ಭೂಮಿ ಎಗ್ಗಿಲ್ಲದೆ ಅತಿಕ್ರಮಣವಾಗುತ್ತಿದೆ. ಇಂತಹ ನೂರಾರು ಸಂಕಷ್ಟಗಳು ಮತ್ತು ಸಂಗತಿಗಳು ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದ್ದ ಹಿರಿಯ ಸಾಹಿತಿ ಸಜ್ಜನರಿಗೆ ಕಾಣದಿದ್ದುದು ವಿಷಾದಕರ ಸಂಗತಿ."

- ಅರುಣ್ ಜೋಳದಕೂಡ್ಲಿಗಿ

"ಬ್ರಾಹ್ಮಣರ ಎಂಜಲೆಲೆ ಮೇಲೆ ಉರುಳುವುದನ್ನು ಸಮರ್ಥಿಸಿಕೊಳ್ಳಲು ವಿದ್ವತ್ತನ್ನು ಬಳಸಿಕೊಂಡು ಸಂಬಂಧಗಳ ಚಲನಶೀಲತೆಯನ್ನೇ ನಿರಾಕರಿಸುವವರು ಇರುವ ವರ್ತಮಾನದಲ್ಲಿ ಕುಳಿತು ಕನಸಿನ ಕರ್ನಾಟಕದ ಕುರಿತು ಮಾತನಾಡುವುದೇ ಒಂದು ತಮಾಷೆ."

- ಕೆ.ಟಿ. ಶಿವಪ್ರಸಾದ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಯಾವುದೇ ವಾದ, ಪಂಥಗಳ ಪಕ್ಷ ಅಧಿಕಾರಕ್ಕೆ ಬಂದರೂ ಅವು ಸಮಾಜದ ಏಳಿಗೆಗೆ ಚಿಂತಿಸುವ ವಿಶಾಲ ಹೃದಯ ಹೊಂದಿರಬೇಕಿದೆ."

- ಎ.ಜಿ. ಸದಾಶಿವ

"ಪ್ರೇರಣಾ ಶಿಕ್ಷಣ ಮತ್ತು ಸಾಮಾಜಿಕ ಟ್ರಸ್ಟ್‌ಗೆ ಜಿಂದಾಲ್ ಸ್ಟೀಲ್ ಕಂಪನಿ ಮತ್ತು ಆದರ್ಶ ಡೆವಲಪರ್ಸ್ ಸಂಸ್ಥೆಯವರು 27.18 ಕೋಟಿ ರೂ. ದೇಣಿಗೆ ನೀಡಿರುವುದು ನಿಜ. ಆದರೆ ಅನುಕೂಲ ಮಾಡಿಕೊಟ್ಟು ದೇಣಿಗೆ ಪಡೆಯಲಾಗಿದೆ ಎಂಬ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳ ಆರೋಪದಲ್ಲಿ ಹುರುಳಿಲ್ಲ."

- ಯಡಿಯೂರಪ್ಪ

"ಜೆಡಿಎಸ್‌ನ ಎಂ.ಸಿ. ನಾಣಯ್ಯನವರ ಸರಳ ಜೀವನದಿಂದ ನಾನು ಪ್ರೇರಣಗೊಂಡಿದ್ದೇನೆ. ಹೀಗಾಗಿ ಇನ್ನು ಮುಂದೆ ಗಣಿ ಉದ್ಯಮ ಬಿಟ್ಟು ಪೂರ್ಣ ಪ್ರಮಾಣದಲ್ಲಿ ರಾಜಕೀಯಕ್ಕೆ ಇಳಿಯುತ್ತೇನೆ. ಜನರ ಸೇವೆ ಮಾಡುತ್ತೇನೆ."

- ಜನಾರ್ದನ ರೆಡ್ಡಿ

ಇದು ಪರಂಪರೆಯನ್ನು ಕಾಯ್ದುಕೊಳ್ಳುವ ಬಗೆ!

"ಸಾಹತುಶಾಹಿಯ ಕಾರಣದಿಂದಾಗಿ ಭಾರತೀಯ ಮನಸ್ಸನ್ನು ಒಂದು ಮಹಾಮರೆವು ಕವಿದುಕೊಂಡು ನಾವು ಬಹುಮಟ್ಟಿಗೆ 'ಪಶ್ಚಿಮ ಬುದ್ಧಿ'ಯಾಗಿಬಿಟ್ಟೆವಲ್ಲಾ ಎಂಬ ಪಶ್ಚಾತ್ತಾಪವು ಇಂದಿನ ವಿಮರ್ಶೆಯ ಗಟ್ಟಿ ಧ್ವನಿಯಾಗಿದೆ. ಆದರೆ ದೇಶೀಯತೆ ಕೂಡಾ ಇಂದಿನ ಅಗತ್ಯಗಳಿಗೆ ಅನುಗುಣವಾದ ಹೊಸರೂಪಗಳಲ್ಲಿಯೇ ಮೂಡಿಬರಬೇಕಿದೆ. ಹಳೆಯದರ ಅಂಧಾನುಕರಣೆಯಾಗಿ ಅಲ್ಲ."

- ಜಿ.ಎಸ್. ಶಿವರುದ್ರಪ್ಪ

ಹಾಗಿದ್ದಲ್ಲಿ ರೈತ ಬದುಕಿನ ಭದ್ರತೆ?


"ಆಹಾರ ಭದ್ರತೆಯ ದೃಷ್ಟಿಯಿಂದ ದೇಶದ ರೈತ ಸಮುದಾಯ ಕೃಷಿಗೆ ಹೆಚ್ಚು ಒತ್ತು ನೀಡಬೇಕಿದ್ದು ಯಂತ್ರಗಳ ಮೂಲಕ ಬೇಸಾಯದಲ್ಲಿ ತೊಡಗಬೇಕಿದೆ."

- ಎಂ.ಎಂ. ಪಲ್ಲಂರಾಜು, ಕೇಂದ್ರ ಮಂತ್ರಿ

ಜಪಾನಿನಲ್ಲಿ ಆಗಿರುವ ಅಣುಸ್ಥಾವರ ಸ್ಫೋಟಗಳಿಂದ ಈಗಲಾದರೂ ಭಾರತ ಪಾಠ ಕಲಿಯಲೇ ಬೇಕು. ಜಾರಿಯಲ್ಲಿರುವ ಎಲ್ಲಾ ಅಣುಸ್ಥಾವರಗಳ ಮುನ್ನೆಚ್ಚರಿಕಾ ವ್ಯವಸ್ಥೆಯನ್ನು ಪುನರ್ ವಿಮರ್ಶೆಗೊಳಪಡಿಸಿ ಅಲ್ಲಿನ ಉತ್ಪಾದನೆಯನ್ನು ಈ ಕೂಡಲೇ ನಿಲ್ಲಿಸಬೇಕು. ಹೊಸದಾಗಿ ಸ್ಥಾಪನೆಗೊಳ್ಳಲಿರುವ ಎಲ್ಲಾ ಅಣುಸ್ಥಾವರದ ಯೋಜನೆಗಳನ್ನು ಈ ಕೂಡಲೇ ರದ್ದುಪಡಿಸಬೇಕು. ಅಮೆರಿಕದೊಂದಿಗೆ ಮಾಡಿಕೊಂಡಿರುವ Civil Liability Of Nuclear Damage Bill ಒಪ್ಪಂದವನ್ನೂ ಹಾಗೂ ನಾಗರಿಕ ಅಣುಶಕ್ತಿ ಯೋಜನೆಯ ಕ್ರಮಗಳನ್ನು ರದ್ದುಗೊಳಿಸಿ ಪರ್ಯಾಯ ಇಂಧನ ಮೂಲದ ಉತ್ತೇಜನಕ್ಕೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು.

ಜಪಾನ್ ದುರಂತ ಧರೆಗೆ ಬೆಂಕಿ ಹಚ್ಚಿರುವ ಅಣುಶಕ್ತಿ ಕಂಪನಿಗೆಳು

ಶಿವಸುಂದರ್ — ಚಾರ್ವಾಕ





ಅನುಮಾನವೇ ಬೇಡ. ಹೋದವಾರ ಜಪಾನ್‌ನಲ್ಲಿ ಸಂಭವಿಸಿದ 9.1 ಪ್ರಮಾಣದ ಭೂಕಂಪ ಮತ್ತು ಸುನಾಮಿಗಳಿಂದಾಗಿ ಏನಿಲ್ಲವೆಂದರೂ ಲಕ್ಷಕ್ಕೂ ಹೆಚ್ಚು ಜನ ಸತ್ತಿರುತ್ತಾರೆ. ಜಪಾನಿನ ಕರಾವಳಿಯ ಹಲವು ಗ್ರಾಮಗಳು ಮತ್ತು ಪಟ್ಟಣಗಳೇ ಮಾಯವಾಗಿವೆ ಎಂದಮೇಲೆ ಸತ್ತವರ ಸಂಖ್ಯೆ ಲೆಕ್ಕಕ್ಕೆ ಸಿಗದಂತಾಗಿದೆ. ಪದೇಪದೇ ಭೂಕಂಪದ ಅಪಾಯವನ್ನು ಎದುರಿಸುತ್ತಿರುವ ಜಪಾನ್, ತನ್ನ ಅನುಭವದಿಂದ ರೂಪಿಸಿಕೊಂಡ ಕ್ರಮಗಳಿಂದಾಗಿ ಮಾನವ ಅನಾಹುತದ ಪ್ರಮಾಣವನ್ನು ಕಡಿಮೆಯಾಗಿರಬಹುದು. ಆದರೆ ಈ ಭೂಕಂಪದ ಪರಿಯೇ ಎಚ್ಚಿತ್ತೆಂದರೆ ಇದನ್ನು ಎದುರಿಸುವ ಯಾವುದೇ ಕ್ರಮಗಳು ಸರ್ಕಾರದ ಬಳಿ ಮಾತ್ರವಲ್ಲ... ವಿಜ್ಞಾನದ ಬಳಿಯೂ ಇದ್ದಂತಿಲ್ಲ.

ಜಪಾನಿನಲ್ಲಿ ಸಂಭವಿಸಿರುವ ಭೂಕಂಪ ಈಗ ಕೇವಲ ಆ ದೇಶದ ಆಂತರಿಕ ಸಮಸ್ಯೆಯಾಗಿ ಉಳಿದಿಲ್ಲ. ಈ ಸುನಾಮಿಯಿಂದಾಗಿ ಜಪಾನಿನ ಫುಕುಶಿಮಾ ಪ್ರಾಂತ್ಯದಲ್ಲಿದ್ದ ನಾಲ್ಕು ಅಣುಸ್ಥಾವರಗಳು ಸ್ಫೋಟಗೊಂಡಿವೆ! ಅದರಿಂದ ಹೊರಸೂಸುತ್ತಿರುವ ವಿಕಿರಣದ ಪ್ರಮಾಣ ಮತ್ತು ಅದು ಹರಡುತ್ತಿರುವ ದಿಕ್ಕು ಇಡೀ ಭೂಮಂಡಲವನ್ನೇ ಹಿಂದೆಂದೂ ಇಲ್ಲದ ಅಪಾಯಕ್ಕೆ ತಳ್ಳಿವೆ. ವಾಸ್ತವವಾಗಿ ಈ ಅಣುಸ್ಥಾವರ ಸ್ಫೋಟವು 1945ರಲ್ಲಿ ಹಿರೋಷಿಮಾ–ನಾಗಸಾಕಿಯ ಮೇಲೆ ಅಮೆರಿಕ ಹಾಕಿದ ಅಣುಬಾಂಬ್‌ನಿಂದ ಉಂಟಾದ ಸ್ಫೋಟಗಳಿಗಿಂತ ಯಾವುದೇ ರೀತಿಯಲ್ಲೂ ಕಡಿಮೆಯಿಲ್ಲ. ಬಾಂಬ್ ದಾಳಿಯಿಂದ ತತ್‌ಕ್ಷಣದಲ್ಲಿ ಸತ್ತವರ ಸಂಖ್ಯೆ ಜಾಸ್ತಿಯಾಗಿದ್ದಿರಬಹುದು. ಆದರೆ ಆ ನಂತರದಲ್ಲಿ ಅಣುವಿಕಿರಣಗಳಿಗೆ ತುತ್ತಾಗಿ ಹಲವು ತಲೆಮಾರುಗಳು ಕಳೆದರೂ ಈಗಲೂ ಕೇಳರಿಯದ ಕಾಯಿಲೆಗಳಿಗೆ ತುತ್ತಾಗಿ ಸಾಯುತ್ತಾ ಸಾಯುತ್ತಾ ಬದುಕುತ್ತಿದ್ದಾರೆ. ಈಗ ಆಗಿರುವ ಅಣುಸ್ಥಾವರ ಸ್ಫೋಟದಿಂದಲೂ ಅದ್ರೊ ಬಗೆಯ ಆತಂಕ ಕೇವಲ ಜಪಾನನ್ನು ಮಾತ್ರವಲ್ಲದೆ ಇಡೀ ಜಗತ್ತನ್ನೇ ಆವರಿಸಿಕೊಂಡಿದೆ.

ವಾಸ್ತವವಾಗಿ ಕಳೆದ ಕೆಲವು ವರ್ಷಗಳಿಂದ ಅಣುಶಕ್ತಿ ಮಾತ್ರ "ಕ್ಲೀನ್ ಎನರ್ಜಿ" ಎಂದೂ, ಅದು ಮಾತ್ರ ಇಂಗಾಲ ಹೊರ ಸೂಸದ ಶಕ್ತಿ ಮೂಲವಾದ್ದರಿಂದ ಬರುವ ದಿನಗಳಲ್ಲಿ ಇಡೀ ಜಗತ್ತು ಅಣುಶಕ್ತಿಯನ್ನೇ ತಮ್ಮ ಇಂಧನ ಮೂಲ ಮಾಡಿಕೊಳ್ಳಬೇಕೆಂಬ ಪ್ರಚಾರವನ್ನೂ ಬಹಳ ದೊಡ್ಡರೀತಿಯಲ್ಲಿ ಅಣುಶಕ್ತಿ ಉದ್ಯಮಿಗಳು ಪ್ರಾರಂಭಿಸಿದ್ದಾರೆ. ಅದಕ್ಕೆ ಅಮೆರಿಕ, ಫ್ರಾನ್ಸ್‌ನಂಥಾ ಸಾಮ್ರಾಜ್ಯಶಾಹಿ ದೇಶಗಳು ಸಹ ಸಕಲ ಬೆಂಬಲ ಕೊಡುತ್ತಾ ಬಂದಿವೆ. ವಿರೋಧಿಸುವವರನ್ನು ರಾಜ್ಯಶಕ್ತಿ ಬಳಸಿ ಬಗ್ಗುಬಡಿಯುತ್ತಾ ಬಂದಿವೆ. ಈಗ ತಮ್ಮ ಅಣುಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ ಭಾರತದಂಥಾ ಬೃಹತ್ ಮಾರುಕಟ್ಟೆಯ ಮೇಲೆ ಕಣ್ಣುಹಾಕಿವೆ. ಇಲ್ಲಿನ ದಲ್ಲಾಳಿ ಸರ್ಕಾರಗಳು ಅವರ ಪುಂಗಿಗೆ ತಲೆದೂಗುತ್ತಿವೆ. ಆದರೆ ಅಣುಶಕ್ತಿ ಉತ್ಪಾದನೆಯಲ್ಲೇ ಆಂತರಿಕವಾಗಿ ಅವಘಡಗಳ ಸಾಧ್ಯತೆಗಳು ಅಡಕವಾಗಿವೆ ಹಾಗೂ ಅವನ್ನು ನಿಯಂತ್ರಿಸಬಲ್ಲ ತಂತ್ರಜ್ಞಾನವಿರಲಿ ವಿಜ್ಞಾನವೇ ಇನ್ನೂ ಬೆಳೆದಿಲ್ಲ. ಈ ಹಿನ್ನೆಲೆಯಲ್ಲಿ ಅಣುಸ್ಥಾವರಗಳು ಸಂಭವನೀಯ ಅಣುಬಾಂಬುಗಳೆ ಎಂದು ಜನಪರ ವಿಜ್ಞಾನಿಗಳು ಮತ್ತು ಕಾರ್ಯಕರ್ತರು ವಿರೋಧಿಸುತ್ತಾ ಬಂದಿದ್ದರೂ ಆ ಅಭಿಪ್ರಾಯವನ್ನು ಅಭಿವೃದ್ಧಿ ವಿರೋಧಿಯೆಂದು ಮಟ್ಟಹಾಕಲಾಯಿತು. ಅಣುಶಕ್ತಿಯ ಉತ್ಪಾದನಾ ವೆಚ್ಚ ಮತ್ತು ಭದ್ರತೆಯ ಬಗ್ಗೆ ಅಧಿಕೃತ ಸುಳ್ಳುಗಳನ್ನೇ ಹೇಳುತ್ತಾ ರಹಸ್ಯದ ಪರದೆಯ ಹಿಂದೆ ಕಾರ್ಯಾಚರಣೆಯನ್ನು ನಡೆಸುತ್ತಾ ಬರಲಾಯಿತು.

ಈಗ ಜಪಾನಿನಲ್ಲಿ ಒಂದಾದಮೇಲೆ ಒಂದರಂತೆ ಸ್ಫೋಟಗೊಳ್ಳುತ್ತಿರುವ ಅಣುಸ್ಥಾವರಗಳು ಈ ಸುಳ್ಳುಗಳನ್ನು ಸಹ ಒಂದಾದಮೇಲೊಂದರಂತೆ ಸ್ಫೋಟಗೊಳಿಸುತ್ತಿವೆ.

ಯಾವುದೇ ಅಣುಸ್ಥಾವರದಲ್ಲಿ ಕೋರ್ ಭಾಗದಲ್ಲಿ ಪರಮಾಣು ಇಂಧನಗಳು ಅಣು ವಿದಳನ ಪ್ರಕ್ರಿಯೆಯಲ್ಲಿ ಅಪಾರ ಶಾಖವನ್ನು ಮತ್ತು ವಿಕಿರಣ ಸೂಸುವ ತ್ಯಾಜ್ಯವನ್ನು ಹುಟ್ಟುಹಾಕುತ್ತವೆ. ಈ ಶಾಖದಿಂದ ನೀರನ್ನು ಕಾಯಿಸಿ ಅದರಿಂದ ಉತ್ಪಾದಿತವಾಗುವ ಉಗಿಶಕ್ತಿಯನ್ನು ಬಳಸಿಕೊಂಡು ಅಣುಸ್ಥಾವರಗಳು ಟರ್ಬೈನ್ ಅನ್ನು ತಿರುಗಿಸಿ ವಿದ್ಯುತ್ ಉತ್ಪಾದನೆ ಮಾಡುತ್ತವೆ. ಆದರೆ ಈ ಶಾಖದಿಂದ ಇಡೀ ಕೋರ್ ಭಾಗವೇ ಕರಗಿಹೋಗದಂತೆ ಸದಾ ಅದನ್ನು ತಣ್ಣಗಾಗಿಸಲು ಲಕ್ಷ ಲಕ್ಷ ಲೀಟರ್ ತಣ್ಣೀರನ್ನು ನಿರಂತರವಾಗಿ ಹರಿಸುತ್ತಲೇ ಇರಬೇಕು. ಒಂದು ವೇಳೆ ತಣ್ಣಗಾಗಿಸುವ ಪ್ರಕ್ರಿಯೆ ನಿಂತುಹೋದಲ್ಲಿ ಇಡೀ ಕೋರ್ ಭಾಗದಲ್ಲಿ ಅಪಾರ ಶಾಖ ಏರ್ಪಟ್ಟು ಸ್ಥಾವರದಲ್ಲಿ 5000 ಡಿಗ್ರಿಗಿಂತಲೂ ಹೆಚ್ಚಿನ ಶಾಖ ಉಂಟಾಗುತ್ತದೆ. ಈ ಶಾಖವನ್ನು ತಡೆಯದೆ ಸ್ಥಾವರದ ಸಿಮೆಂಟ್ ತಳಪಾಯವೂ ಸೇರಿದಂತೆ ಇಡೀ ಸ್ಥಾವರ ಸ್ಫೋಟಗೊಂಡು ವಿಕಿರಣ ತ್ಯಾಜ್ಯಗಳು ವಾತಾವರಣವನ್ನು ಸೇರಿಕೊಳ್ಳುತ್ತವೆ. ಆ ನಂತರದಲ್ಲಿ ಅವು 1945ರಲ್ಲಿ ಅಣುಬಾಂಬ್ ಸ್ಫೋಟದ ನಂತರದ ಜಪಾನಿನಲ್ಲಿ ಯಾವ ರೀತಿಯ ಅನಾಹುತಗಳನ್ನು ಸೃಷ್ಟಿಸಿತೋ ಅದೇ ಬಗೆಯ ಅನಾಹುತಗಳನ್ನು ಸೃಷ್ಟಿಸಲು ಪ್ರಾರಂಭಿಸುತ್ತವೆ. ಕ್ಯಾನ್ಸರ್, ಚರ್ಮದ ಕಾಯಿಲೆ, ಕಂಡರಿಯದ ರೀತಿಯಲ್ಲಿ ಮನುಷ್ಯ ಜೀನ್‌ಗಳ ಪರಿವರ್ತನೆ, ಕೇಳರಿಯದ ಕಾಯಿಲೆಗಳು, ಪತ್ತೆ ಹಚ್ಚಲಾಗದಷ್ಟು ವಿಕೃತಿಗಳು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಯುತ್ತಲೇ ಹೋಗುತ್ತವೆ.

ಇಂಥಾ ದುರಂತಗಳು 1978ರಿಂದಲೂ ಜಗತ್ತಿನಾದ್ಯಂತ ಸಂಭವಿಸುತ್ತಲೇ ಇವೆ. 1978ರಲ್ಲಿ ಅಮೆರಿಕದ ಥ್ರೀ ಮೈಲ್ ಐಲೆಂಡ್ ದುರಂತದಿಂದ ಮೊದಲುಗೊಂಡು ಪ್ರತಿವರ್ಷ ಸಣ್ಣ ಅಥವಾ ದೊಡ್ಡ ಪ್ರಮಾಣದ ಅವಘಡಗಳು ಜಗತ್ತಿನಾದ್ಯಂತ ಸಂಭವಿಸುತ್ತಲೇ ಇವೆ. ಆಗೆಲ್ಲಾ ಅದೊಂದು ಸಣ್ಣಪುಟ್ಟ ಪ್ರಮಾದದಿಂದ ಸಂಭವಿಸಿದ್ದು. ಈಗ ತಂತ್ರಜ್ಞಾನ ಎಷ್ಟು ಮುಂದುವರೆದಿದೆಯೆಂದರೆ ಅಣುಸ್ಥಾವರದಲ್ಲಿ ಅವಘಡಗಳು ಸಂಭವಿಸುವುದೇ ಇಲ್ಲ ಎಂದು ಜನರನ್ನು ನಂಬಿಸಲಾಯಿತು. ಆದರೆ 1986ರಲ್ಲಿ ರಷ್ಯಾದ ಚೆರ್ನೋಬಿಲ್‌ನಲ್ಲಿ ಅಣುಸ್ಥಾವರವೊಂದು ಯಾವ ವಿಜ್ಞಾನಿಗಳ ಅಂಕೆಗೂ ಸಿಗದಂತೆ ಸ್ಫೋಟಗೊಂಡು ಕಂಡುಕೇಳರಿಯದ ಮಾನವ ದುರಂತವನ್ನು ಹುಟ್ಟುಹಾಕಿತು. ಆದರೆ ಆಗಲೂ ಸರ್ಕಾರಗಳು ಇಲ್ಲಸಲ್ಲದ ಸುಳ್ಳುಗಳನ್ನು ಹೇಳಿ ಪ್ರಮಾದದ ಪ್ರಮಾಣವನ್ನು ಮುಚ್ಚಿಹಾಕಲು ಪ್ರಯತ್ನಿಸಿದವು. ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯ ಪ್ರಕಾರ ಈವರೆಗೆ ಚೆರ್ನೋಬಿಲ್ ದುರಂತದಿಂದ ಕೇವಲ 5000 ಜನರು ಸತ್ತಿದ್ದಾರಂತೆ! ಆದರೆ ಒಂದು ಸ್ವತಂತ್ರ ಅಧ್ಯಯನದ ಪ್ರಕಾರ 1986ರಿಂದ 2004ರವರೆಗೆ ಏನಿಲ್ಲವೆಂದರೂ 9,85,000 ಜನರು ರಷ್ಯಾ, ಉಕ್ರೇನ್, ಬೈಲೋರಷ್ಯಾ ದೇಶಗಳಲ್ಲಿ ಚೆರ್ನೋಬಿಲ್ ಸ್ಥಾವರ ಸ್ಫೋಟದ ದುರಂತದಿಂದಾಗಿ ಸಾವನ್ನಪ್ಪಿದ್ದಾರೆ. (Chernobyl: Consequences of the Catastrophe for People and the Environment, Dr. Alexey Yablokov, Dr. Vassily Nesterenko and Dr. Alexey Nesterenko).

ಈಗಲೂ ಜಪಾನ್‌ನಲ್ಲಿ ಅವಘಡ ಸಂಭವಿಸಿರುವಾಗಲೂ ಜಪಾನ್ ಸರ್ಕಾರ ಸತ್ತವರ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡಿ ತೋರಿಸಲು ಯತ್ನಿಸುತ್ತಿದೆ. ಅದಕ್ಕಿಂತ ಹೆಚ್ಚಾಗಿ ಈ ಅಣುಶಕ್ತಿ ಬಿಸಿನೆಸ್‌ನಲ್ಲಿ ಅತ್ಯಧಿಕ ಲಾಭ ಮಾಡುತ್ತಿರುವ General Electric (GE) ತರಹದ ಕಂಪನಿಗಳೆ ಮಾಡಿಕೊಂಡಿರುವ ನ್ಯೂಕ್ಲಿಯರ್ ಎನರ್ಜಿ ಇನ್‌ಸ್ಟಿಟ್ಯೂಟ್ (NEI) ಸಂಸ್ಥೆಯು ಸುನಾಮಿ ಸಂಭವಿಸಿ ವಿಕಿರಣ ಸೋರಿಕೆ ಪ್ರಾರಂಭವಾಗಿ ಎರಡು ದಿನಗಳು ಕಳೆದರೂ ಜಪಾನಿನಲ್ಲಿ ಯಾವುದೇ ಅಣುಸ್ಥಾವರಗಳಿಗೆ ಏನೂ ಅಪಾಯವಿಲ್ಲವೆಂದೂ, ಅಲ್ಲಿ ಇಂಥಾ ನೈಸರ್ಗಿಕ ಪ್ರಕೋಪಗಳನ್ನು ತಡೆದುಕೊಳ್ಳುವ ರೀತಿಯಲ್ಲೇ ಎಲ್ಲಾ ಸ್ಥಾವರಗಳನ್ನು ಕಟ್ಟಲಾಗಿದೆಯೆಂದು ಬೊಗಳೆ ಹೊಡೆಯುತ್ತಾ ಬಂದವು. ಈ ಬೊಗಳೆಯನ್ನೇ ಸರ್ಕಾರಿ ಸಂಸ್ಥೆಗಳು ಅಧಿಕೃತ ಸತ್ಯವೆಂದು ಜನರನ್ನು ನಂಬಿಸಲು ಯತ್ನಿಸಿದವು. ಹಾಗೆ ಅವರು ಹೇಳಿಕೆ ನೀಡಿದ ಮರುದಿನವೇ ಫುಕುಶಿಮಾದಲ್ಲಿ ಒಂದಾದ ನಂತರ ಒಂದರಂತೆ ನಾಲ್ಕು ಅಣುಸ್ಥಾವರಗಳು ಸ್ಫೋಟಗೊಂಡವು.

ಸುನಾಮಿ ಮತ್ತು ಭೂಕಂಪದ ಕಾರಣದಿಂದಾಗಿ ಸ್ಥಾವರದ ಕೋರ್ ಭಾಗಕ್ಕೆ ಸತತವಾಗಿ ತಣ್ಣೀರನ್ನು ಸರಬರಾಜು ಮಾಡುತ್ತಿದ್ದ ವ್ಯವಸ್ಥೆಯೇ ಫುಕುಶಿಮಾದಲ್ಲಿ ಸ್ತಬ್ಧಗೊಂಡಿತು. ಒಂದು ಕಡೆ ಅದನ್ನು ಪುನರ್‌ಯೋಜಿಸಲು ವಿದ್ಯುತ್ ಸರಬರಾಜೂ ಇರಲಿಲ್ಲ. ಮತ್ತೊಂದು ಕಡೆಯಲ್ಲಿ ಬ್ಯಾಟರಿ ಚಾಲಿತ ವ್ಯವಸ್ಥೆಯೂ ಭೂಕಂಪದ ಕಾರಣದಿಂದ ಕೆಟ್ಟುಕೂತಿತ್ತು. ಹೆಲಿಕಾಪ್ಟರ್ ಮೂಲಕ ತಣ್ಣೀರನ್ನು ಹಾಯಿಸುವ ಪ್ರಯತ್ನವೂ ಯಶಸ್ವಿಯಾಗಲಿಲ್ಲ. ಸಾರಾಂಶದಲ್ಲಿ ಇಂಥಾ ಸಾಧ್ಯತೆಗಳನ್ನು ಎದುರಿಸುವ ಸಿದ್ಧತೆ ಮತ್ತು ಸಾಮರ್ಥ್ಯವೇ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆಯಾದ ಜಪಾನ್‌ಗೆ ಇರಲಿಲ್ಲ!!

ಹೀಗಾಗಿ ಅಣುಸ್ಥಾವರಗಳು ಸ್ಫೋಟಗೊಂಡು ಈಗ ಅದರ ಆಸುಪಾಸಿನ 40 ಕಿಮಿ ವೃತ್ತದಲ್ಲಿರುವ ಎಲ್ಲಾ ಜನರನ್ನು ಎತ್ತಂಗಡಿ ಮಾಡುವ ವಿಫಲ ಪ್ರಯತ್ನವನ್ನು ಜಪಾನ್ ಸರ್ಕಾರ ಮಾಡುತ್ತಿದೆ. ಅದೂ ಸಾಧ್ಯವಾಗದೇ ಇರುವುದರಿಂದ ಜನರು ಮನೆ, ಆಫೀಸು ಎಲ್ಲೆಲ್ಲಿದ್ದಾರೋ ಅಲ್ಲಲ್ಲಿಯೇ ಇರಬೇಕೆಂದು ಹತಾಶ ಆದೇಶ ಹೊರಡಿಸಿದೆ.

ಅಷ್ಟು ಮಾತ್ರವಲ್ಲ ಅಣುಸ್ಥಾವರಗಳಿಂದ ಹೊರಸೂಸಲ್ಪಟ್ಟ ತ್ಯಾಜ್ಯಗಳನ್ನು ಒಂದು ಕಂಟೈನರ್‌ನಲ್ಲಿ ಹಾಕಿ ಒಟ್ಟಲಾಗಿದ್ದ ತ್ಯಾಜ್ಯಕೊಳಗಳಿಗೂ ಬೆಂಕಿ

▶▶ 15

ದುರಂತದ ನೆಪದಲ್ಲಿ ಸಿಕ್ಕ ಜಪಾನೀ ಗೆಳೆಯ ಶಿಫೆ!



• ಗೌರಿ ಲಂಕೇಶ್
editorlankesh@gmail.com

ಕಳೆದ ವಾರ ದೂರದ ಜಪಾನಿನಲ್ಲಿ ಭೂಕಂಪ, ಸುನಾಮಿ ಮತ್ತು ಅಣುಸ್ಥಾವರದಲ್ಲಿ ಸ್ಫೋಟ... ಹೀಗೆ ಒಂದರನಂತರ ಮತ್ತೊಂದು ಅನಾಹುತ ಸಂಭವಿಸಲಾರಂಭಿಸಿದಾಗ ನನಗೆ ನೆನಪಾಗಿದ್ದು ನನ್ನ ಜಪಾನಿನ ಮಿತ್ರ ಶಿಫೆಹಿಂಸ ಶಿಬಯಾಮ. 1993 ರಲ್ಲಿ ನಾನು ಫ್ರೆಂಚ್ ಸರ್ಕಾರದ ಸ್ಕಾಲರ್‌ಶಿಪ್ ಪಡೆದು ಒಂದು ವರ್ಷದ ಮಟ್ಟಿಗೆ 'ಜರ್ನಲಿಸ್ಟ್ ಇನ್ ಯೂರೋಪ್' (ಯೂರೋಪಿನಲ್ಲಿ ಪತ್ರಕರ್ತರು) ಎಂಬ ಪ್ಯಾರಿಸ್ಸಿನ ಸಂಸ್ಥೆಯಲ್ಲಿ ಅಧ್ಯಯನಕ್ಕೆ ಹೋಗಿದ್ದಾಗ ಪರಿಚಯವಾದವನೇ ಶಿಫೆ.

ಮೊನ್ನೆ ಆತನಿಗೆ ಫೇಸ್‌ಬುಕ್ ಮೂಲಕ ಒಂದು ಸಂದೇಶವನ್ನು ಕಳುಹಿಸಿ "ಹೇಗಿದ್ದೀಯಾ ಶಿಫೆ? ಜಪಾನಿನಲ್ಲಿ ಸಂಭವಿಸಿರುವ ಅನಾಹುತ ದಿಗ್ಭ್ರಮೆ ಹುಟ್ಟಿಸುವಂತಹದ್ದು. ನೀನು ಹುಷಾರಾಗಿದ್ದೀಯ ಎಂದು ಆಶಿಸುವೆ. ನಿನಗೆ ಸಾಧ್ಯವಾದಾಗ ಫೋನ್ ಮಾಡು" ಎಂದು ಹೇಳಿದ್ದೆ.

ಪ್ಯಾರಿಸ್‌ನಲ್ಲಿ ಆಗ ಅಧ್ಯಯನ ಮಾಡಲು ಸುಮಾರು 25 ಬೇರೆಬೇರೆ ದೇಶಗಳಿಂದ ಪತ್ರಕರ್ತರು ಸೇರಿದ್ದೆವು. ವಿವಿಧ ವರ್ಗ, ಸಂಸ್ಕೃತಿ, ಹಿನ್ನೆಲೆ, ಬಣ್ಣ, ಭಾಷೆ, ಆಸಕ್ತಿಗಳನ್ನು ಹೊಂದಿದ್ದ ನಮ್ಮಲ್ಲಿ ಕಷ್ಟಪಟ್ಟು ಹಣ ಸಂಗ್ರಹಿಸಿ ಬಂದವರು, ಸ್ಕಾಲರ್‌ಶಿಪ್ ಹಣದಲ್ಲೇ ಸ್ವಲ್ಪವನ್ನು ಉಳಿಸಿಕೊಂಡು ತನ್ನ ತಾಯಿನಾಡಿಗೆ ತೆಗೆದುಕೊಂಡು ಹೋಗಬೇಕೆಂದು ಬಯಸಿದ್ದವರು, ನನ್ನಂತೆ ಸಿಕ್ಕ ಅವಕಾಶಗಳನ್ನೆಲ್ಲ ಬಳಸಿ ಯೂರೋಪನ್ನು ಸುತ್ತಾಡಲೆಂದು ಕೈಯಲ್ಲಿದ್ದ ಹಣವನ್ನೆಲ್ಲ ಖರ್ಚು ಮಾಡಿ ತಿಂಗಳ ಕೊನೆಯಲ್ಲಿ ಬರಿಗೈ ದಾಸರಾಗುತ್ತಿದ್ದವರು... ಎಲ್ಲರೂ ಇದ್ದೆವು. ಆದರೆ ಈ ಶಿಫೆ ಮಾತ್ರ ಎಂದೂ ಹಣದ ಬಗ್ಗೆ ಚಿಂತಿಸಿದವನೇ ಅಲ್ಲ. ಅದಕ್ಕೆ ಕಾರಣ ಆತ ಜಪಾನಿನ ಶ್ರೀಮಂತ ಕುಟುಂಬದಿಂದ ಬಂದವನಾಗಿದ್ದ.


ಅರವತ್ತರ ದಶಕದಲ್ಲಿ ಜಪಾನ್ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆಯ ತೊಡಗಿದಾಗ, ಅಲ್ಲಿನ ಮನೆಗಳ ಬೆಲೆ ಏರಲಾರಂಭಿಸಿದಾಗ, ಅದಕ್ಕೆ ತಕ್ಕಂತೆ ನಗರಗಳಲ್ಲಿ ಸ್ಥಳಾಭಾವ



ಹೆಚ್ಚಾದಾಗ... ಇದೆಲ್ಲದರ ಲಾಭವನ್ನು ಪಡೆದವರೇ ಶಿಫೆಯ ತಂದೆ. ಒಮ್ಮೆ ಶಿಫೆ ನನಗೆ ಹೇಳಿದಂತೆ: "ಜಪಾನಿನಲ್ಲಿ ಫ್ಲ್ಯಾಟ್‌ಗಳ ಗಾತ್ರ ಕಿರಿದಾಗುತ್ತಾ ಹೋಯಿತು. ಆಗ ಸಾಂಪ್ರದಾಯಿಕವಾಗಿ ನಮ್ಮ ಮನೆಗಳಲ್ಲಿರುತ್ತಿದ್ದ ಪೂಜಾ ಕೊಠಡಿಗೆ ಜಾಗವಿಲ್ಲದಂತಾಯಿತು. ಆಗ ನನ್ನ ಅಪ್ಪ ಆಧುನಿಕ ಫ್ಲ್ಯಾಟ್‌ಗಳಿಗೆ ಸೂಕ್ತವಾದ ಪೂಜಾ ಮಂಟಪಗಳನ್ನು ತಯಾರಿಸಲಾರಂಭಿಸಿದರು. ಅವು ಭಾರಿ ಜನಪ್ರಿಯವಾಗಿ ನಮ್ಮ ಕುಟುಂಬ ಹೆಚ್ಚು ಆದಾಯ ಗಳಿಸಿತು."

ಎಷ್ಟು ಆದಾಯವೆಂದರೆ ನಾವೆಲ್ಲ ಹಾಸ್ಟೆಲ್‌ಗಳ ರೂಮ್‌ಗಳಲ್ಲೋ, ಯಾವುದೋ ಪುಟ್ಟ ಬಡಾವಣೆಯ ಚಿಕ್ಕ ಮನೆಗಳಲ್ಲೋ ವಾಸಿಸುತ್ತಿದ್ದರೆ ಶಿಫೆ ಮತ್ತು ಆತನ ಜಪಾನಿ ಪತ್ನಿ ಪ್ಯಾರಿಸ್‌ನ ಐತಿಹಾಸಿಕ ಆರ್ಕ್ ದೆ ತ್ರಿಯುಂಫ್ ಇರುವ, ದೊಡ್ಡ ಶ್ರೀಮಂತರು ವಾಸಿಸುವ ಬಡಾವಣೆಯಲ್ಲಿ ಒಂದು ಫ್ಲ್ಯಾಟ್ ಅನ್ನು ಬಾಡಿಗೆಗೆ ಹಿಡಿದಿದ್ದರು.

ಆಗಾಗ್ಗೆ ಶಿಫೆ ನಮ್ಮನ್ನೆಲ್ಲ ತನ್ನ ಮನೆಗೆ ಆಹ್ವಾನಿಸುತ್ತಿದ್ದ. ಆಗೆಲ್ಲ ಬೇರೆ ಯುವಕರು ಎಚ್ಚರ ವಹಿಸುತ್ತಿದ್ದರು. ಯಾಕೆಂದರೆ ಜಪಾನಿ ಸಂಪ್ರದಾಯದ ಪ್ರಕಾರ ನಾವು ನಮ್ಮ ಪಾದರಕ್ಷೆಗಳನ್ನು ಹೊರಗೆ ಬಿಟ್ಟು ಶಿಫೆಯ ಮನೆಯನ್ನು ಪ್ರವೇಶಿಸಬೇಕಿತ್ತು. ಆ ಕಾರಣಕ್ಕೆ ಇತರರು "ಇವತ್ತು ಕ್ಲೀನ್ ಸಾಕ್ಸ್/ ತೂತು ಇಲ್ಲದ ಸಾಕ್ಸ್ ಹಾಕಿಕೊಂಡು ಬರಬೇಕು" ಎಂದು ತಮಾಷೆ ಮಾಡುತ್ತಿದ್ದರು. ಸಾಮಾನ್ಯವಾಗಿ ನಾವೆಲ್ಲ ಜೊತೆಗೂಡಿದಾಗ ಎಲ್ಲರೂ ಏನನ್ನಾದರೂ ಅಡುಗೆ ಮಾಡಿಕೊಂಡು ಬರುತ್ತಿದ್ದೆವು. ಅದನ್ನೇ ಎಲ್ಲರೂ ಹಂಚಿಕೊಂಡು ತಿನ್ನುತ್ತಿದ್ದೆವು. ಆದರೆ ಶಿಫೆಯ ಮನೆಗೆ ಬರಿಗೈಲಿ ಹೋಗುತ್ತಿದ್ದೆವು. ಯಾಕೆಂದರೆ ಆತನ ಹೆಂಡತಿಯೇ ನಮಗೆಲ್ಲ ಅಡುಗೆ ಮಾಡುತ್ತಿದ್ದಳು. ಶಿಫೆಯ ಪತ್ನಿ ಪಕ್ಕಾ ಸಂಪ್ರದಾಯಸ್ಥ ಮಹಿಳೆ. ತನ್ನ ಗಂಡನ ಸೇವೆಯೇ ತನ್ನ ಬದುಕಿನ ಗುರಿ ಎಂದು ನಂಬಿದ್ದಾಕೆ. ಇದೆಲ್ಲಕ್ಕಿಂತ ಮುಖ್ಯವಾಗಿ ಆಕೆಗೆ ಜಪಾನಿ ಭಾಷೆ ಬಿಟ್ಟರೆ ಬೇರೆ ಯಾವ ಭಾಷೆಯೂ ಬರುತ್ತಿರಲಿಲ್ಲವಾದ್ದರಿಂದ ಆಕೆ ನಮಗ್ಯಾರಿಗೂ ಅಷ್ಟು ಹತ್ತಿರವಾಗಲೇ ಇಲ್ಲ.



ಆದರೆ ಶಿಫೆ ಆಧುನಿಕ ಸ್ನೇಹಮಯಿ ಯುವಕನಾಗಿದ್ದ. ಆರಂಭದಲ್ಲಿ ಆತನ ಇಂಗ್ಲಿಷ್ ನನಗೆ ಸುಲಭವಾಗಿ ಅರ್ಥವಾಗುತ್ತಿರಲಿಲ್ಲವಾದರೂ ಸ್ವಲ್ಪ ಸಮಯದಲ್ಲಿ ರೂಢಿಯಾಯಿತು. ಜಪಾನಿನ ಸಂಸ್ಕೃತಿ ಮತ್ತು ಆರ್ಥಿಕಶಕ್ತಿಯ ಬಗ್ಗೆ ಅಪಾರ ಹೆಮ್ಮೆ ಹೊಂದಿದ್ದ ಶಿಫೆ.

ನನ್ನ ಸಂದೇಶವನ್ನು ನೋಡಿ ಇವತ್ತು (ಗುರುವಾರ) ಶಿಫೆ ಫೋನ್ ಮಾಡಿದ. ಈಗ ಆತ ಜಪಾನಿನ ರಾಜಧಾನಿ ಟೋಕಿಯೋದಲ್ಲಿ ನಿಕ್ಕೈ ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಾನೆ. "ನಾನು ಚೆನ್ನಾಗಿದ್ದೇನೆ ಗೌರಿ. ನನಗೇನೂ ಆಗಿಲ್ಲ. ಟೋಕಿಯೋದಲ್ಲಿ ಬರೀ ಭೂಕಂಪ ಆಯಿತಷ್ಟೇ. ಹೆಚ್ಚು ಅನಾಹುತ ಆಗಿರುವುದು ಉತ್ತರ ಜಪಾನಿನಲ್ಲಾದ್ದರಿಂದ ನಮಗೆ ಇಲ್ಲಿ ಅಷ್ಟೇನು ತೊಂದರೆ ಆಗಿಲ್ಲ. ಭೂಕಂಪದಿಂದಾಗಿ ಟೋಕಿಯೋದಲ್ಲಿ ರೈಲು ಮತ್ತು ವಿದ್ಯುತ್ ಸಂಪರ್ಕ ಬಂದ್ ಆಗಿತ್ತು. ಆದ್ದರಿಂದ ಇವತ್ತಿನವರೆಗೂ ನಮ್ಮ ಪತ್ರಿಕೆ ಪ್ರಿಂಟ್ ಆಗಿರಲಿಲ್ಲ. ಆದರೆ ನಾವು ಎಲ್ಲ ಮಾಹಿತಿಯನ್ನು ಇಂಟರ್‌ನೆಟ್‌ನಲ್ಲಿ ಪ್ರಕಟಿಸುತ್ತಿದ್ದೆವು. ಇವತ್ತಿನಿಂದ ನಮ್ಮ ಪತ್ರಿಕೆ ಮತ್ತೆ ಪ್ರಿಂಟ್ ಆಗುತ್ತಿದೆ" ಎಂದ.

"ಭೂಕಂಪ ಸಂಭವಿಸಿದಾಗ ನೀನು ಏನು ಮಾಡುತ್ತಿದ್ದೆ?" ಎಂದೆ.

"ಮಧ್ಯಾಹ್ನದ ಊಟಕ್ಕೆಂದು ಹೋಟೆಲ್ ಒಂದಕ್ಕೆ ಹೋಗಿದ್ದೆ. ಇನ್ನೇನು ನಾನು ಹೋಟೆಲ್ ಅನ್ನು ಪ್ರವೇಶಿಸಬೇಕು ಎನ್ನುವಾಗ ಭೂಮಿ ಜೋರಾಗಿ ನಡುಗಿತು. ಆಗ ಹೋಟೆಲ್‌ನಲ್ಲಿದ್ದ ಜನರೆಲ್ಲ ಹೊರಗಡೆಗೆ ಓಡಿದರು. ನಾನು ತಕ್ಷಣ ಅಲ್ಲಿಂದ ನನ್ನ ಆಫೀಸಿನತ್ತ ಹೊರಟೆ. ಆ ಭೂಕಂಪದಿಂದಾಗಿ ವಿದ್ಯುತ್ ಇರಲಿಲ್ಲವಾದ್ದರಿಂದ ನಾನು ನಮ್ಮ ಆಫೀಸಿರುವ 21ನೇ ಮಹಡಿಗೆ ಹತ್ತಿಕೊಂಡು ಬರಬೇಕಾಯಿತು" ಅಂದ.

"ಅಲ್ಲಾ, ಭೂಕಂಪ ಆದಾಗ ಸಾಮಾನ್ಯವಾಗಿ ಜನ ಕಟ್ಟಡಗಳಿಂದ ಹೊರಗೆ ಹೋಗುತ್ತಾರೆ. ಆದರೆ ನೀನು ಒಳಗೆ ಹೋದೆ ಅನ್ನುತ್ತೀಯಲ್ಲಾ?" ಅಂದೆ ನಾನು.

"ಕರ್ತವ್ಯನಿಷ್ಠೆ. ಹ, ಹ, ಹಾ" ಎಂದು ಜೋರಾಗಿ ನಕ್ಕ ಶಿಫೆ.

"ಇಂತಹ ದೊಡ್ಡ ಅನಾಹುತ ಸಂಭವಿಸಿ ಜಪಾನಿಯರು ತಮ್ಮ ಆಪ್ತರನ್ನು, ಮನೆಗಳನ್ನು ಕಳೆದುಕೊಂಡಿದ್ದರೂ ಗಾಬರಿಗೊಳ್ಳದೆ ಶಿಸ್ತಿನಿಂದ ವರ್ತಿಸುತ್ತಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಇಂಟರ್‌ನೆಟ್‌ನಲ್ಲಿ ಓದುತ್ತಿದ್ದೇನೆ. ಒಂದು ಸಮುದಾಯಕ್ಕೆ ಇಂತಹ ತಾಳ್ಮೆ ಅದು ಹೇಗೆ ಸಾಧ್ಯವಾಗಿದೆ?" ಎಂದು ಕೇಳಿದೆ.

"ನಮ್ಮ ಜನ ಬೇಗನೆ ಆತಂಕಗೊಳ್ಳುವುದಿಲ್ಲ. ಅಲ್ಲದೆ ನಮ್ಮ ಸಂಪ್ರದಾಯ ಎಂತಹದ್ದೆಂದರೆ ಮೊದಲು ಇತರರಿಗೆ ನೆರವಾಗುವುದು. ಅಷ್ಟೇ ಅಲ್ಲ, ನಮ್ಮ ದೇಶ ಕಂಡಿರುವ ಅತಿ ದೊಡ್ಡ ದುರಂತ ಇದಾಗಿದ್ದರೂ ಇಂತಹ ಅನಾಹುತಗಳು ನಮಗೆ ಹೊಸದಲ್ಲ. ಚಿಕ್ಕವರಿದ್ದಾಗಿನಿಂದಲೇ ಭೂಕಂಪಿಸಿದರೆ ಏನು ಮಾಡಬೇಕೆಂದು ನಮಗೆ ಹೇಳಿಕೊಟ್ಟಿರುತ್ತಾರೆ. ನಮ್ಮಲ್ಲಿ ಈಗ ಹೆಚ್ಚು ಆತಂಕ ಉಂಟುಮಾಡಿರುವುದು ಭೂಕಂಪನವೂ ಅಲ್ಲ, ಸುನಾಮಿಯೂ ಅಲ್ಲ, ಬದಲಾಗಿ ಅಣುಸ್ಥಾವರದಲ್ಲಾಗುತ್ತಿರುವ ಸೋರುವಿಕೆ. ಇದು ನಮಗೆ ಹೊಸದು" ಎಂದ ಶಿಫೆ.

"ಈಗ ಪರಿಸ್ಥಿತಿ ಹೇಗಿದೆ?"

"ಇವತ್ತು ಸೋರಿಕೆ ಆಗಿಲ್ಲ. ಸದ್ಯದಲ್ಲೇ ಪರಿಸ್ಥಿತಿಯನ್ನು ಹತೋಟಿಗೆ ತರಲಾಗುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಅದರಲ್ಲಿ ನಮಗೆ ನಂಬಿಕೆಯೂ ಇದೆ. ಸರಳವಾಗಿ ಹೇಳುವುದಾದರೆ ನಿನ್ನೆ ಆತಂಕವಿತ್ತು, ಇವತ್ತು ಸ್ವಲ್ಪ ನೆಮ್ಮದಿ ಇದೆ, ನಾಳೆ ಎಲ್ಲವೂ ಸರಿಹೋಗಬಹುದು ಎಂಬ ಆಶೆ ಕಾಣಿಸುತ್ತಿದೆ" ಎಂದು ಶಿಫೆ ಹೇಳಿದಾಗ ಜಪಾನಿಯರ ಆತ್ಮಸ್ಥೈರ್ಯದ ಬಗ್ಗೆ ಮತ್ತೆ ಮೆಚ್ಚುಗೆ ಹುಟ್ಟಿತು.

"ಜಪಾನಿನಲ್ಲಾಗುತ್ತಿರುವ ವಿದ್ಯಮಾನಗಳಿಂದಾಗಿ ಅಣುಸ್ಥಾವರಗಳ ಸುರಕ್ಷತೆ ಬಗ್ಗೆ ಇಲ್ಲೂ ಚರ್ಚೆಗಳು ನಡೆಯುತ್ತಿವೆ. ನನಗೆ ಗೊತ್ತಿರುವ ಪ್ರಕಾರ ಒಮ್ಮೆ ಜನಾಭಿಪ್ರಾಯವನ್ನು ಸಂಗ್ರಹಿಸಿದಾಗ ಶೇ.60 ಜಪಾನಿಯರು ಅಣುಸ್ಥಾವರಗಳನ್ನು ವಿರೋಧಿಸಿದ್ದರು. ಆದರೂ ಜಪಾನಿ ಸರ್ಕಾರ ಅವುಗಳನ್ನು ಸ್ಥಾಪಿಸಿತ್ತು. ಈಗ ಜನರು ತಮ್ಮ ನಿಲುವು ಸರಿಯಾಗಿತ್ತು ಎಂದು ಹೇಳುತ್ತಿದ್ದಾರ?" ಎಂದು ಕೇಳಿದೆ.

"ಸದ್ಯಕ್ಕೆ ಹೆಚ್ಚಿನ ಜನ ಅದರತ್ತ ಗಮನ ಕೊಡುತ್ತಿಲ್ಲ. ಬದಲಾಗಿ ಸೋರುವಿಕೆಯನ್ನು ತಡೆಯುವುದರ ಬಗ್ಗೆ ಹೆಚ್ಚು ಚಿಂತನೆ ನಡೆಯುತ್ತಿದೆ. ಆದರೆ ಒಂದಂತೂ ನಿಜ. ನಮ್ಮ ಸರ್ಕಾರ ಇಲ್ಲಿಯತನಕ ಭೂಕಂಪಿಸಿದರೂ ಅಣುಸ್ಥಾವರಗಳು ಸುರಕ್ಷಿತವಾಗಿರುತ್ತವೆ ಎಂದೇ ಹೇಳುತ್ತಾ ಬಂದಿತ್ತು. ಆದರೆ ಅದು ನಿಜವಲ್ಲ ಎಂದು ಈಗ ಸಾಬೀತಾಗಿದೆ. ತಂತ್ರಜ್ಞಾನ ಎಷ್ಟೇ ಆಧುನಿಕಗೊಂಡರೂ ಪ್ರಕೃತಿ ಅದಕ್ಕಿಂತ ಹೆಚ್ಚು ಶಕ್ತಿಶಾಲಿಯಾಗಿದೆ ಎಂದು ಮತ್ತೊಮ್ಮೆ ಗೊತ್ತಾಗಿದೆ. ಇದೆಲ್ಲ ತಹಬದಿಗೆ ಬಂದ ನಂತರ ಅಣುಸ್ಥಾವರಗಳ ಸುರಕ್ಷತೆ ಬಗ್ಗೆ ಖಂಡಿತಾ ಚರ್ಚೆಗಳು ನಡೆಯುತ್ತವೆ" ಎಂದ ಶಿಫೆ.

"ಜಗತ್ತಿನಲ್ಲೇ ಅಣುಬಾಂಬ್‌ನಿಂದಾಗುವ ಅನಾಹುತವನ್ನು ಹಿರೋಶಿಮಾ ಮತ್ತು ನಾಗಾಸಾಕಿಯಲ್ಲಿ ಅನುಭವಿಸಿದ್ದು ಜಪಾನ್. ಜೊತೆಗೆ ಸಾವಿರಾರು ವರ್ಷಗಳಿಂದ ಭೂಕಂಪನದಿಂದ ತತ್ತರಿಸಿರುವ ದೇಶವೂ ಜಪಾನ್. ಈ ಹಿನ್ನೆಲೆಯಲ್ಲಿ ಅಣುಸ್ಥಾವರಗಳ ಬಗ್ಗೆ ಜನರಿಗೆ ಅನುಮಾನಗಳು ಇರಲಿಲ್ಲವೇ?"

"ಜಪಾನಿಯರು ತಂತ್ರಜ್ಞಾನ ಪ್ರಿಯರು. ಜೊತೆಗೆ, ನಾವು ಅಣುಶಕ್ತಿಯನ್ನು ಬಾಂಬ್‌ನಂತಹ ವಿನಾಶಕಾರಿ ಉದ್ದೇಶಕ್ಕೆ ಬಳಸದೇ ದೇಶದ ಪ್ರಗತಿಗೆ ಉಪಯೋಗಿಸುತ್ತಿದ್ದೇವೆ ಎಂಬ ಭಾವನೆ ಇದ್ದುದರಿಂದ ಅದರತ್ತ ಹೆಚ್ಚು ಗಮನ ಕೊಡಲಿಲ್ಲ ಅನ್ನಿಸುತ್ತದೆ. ಈಗ ಪರಿಸ್ಥಿತಿಯೇ ಬೇರೆಯದ್ದಾಗಿದೆ. ನೋಡೋಣ ಮುಂದೆ ಏನಾಗುತ್ತದೆಂದು" ಎಂದ ವಿವರಿಸಿದ ಶಿಫೆ.

ಇಷ್ಟೆಲ್ಲ ಮಾತನಾಡುವ ಹೊತ್ತಿಗೆ ಶಿಫೆಗೆ ಮತ್ತೊಂದು ಕರೆ ಬಂತು. ಹಲವಾರು ವರ್ಷಗಳ ನಂತರ ಒಂದು ದುರಂತದಿಂದಾಗಿ ಶಿಫೆಯನ್ನು ಹೀಗೆ ಮಾತನಾಡಿಸಿದ್ದಾಯಿತು. ಇಬ್ಬರೂ ಕೆಲಸದ ಒತ್ತಡದಲ್ಲಿದ್ದರಿಂದ ಇಮೇಲ್ ಮತ್ತು ಫೇಸ್‌ಬುಕ್ ಮೂಲಕ ಸಂಪರ್ಕದಲ್ಲಿರೋಣ ಎಂದು ಪರಸ್ಪರ ಹೇಳಿಕೊಂಡು ನಮ್ಮ ಸಂಭಾಷಣೆಯನ್ನು ಅಂತ್ಯಗೊಳಿಸಿದೆವು.


ಬಹಳ ಹಿಂದೆ ಜಪಾನ್ ಕೂಡ ಸಾಮ್ರಾಜ್ಯಶಾಹಿ ಧೋರಣೆಯನ್ನು ಹೊಂದಿದ್ದು ಕೊರಿಯಾದಂತಹ ದೇಶಗಳ ಮೇಲೆ ದಾಳಿ ಇಟ್ಟು ಅಪಾರ ಕ್ರೌರ್ಯವನ್ನು ಮೆರೆದಿತ್ತು. ಆದರೆ ಎರಡನೆ ಮಹಾಯುದ್ಧವಾದ ನಂತರ ಜಪಾನ್ ತನ್ನ ಪಾಡಿಗೆ ತಾನೆಂಬಂತೆ ಇರಲಾರಂಭಿಸಿತು. ಕಷ್ಟಪಟ್ಟು ದುಡಿಯುವ, ತಮ್ಮ ದೇಶವನ್ನು ಅಭಿವೃದ್ಧಿಪಡಿಸಬೇಕೆಂದು ಶ್ರಮಿಸುವ, ಎಂತಹ ಅಪಘಾತದಲ್ಲೂ ಧೃತಿಗೆಡದ ಜನ ಜಪಾನಿಯರು. ಅವರು ಈ ಭೂಕಂಪ, ಸುನಾಮಿ ಮತ್ತು ಅಣುಸ್ಥಾವರದ ಸೋರಿಕೆಯನ್ನೂ ದಿಟ್ಟವಾಗಿ ಎದುರಿಸಿ ತಮ್ಮ ದೇಶವನ್ನು ಮತ್ತೇ ನಿರ್ಮಿಸಬಲ್ಲ ಜನ.

ಈ ಅಂಕಣವನ್ನು ಹೇಗೆ ಅಂತ್ಯಗೊಳಿಸಲು ಎಂದು ಯೋಚಿಸುತ್ತಿದ್ದಾಗ ನೆನಪಾಗಿದ್ದು ಅಪ್ಪ 1991ರಲ್ಲಿ ಬರೆದಿದ್ದ 'ಹೂವುಗಳ ರಾಶಿ... ಬೆಂಕಿಯ ಕೆಂಡ...' ಎಂಬ ಲೇಖನ. ಆ ಲೇಖನದ ಕೊನೆಯ ಪ್ಯಾರಾವನ್ನು ಇಲ್ಲಿ ನೀಡುತ್ತಿದ್ದೇನೆ.

ನಶ್ವರ ಜೀವನದ ಬಗ್ಗೆ ಚಿಂತಿಸುತ್ತಲೇ ಬೃಹತ್ ರಾಷ್ಟ್ರವನ್ನು ಕಟ್ಟಿರುವ ಜಪಾನೀಯರು ಚೈನಾದಿಂದ ಭಾಷೆ, ಲಿಪಿ, ಬೌದ್ಧ ಧರ್ಮ, ಝೆನ್ ಸಿದ್ಧಾಂತ- ಎಲ್ಲವನ್ನೂ ತಂದು ತಮ್ಮವನ್ನಾಗಿಸಿ ಬೆಳೆಸಿದರು. ಗುಡ್ಡದಿಂದ ಮರ ತಂದು ಪುಟ್ಟ ಮರವಾಗಿ ಸಲಹಿದರು. ಭಾಷೆ, ಧರ್ಮದೊಂದಿಗೆ ಚೈನಾದಿಂದ ತಂದ ಚಹಾವನ್ನು ಸಾಂಸ್ಕೃತಿಕ ಆಚರಣೆಯ ಮಟ್ಟಕ್ಕೆ ಏರಿಸಿದರು. ವೇಶ್ಯೆಯನ್ನು ಸುಸಂಸ್ಕೃತ ಮಹಿಳೆಯಾಗಿ ಬೆಳೆಸಿ ಗೀಶಾ ಮಾಡಿದರು. ಹಾಗೆಯೇ ಅಂತರಂಗ ಮತ್ತು ಬಹಿರಂಗವನ್ನು ಕಂಡುಕೊಂಡು ಕಾವ್ಯ ರಚಿಸಿದರು. ಹುಡುಗನ ಪದ್ಯ ಸರಿ ಇಲ್ಲದಿದ್ದರೆ, ಹಸ್ತಾಕ್ಷರ ಒರಟಾಗಿದ್ದರೆ ಆತನ ವ್ಯಕ್ತಿತ್ವವನ್ನು ಕೂಡ ಅನುಮಾನಿಸುವ ಜಪಾನೀ ಹುಡುಗಿ- ತನ್ನ ಕೀಳುಕಣ್ಣಿನಿಂದ ನೆಲ ನೋಡುತ್ತಾ ಗೊಣಗುತ್ತಾಳೆ-

ವಸಂತ ಮತ್ತು ಕೋಗಿಲೆ-
ಅಳುತ್ತಿರುವ ಮಗು;
ಕಾಣದ ಚೆರ್‍ರಿ ಹೂ.

ಮೈಸೂರು ಜೈಲು ಶೂಟೌಟ್ ರಿವಾಲ್ವರ್ ಬಂದದ್ದು ಎಲ್ಲಿಂದ?




ಅತ್ತ ಮೈಸೂರು ಜೈಲಲ್ಲಿ ಚಿತ್ತನಗೆರೆ ಸೀನನಿಗೆ ಗುಂಡು ಬಿತ್ತೆಂಬ ಸುದ್ದಿ ಹೊರಬಿದ್ದ ಮರುಕ್ಷಣಕ್ಕೇ ನೆಲಮಂಗಲದಲ್ಲಿ ಹಟ್ಟಿ ಮಂಜನ ಮನೆ ಮೇಲೆ ದಾಳಿ ನಡೆದಿದೆ. ಜೆಡಿಎಸ್ ನಾಯಕ ಬಿನ್ನಮಂಗಲ ಕೃಷ್ಣಪ್ಪ ಊರು ಬಿಟ್ಟೇ ಪರಾರಿಯಾಗಿದ್ದಾನೆ. ಶಂಕ್ರನ ಹುಡುಗರ್‍ಯಾರು ಗೂಡು ಬಿಟ್ಟು ಬರುತ್ತಿಲ್ಲ. ನೆಲಮಂಗಲ ಸದ್ಯ ಸ್ಮಶಾನ ಸದೃಶ.

ಚಿತ್ತನಗೆರೆ ಸೀನ ಬಚಾವಾಗಿದ್ದಾನೆ. ಮೈಸೂರು ಜೈಲಲ್ಲಿ ಟಿಬೆಟ್ ಆಲಿಯಾಸ್ ಬಾಲಾಜಿ ಎಂಬ ಹಳೇ ಪಾತಕಿ ಹಾರಿಸಿದ ಗುಂಡು ಗುರಿ ತಪ್ಪಿದೆ. ಅಂಗೈಗೆ ಒಂದು ಪಕ್ಕೆಗೆ ಮತ್ತೊಂದು ಗುಂಡೇಟು ತಿಂದು ಆಸ್ಪತ್ರೆಯಲ್ಲಿ ನರಳುತ್ತಿರುವ ಚಿತ್ತನಗೆರೆ ಶಂಕ್ರನ ಪಾಲಿಗೆ ಯಾವ ಜೈಲೂ ಸೇಫಲ್ಲ. ಮೊದಲು ಬಳ್ಳಾರಿ ಜೈಲಲ್ಲಿ ಹತ್ಯಾಯತ್ನವಾಯಿತು. ನಂತರ ಗುಲ್ಬರ್ಗಾ ಜೈಲಲ್ಲೇ ಕೊಲ್ಲಲು ತಯಾರಿ ನಡೆದಿತ್ತು. ತನ್ನ ಪ್ರಾಣ ಉಳಿಸಿಕೊಳ್ಳಲೆಂದು ಮೈಸೂರು ಜೈಲಿಗೆ ಬಂದರೆ ಹಟ್ಟಿ ಮಂಜನ ಕೈ ಇಲ್ಲಿಗೂ ಬೆನ್ನತ್ತಿ ಬಂದಿದೆ. ನೆಲಮಂಗಲದ ಹಂತಕ ರಕ್ತ ದಾಹಕ್ಕಿದು ಸಣ್ಣ ಸ್ಯಾಂಪಲ್ಲಷ್ಟೇ.

ಒಂದೋ ಚಿತ್ತನಗೆರೆ ಸೀನ ಅಥವಾ ಚಿತ್ತನಗೆರೆ ಶಂಕ್ರ ಇಬ್ಬರ ಪೈಕಿ ಯಾರಾದರೂ ಒಬ್ಬರ ತಲೆ ಉರುಳುವ ತನಕ ಜಿದ್ದಾಜಿದ್ದಿ ತಣಿಯುವುದಿಲ್ಲ.

ಮೈಸೂರು ಜೈಲು ತನಗೆ ಅತ್ಯಂತ ಸುರಕ್ಷಿತವೆಂದೇ ಲೆಕ್ಕಹಾಕಿದ ಸೀನ ತನ್ನ ಜೊತೆ ನಾಲ್ವರು ಹೋಮ್‌ಗಾರ್ಡುಗಳನ್ನಿಟ್ಟುಕೊಂಡಿದ್ದ. ಇನ್ನೂ ನಾಲ್ವರು ಸಜಾ ಕೈದಿಗಳನ್ನು ಸದಾ ಜೊತೆಗಿಟ್ಟುಕೊಂಡಿರುತ್ತಿದ್ದ. ಮಾರ್ಚ್ 10 ರ ಗುರುವಾರ ಮಧ್ಯಾಹ್ನವೂ ಇದೇ ಹುಷಾರಿನಿಂದ ಸಂದರ್ಶನ ಕೋಣೆಗೆ ಬಂದ. ತನ್ನ ಶಿಷ್ಯ ಹತ್ತು ಕುಂಟೆ ಪಾಳ್ಯದ ರಾಜನ ಜೊತೆ ಏನನ್ನೋ ಚರ್ಚಿಸಿ ಇನ್ನೇನು ಜೈಲೊಳಗಿದ್ದ ಟೆಲಿಫೋನ್ ಬೂತಿನತ್ತ ಬರಬೇಕು. ಅಷ್ಟರಲ್ಲೇ ಹಿಂಬಾಲಿಸಿ ಬಂದ ಬಾಲಾಜಿ ಗುಂಡು ಹಾರಿಸಿಬಿಟ್ಟ.



ಹಟ್ಟಿ ಮಂಜ

ಸೀನನ ಆಯುಸ್ಸಿನ್ನೂ ಗಟ್ಟಿಯಿತ್ತೇನೊ, ತನ್ನ ಹಿಂದೆ ಗುಂಡಿನ ಸದ್ದಾಗುತ್ತಿದ್ದಂತೆಯೇ ಹಿಂದೆ ತಿರುಗಿ ಕೈ ಅಡ್ಡ ಹಿಡಿದರೆ ಗುಂಡು ಅಂಗೈಯನ್ನೇ ಸೀಳಿ ಹಾಕಿದೆ. ಮತ್ತೊಂದು ಗುಂಡು ಪಕ್ಕೆಯನ್ನೇ ಸವರಿಹೋಗಿದೆ. ಅಷ್ಟರಲ್ಲೇ ಎದ್ದೂಬಿದ್ದೂ ಓಡತೊಡಗಿದ ಸೀನ ಉಳಿದ ಗುಂಡುಗಳಿಂದ ಹೇಗೋ ಬಚಾವಾಗಿದ್ದಾನೆ. ಅಲ್ಲಿದ್ದ ಸಜಾ ಕೈದಿಗಳು ಮತ್ತು ಜೈಲರ್ ಜೋಗಯ್ಯ ಮುಂತಾದವರೆಲ್ಲ ಸೇರಿ ಬಾಲಾಜಿಯನ್ನು ನೆಲಕ್ಕೆ ಕೊಡವಿ ರಿವಾಲ್ವರ್ ಕಿತ್ತುಕೊಂಡಿದ್ದಾರೆ. ಸೀನನ ಪಾಲಿಗಿದು ಮತ್ತೊಂದು ಜನ್ಮ.

ಬಹುಶಃ ಸೀನ ನಿಕಾಲಿಯಾಗಿದ್ದರೆ ನೆಲಮಂಗಲದ ಅಷ್ಟೂ ಸಾಮ್ರಾಜ್ಯಕ್ಕೆ ಶಂಕ್ರ ಅಧಿಪತಿಯಾಗುತ್ತಿದ್ದ. ಬಿನ್ನಮಂಗಲ ಕೃಷ್ಣಪ್ಪ ವಿಜಯುದ ನಗೆ ಬೀರುತ್ತಿದ್ದನೋ. ಹಾಗಾಗಲಿಲ್ಲ, ಮೈಸೂರು ಜೈಲಿಗೆ ಸದ್ಯ ಸೂಪರಿಂಟೆಂಡೆಂಟ್ ಆಗಿರುವ ಲಕ್ಷ್ಮಿನಾರಾಯಣ ಈ ಹಿಂದೆ ಬೆಂಗಳೂರಿನ ಜೈಲಿನಲ್ಲಿದ್ದಾತ. ನೆಲಮಂಗಲದ ಹಂತಕರ ಧಾರ್ಷ್ಟ್ಯ ಆತನಿಗೆ ಚೆನ್ನಾಗಿ ಗೊತ್ತಿತ್ತು, ಇಷ್ಟರಲ್ಲೇ ಏನೋ ಅನಾಹುತವಾಗುತ್ತದೆ ಎಂಬ ವದಂತಿ ಅಲ್ಲಿನ ಪ್ರತಿ ಕೈದಿಗೂ ಗೊತ್ತಿತ್ತು, ಸದ್ಯ ಸೀನನ ಕಡುವೈರಿ ಶಂಕ್ರ ಧಾರವಾಡ ಜೈಲಲ್ಲೂ, ಶಂಕ್ರನ ಬಂಟ ಚಿತ್ತನಗೆರೆ ಮಂಜ ಬೆಳಗಾವಿ ಜೈಲಲ್ಲೂ ಇದ್ದಾರಾದ್ದರಿಂದ ಮೈಸೂರು ಜೈಲಲ್ಲಿರುವ ಸೀನನ ಮೇಲೆ ಅಟೆಂಪ್ಟ್ ನಡೆಯಲಿಕ್ಕಿಲ್ಲ ಎಂದೇ ಜೈಲಧಿಕಾರಿಗಳು ಲೆಕ್ಕ ಹಾಕಿದ್ದರು.




ಹರ್ಷ

ಆದರೆ ಚಿತ್ತನಗೆರೆ ಮಂಜ ಶಂಕ್ರನಿಗಿಂತಲೂ ಡೆಡ್ಲಿ, ಬೆಂಗಳೂರು ಜೈಲಲ್ಲಿ ಕೂತೇ ಬಳ್ಳಾರಿ ಜೈಲಲ್ಲಿದ್ದ ಸೀನನಿಗೆ ಸ್ಕೆಚ್ ಹಾಕಿದ್ದ. ತುಮಕೂರು ಜೈಲಲ್ಲಿದ್ದ ಪಾಯ್ಸನ್ ರಾಮನ ಶಿಷ್ಯ ಭವಾನಿ ಬಳ್ಳಾರಿ ಜೈಲಿಗೆ ಬಂದಿದ್ದೇ ತಡ, ಸೀನ ಹುಷಾರಾದ. ಆ ಹೊತ್ತಿಗಾಗಲೇ ಬಿನ್ನಮಂಗಲ ಕೃಷ್ಣಪ್ಪನ ಮೇಲೆ ಬಂಡೆ ಮಂಜ ಮತ್ತು ಹ್ಯಾಡಾಳು ದೇವಿಯ ಮಗ ಹರ್ಷ ಸೇರಿಕೊಂಡು ಅಟ್ಯಾಕ್ ಮಾಡಿದ್ದರು. ಅದೃಷ್ಟವಶಾತ್ ಬಚಾವಾದ ಬಿನ್ನಮಂಗಲ ಕೃಷ್ಣಪ್ಪ ಬೂದಿಹಾಳು ಕರಿವರದಯ್ಯ ಮತ್ತು ಗೋವಿನಹಳ್ಳಿ ಶಿವಣ್ಣರನ್ನು ಜೈಲಿಗೆ ಕಳಿಸಿ ಸೀನ ಜೊತೆ ರಾಜಿಯ ಪ್ರಯತ್ನ ನಡೆಸಿದ್ದ.

ಹ್ಯಾಡಾಳು ದೇವಿಯ ಕೊಲೆಯಲ್ಲಿ ಅನ್ಯಾಯವಾಗಿ ನನ್ನ ಹೆಸರು ತರಬೇಡಿ. ನಾನು ನಿರ್ದೋಷಿ. ನಾವಿಬ್ಬರೂ ರಾಜಿಯಾಗಿ ಚೆನ್ನಾಗಿರೋಣ. ನನ್ನ ಪಾಡಿಗೆ ನಾನಿದ್ದುಬಿಡ್ತೀನಿ... ಎಂದೆಲ್ಲಾ ಕೃಷ್ಣಪ್ಪ ಗೋಗರೆದಿದ್ದ. ಆದರೆ ಸೀನ ಬಿಡಬೇಕಲ್ಲ, ಅನ್ಯಾಯವಾಗಿ ನನ್ನ ಮಂಡಿ ಬಸವಯ್ಯನ ಕೊಲೆ ಕೇಸಿಗೆ ಸಿಕ್ಕಿಸಿದೆ. ಹ್ಯಾಡಾಳು ದೇವೀನ ಮುಗಿಸ್ದೆ, ನನ್ನ ಅಕ್ಕನ ಬಾಳು ಹಾಳು ಮಾಡ್ದೆ, ನಿನ್ನನ್ನು ಇಷ್ಟಕ್ಕೇ ಬಿಡಕ್ಕಾಗುತ್ತಾ? ಬಿಡಬೇಕು ಅಂದ್ರೆ ಹತ್ತು ಕೋಟಿ ಮಡಗು ಮತ್ತೆ? ಎಂದುಬಿಟ್ಟ.

ಒಂದಲ್ಲ ಎರಡಲ್ಲ ಹತ್ತು ಕೋಟಿ ಅಂದರೆ ಸಣ್ಣ ಮೊತ್ತವಾ? ಬದಲಿಗೆ 50 ಲಕ್ಷ ಖರ್ಚು ಮಾಡಿದರೆ ಸೀನನನ್ನೇ ಮುಗಿಸಬಹುದಲ್ಲಾ? ಸೀನ ನಿಕಾಲಿಯಾದ ಅಂದ್ರೆ ಬಂಡೆ ಮಂಜ ಮತ್ತು ಹರ್ಷನ್ನ ಮುಗಿಸೋದು ಯಾವ ಲೆಕ್ಕ?


ಹೀಗೆಂದೇ ಬಿನ್ನಮಂಗಲ ಕೃಷ್ಣಪ್ಪ ಲೆಕ್ಕ ಹಾಕಿರಬಹುದಾ? ನೂರಾರು ಮೈಲಿಗಳಾಚೆಯ ಬೆಳಗಾವಿ ಜೈಲಲ್ಲೋ ಧಾರವಾಡದಲ್ಲೋ ಕೂತು ಮೈಸೂರು ಜೈಲಲ್ಲಿ ಅಷ್ಟೊಂದು ಹುಷಾರಾಗಿದ್ದೂ ಸೀನನನ್ನು ಮುಗಿಸಲು ಮಂಜನಂಥವರಿಗೆ ಶಕ್ತಿ ಬರುತ್ತದೆಯೆಂದರೆ ಅದಕ್ಕೆ ಬಿನ್ನಮಂಗಲ ಕೃಷ್ಣಪ್ಪನ ರೊಕ್ಕ ಹರಿಯದೇ ಹೇಗೆ ಸಾಧ್ಯ?



ಶಂಕರ

ಇದು ಸೀನನ ಶಿಷ್ಯರ ಪ್ರಶ್ನೆ ಮತ್ತು ಅನುಮಾನ ಕೂಡ. ಸೀನನನ್ನು ಮುಗಿಸಿದರೆ ಐವತ್ತು ಲಕ್ಷ ಕೊಡ್ತೀನಿ ಎಂದು ಮಂಜ ಆಮಿಷ ಒಡ್ಡಿದನಂತೆ. ಹಾಗೆಂದು ಬಾಲಾಜಿಯೇ ಪೊಲೀಸರೆದುರು ಬಾಯಿ ಬಿಟ್ಟಿದ್ದಾನೆ. ಇದಕ್ಕೂ ಮುನ್ನ ಬಳ್ಳಾರಿ ಜೈಲಿನಲ್ಲಿದ್ದ ಸೀನನ ಮೇಲೆ ಕಡಬಗೆರೆ ರಾಮನ ಶಿಷ್ಯ ಭವಾನಿಯನ್ನು ಬಿಟ್ಟು ಅಟೆಂಪ್ಟ್ ಮಾಡಲು ಮಂಜ ಸ್ಕೆಚ್ ಹಾಕಿದ್ದ. ಇದು ಗೊತ್ತಾಗಿ ಸೀನ ಗುಲ್ಬರ್ಗಾ ಜೈಲಿಗೆ ಬಂದ.

ಗುಲ್ಬರ್ಗಾ ಜೈಲಲ್ಲಿ ಶಂಕ್ರನಿಗೆ ಆತ್ಮೀಯನಾಗಿದ್ದ ರಮೇಶ್ ಎಂಬ ಕೈದಿಯ ಮೂಲಕ ಸೀನನನ್ನು ಮುಗಿಸುವುದು ಮಂಜನ ಲೆಕ್ಕಾಚಾರವಾಗಿತ್ತು, ಇದು ಹೇಗೋ ಸೀನನಿಗೆ ಗೊತ್ತಾಗಿ ಆತ ಮೈಸೂರು ಜೈಲಿಗೆ ಬಂದ. ಅದೇ ಹೊತ್ತಿಗೆ ಮಂಜ ಬೆಂಗಳೂರು ಜೈಲಲ್ಲಿದ್ದ. ಅಲ್ಲಿ ಆತನಿಗೆ ಜೊತೆಯಾದವನೇ ಮೈಸೂರಿನ ಬಾಲಾಜಿ ರಾವ್ ಅಲಿಯಾಸ್ ಟಿಬೆಟ್. ಈತ ವಿದ್ಯಾರಣ್ಯಪುರದವನು. ಸದ್ಯ ಕೆ.ಆರ್. ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಅಪ್ಪು ಎಂಬಾತನೇ ಈತನ ಅಣ್ಣ. ಮೊದಲು ಕಾರುಗಳ್ಳತನಕ್ಕಿಳಿದ. ಸಜರ್‌ಬಾದ್ ಏರಿಯಾದಲ್ಲಿ ತರಕಾರಿ ವ್ಯಾಪಾರ ಮಾಡಿಕೊಂಡಿದ್ದು ಬಡ್ಡಿಗೆ ಬಿಡುತ್ತಿದ್ದ ಸೀನನನ್ನು ಕೊಂದು ಪರಾರಿಯಾದವನು ನಾಗುಂದ್ರ ಎಂಬ ಮತ್ತೊಬ್ಬ ಫೈನಾನ್ಶಿಯರ್‌ನ ಹತ್ಯೆಗೂ ಯತ್ನಿಸಿದ.



ಚಿತ್ತನಗರ ಶಂಕರ

ಮೈಸೂರು ಪೊಲೀಸರಿಂದ ತಲೆಮರೆಸಿಕೊಳ್ಳಲೆಂದು ಬೆಂಗಳೂರಿಗೆ ಬಂದವನು ಕಾರುಗಳ್ಳತನವನ್ನೇ ತನ್ನ ಫುಲ್‌ಟೈಂ ಕಸುಬಾಗಿಸಿಕೊಂಡ. ಬೆಂಗಳೂರಿನ ಮಲ್ಲೇಶ್ವರಂ, ಶೇಷಾದ್ರಿಪುರಂ, ಫ್ರೇಜರ್ ಟೌನ್, ಎಂ.ಜಿ. ರಸ್ತೆ ಇತ್ಯಾದಿಗಳಲ್ಲಿ ಒಂದರಮೇಲೊಂದು ಕಾರು ಕದ್ದ. ಸಿಸಿಬಿ ಪೊಲೀಸರಿಗೂ ಸಿಕ್ಕಿಬಿದ್ದ. ಹಾಗೇ ಪರಪ್ಪನ ಅಗ್ರಹಾರ ಜೈಲಿಗೆ ಬಂದ ಬಾಲಾಜಿ ಅಲಿಯಾಸ್ ಟಿಬೆಟ್‌ನನ್ನು ಅದೇ ಜೈಲಲ್ಲಿದ್ದ ಮಂಜ ಪಳಗಿಸಿಕೊಂಡಿದ್ದ, ಸೀನನ ಹತ್ಯೆಗೆ ಶಂಕ್ರ ಮತ್ತು ಮಂಜ ಜೈಲೊಳಗಿದ್ದೇ ಕಿತಾಪತಿ ನಡೆಸುತ್ತಿರುವುದು ಗೊತ್ತಾಗಿ ಜೈಲಧಿಕಾರಿಗಳು ಶಂಕ್ರನನ್ನು ಧಾರವಾಡಕ್ಕೆ ಕಮಾನೆತ್ತಿ ಮಂಜನನ್ನು ಬೆಳಗಾವಿಗೆ ಎತ್ತಂಗಡಿ ಮಾಡಿದ್ದಾರೆ. ಆದರೆ ಮಂಜನ ಕ್ರಿಮಿನಲ್ ತಲೆಗೆ ಜೈಲು ಯಾವ ಲೆಕ್ಕ? ಜೈಲಿನ ಹೊರಗಿದ್ದೇ ನೆಟ್‌ವರ್ಕ್ ಮಾಡಲು ಕ್ರಿಮಿನಲ್‌ಗಳ ಪಡೆಯೇ ಆತನ ಬೆನ್ನಿಗಿದೆ.

ಇಂಥದೊಂದು ನೆಟ್‌ವರ್ಕನ್ನು ಬಳಸಿಕೊಂಡೇ ಬೆಳಗಾವಿ ಜೈಲಿಂದ ಆಪರೇಟ್ ಮಾಡಿದ್ದಾನೆ ಮಂಜ. ಅದೇ ಹೊತ್ತಿಗೆ ಫೈನಾನ್ಶಿಯರ್ ಸೀನನ ಕೊಲೆ ಕೇಸಿನಲ್ಲಿ ಮೈಸೂರು ಪೊಲೀಸರು ಬಾಲಾಜಿಯನ್ನು ಮೈಸೂರಿಗೆ, ಕರೆದೊಯ್ದಿದ್ದಾರೆ. ಜನವರಿ 14 ಕ್ಕೆ ಮೈಸೂರು ಜೈಲಿಗೆ ಬಂದ ಬಾಲಾಜಿಗೆ ಚಿತ್ತನಗೆರೆ ಮಂಜನ ಜೊತೆ ಸಂಪರ್ಕವಿರುವುದು ಸೀನನಿಗೆಲ್ಲಿ ಗೊತ್ತಾಗಬೇಕು?


ಸದ್ಯ ಮೈಸೂರು ಜೈಲಿನ ಶೂಟೌಟ್ ಕೇಸಿಗೆ ಸಂಬಂಧಪಟ್ಟಂತೆ ತನಿಖೆ ನಡೆಸುತ್ತಿರುವುದು ಮಂಡಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕಿರಣ್‌ಕುಮಾರ್. ಈ ಹಿಂದೆ ಕೊಳ್ಳೇಗಾಲದಲ್ಲಿ ಕಳೆದ ಉಪಚುನಾವಣೆಯ ಹೊತ್ತಿಗೆ ಬಿಜೆಪಿಯ ಲಿಕ್ಕರ್ ಹುತ್ತಕ್ಕೇ ಕೈಹಾಕಿದ್ದ ಕಿರಣ್‌ಕುಮಾರ್ ನಿಷ್ಠುರಿ ಅಧಿಕಾರಿ. ಬಾಲಾಜಿಯನ್ನು ಜೈಲಿಂದ ಎಳೆತಂದು ಏನೆಲ್ಲಾ ಬಾಯಿ ಬಿಡಿಸಲು ಯತ್ನಿಸಿದರೂ ಆತ ಜಗ್ಗುತ್ತಿಲ್ಲ, ಯಾರೋ ಪ್ರೇಮ್ ಎಂಬ ನೆಲಮಂಗಲದ ಹುಡುಗನೊಬ್ಬ ತನಗೆ ಹಣ್ಣಿನ ಬುಟ್ಟಿಯಲ್ಲಿ ರಿವಾಲ್ವರ್ ಇಟ್ಟು ತಲುಪಿಸಿದ ಎಂದು ಒಮ್ಮೆ ಹೇಳಿದರೆ ಮತ್ತೊಮ್ಮೆ ಇಂಟರ್‌ವ್ಯೂ ಕೋಣೆಯಲ್ಲೇ ಬಂದು ಕೊಟ್ಟು ಹೋದ ಎನ್ನುತ್ತಾನೆ. ಮಗದೊಮ್ಮೆ ಕೋರ್ಟಿಗೆ ಹೋದಾಗ ತಂದುಕೊಟ್ಟಿದ್ದ ಎನ್ನುತ್ತಾರೆ ಈತನ ಮಾತು, ಹೇಳಿಕೆ ಮತ್ತು ಜೈಲಿನ ದಾಖಲೆಗಳು ಪರಸ್ಪರ ತಾಳೆಯಾಗುತ್ತಿಲ್ಲ, ಪ್ರೇಮ್ ಎಂಬಾತ ಯಾವತ್ತು ಮೈಸೂರು ಜೈಲಿಗೆ ಬಂದಿದ್ದ ಎಂಬ ಬಗ್ಗೆ ಸಂದರ್ಶನ ಪುಸ್ತಕದಲ್ಲಿ ಯಾವುದೇ ಉಲ್ಲೇಖವಿಲ್ಲ, ಬೇರೆ ಯಾವುದಾದರೂ ಹೆಸರಲ್ಲಿ ಪ್ರೇಮ್ ಇಂಟರ್‌ವ್ಯೂ ಹಾಕಿದ್ದನೇ ಎಂದರೆ ಬಾಲಾಜಿ ಹೇಳುವ ದಿನಾಂಕದ ಆಸುಪಾಸಿನಲ್ಲೂ ಯಾವುದೇ ಸಂದರ್ಶನ ನಡೆದ ಉಲ್ಲೇಖವಿಲ್ಲ, ಇದರರ್ಥ ಬಾಲಾಜಿ ಸುಳ್ಳು ಹೇಳುತ್ತಿದ್ದಾನೆ.

ಒಂದೋ ಯಾರಾದರೂ ಸಜಾ ಕೈದಿಗಳು ಹೊರಗಿನಿಂದ ತಂದು ಕೊಟ್ಟಿರಬೇಕು ಅಥವಾ ಜೈಲು ಸಿಬ್ಬಂದಿಯೇ ಕೈಜೋಡಿಸಿರಬೇಕು. ಸಜಾ ಕೈದಿಗಳ ಪೈಕಿ ಕೆಲವರು ಯಾವುದೇ ತಪಾಸಣೆಯಿಲ್ಲದೆ ಜೈಲಿಂದ ಹೊರಗೆ ಹೋಗಿಬಂದು ಮಾಡುತ್ತಾರೆ. ಕೈದಿಗಳಿಗೆ ರಮ್ಮು, ವಿಸ್ಕಿ, ಸಿಗರೇಟು, ಗಾಂಜಾ ಇತ್ಯಾದಿಗಳನ್ನೆಲ್ಲ ತಂದು ಕೊಡುವುದೇ ಇವರು. ಇಂಥ ಯಾರೋ ಒಬ್ಬ ಸಜಾ ಕೈದಿಯ ಮೂಲಕ ಮಂಜ ರಿವಾಲ್ವರ್ ಕಳಿಸಿ ಕೊಟ್ಟನೆ?

ಹಾಗೊಮ್ಮೆ ಸಜಾ ಕೈದಿಯೇ ತಂದು ಕೊಟ್ಟಿದ್ದರೂ, ಆತನಿಗೆ ರಿವಾಲ್ವರ್ ಕೊಟ್ಟಿದ್ದು ಯಾರು? ಹಾಗೇ ತಂದು ಕೊಟ್ಟವನಿಗೆ ರಿವಾಲ್ವರ್ ಬಂದಿದ್ದು ಎಲ್ಲಿಂದ? ಇದು ತನಿಖೆಯಾಗಬೇಕಾದ ಅಂಶ. ಬಾಲಾಜಿ ಬಾಯಿ ಬಿಡುತ್ತಿಲ್ಲ ಅಥವಾ ಜೈಲು ಸಿಬ್ಬಂದಿಗಳ ಪೈಕಿ ಯಾರಾದರೂ ಬಾಲಾಜಿಗೆ ವೆಪನ್ ತಂದು ಕೊಟ್ಟರಾ? ಇನ್ಸ್‌ಪೆಕ್ಟರ್ ಕಿರಣ್‌ಕುಮಾರ್ ಬಾಯಿಬಿಡಿಸುತ್ತಿದ್ದಾರಾದರೂ ಬಾಲಾಜಿ ಅದೇ ಕತೆ ಹೇಳುತ್ತಿದ್ದಾನೆ. ಇನ್ನೂ ವಿಶೇಷವೆಂದರೆ ರಿವಾಲ್ವರ್‌ಗೆ ಬಳಸಿದ್ದು ಪೊಲೀಸರು ಬಳಸುವ ಬುಲೆಟ್ಟುಗಳು. ಪೊಲೀಸ್ ಇಲಾಖೆಯ ಯಾರಾದರೂ ಕೈಜೋಡಿಸದೇ ಹೋಗಿದ್ದರೆ ಇಷ್ಟೊಂದು ಬುಲೆಟ್ಟುಗಳು ಹೇಗೆ ಬರುತ್ತಿದ್ದವು? ಚಿತ್ತನಗೆರೆ ಶಂಕ್ರನ ತಂಡಕ್ಕೆ ಯಾರಾದರೂ ಪೊಲೀಸ್ ಅಧಿಕಾರಿಯೊಬ್ಬರ ಶ್ರೀರಕ್ಷೆಯಿದೆಯೆ?

ಈ ಬಗ್ಗೆ ತನಿಖೆಯಾಗಬೇಕು. ಸದ್ಯ ಮಂಡಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕಿರಣ್‌ಕುಮಾರ್ ರಿವಾಲ್ವರ್‌ನ ಮೂಲಕ್ಕೆ ಕೈಹಾಕಿದ್ದಾರೆ ನಿಜ. ವಿಷಯದ ಮೂಲ ಕೆದಕುತ್ತಾರಾ?

–ರಾ. ಸೋಮನಾಥ್



ಬಂಡೆ ಮಂಜ

ಹಂತಕರ ಪರ್ಯಾಯ ಸರ್ಕಾರ

ನೆಲಮಂಗಲದ ಗ್ಯಾಂಗ್‌ವಾರ್ ಆ ಊರಿನ ಸಂಸ್ಕೃತಿ, ಆರ್ಥಿಕತೆ ಮತ್ತು ರಾಜಕೀಯವನ್ನೇ ಹೇಗೆ ಕಲುಷಿತಗೊಳಿಸಿದೆಯೆಂದರೆ; ಸಣ್ಣಪುಟ್ಟ ವಿಷಯಕ್ಕೂ ಜೈಲಿನಿಂದ ಫೋನು ಬರುತ್ತದೆ. ಇಲ್ಲಿನ ಯಾವುದೇ ಕಾಲೇಜಿಗೆ ಹೋದರೂ ಅಲ್ಲಿ ಶಂಕ್ರ–ಮಂಜರ ಸಿಂಡಿಕೇಟೂ ಚಿತ್ತನಗೆರೆ ಸೀನನ ಮತ್ತೊಂದು ಸಿಂಡಿಕೇಟೂ ಇದ್ದೇ ಇರುತ್ತದೆ. ಹುಡುಗರ ಮಧ್ಯೆ ಸಣ್ಣ ಕಚ್ಚಾಟವಾದರೂ ಅದಕ್ಕೆ ಜೈಲಿಂದ ಫೋನು ಬರಲೇಬೇಕು.

ಇಲ್ಲಿನ ಫ್ಯಾಕ್ಟರಿಗಳು, ಬಾರ್‌ಗಳು, ಕ್ಲಬ್ಬುಗಳು, ಆಸ್ಪತ್ರೆಯವರೆಲ್ಲ ಜೈಲಿಗೆ ಮಾಮೂಲಿ ಕಳಿಸಲೇಬೇಕು. ಚಿತ್ತನಗೆರೆ ಸೀನ ದೊಡ್ಡ ದೊಡ್ಡ ಲ್ಯಾಂಡ್ ಡೀಲುಗಳಿಗೆ ಕೈಯಿಟ್ಟರೆ ಬಾರು, ಹೋಟ್ಲು, ವೈನ್‌ಸ್ಟೋರುಗಳೆಲ್ಲ ಶಂಕ್ರನಿಗೆ ಹಫ್ತಾ ಕೊಡಲೇ ಬೇಕು. ಸಣ್ಣ ಗಲಾಟೆಯಾದರೂ ಕ್ಷಣಾರ್ಧದಲ್ಲಿ ಇಪ್ಪತ್ತು ಮೂವತ್ತು ಬೈಕುಗಳಲ್ಲಿ ಕಾಲೇಜು ಹುಡುಗರು ದಾಳಿಯಿಡುತ್ತಾರೆ. ಹೀಗೆ ಬೈಕುಗಳಲ್ಲಿ ಕಾಲೇಜಿಗೆ ಬರುವ ರೌಡಿ ಶೋಕಿಯ ಹುಡುಗರ ಪೈಕಿ ಬಹುತೇಕರು ಅನುಕೂಲಸ್ಥರ ಮಕ್ಕಳು.


ಸಣ್ಣಪುಟ್ಟ ವೈನ್‌ಸ್ಟೋರ್‌ಗಳ ವಿರುದ್ಧ ಯಾರಾದರೂ ಅಬಕಾರಿ ಇಲಾಖೆಗೆ ದೂರು ಕೊಟ್ಟರೆಂದರೆ ಅಂಥವರ ಮೊಬೈಲ್ ನಂಬರನ್ನು ಅಬಕಾರಿ ಅಧಿಕಾರಿಗಳನ್ನೇ ಕೇಳಿ ಪಡೆಯುತ್ತಾರೆ. ದೂರು ಕೊಟ್ಟು ಇಲಾಖೆಯ ಕಾಂಪೌಂಡ್ ಇನ್ನೂ ದಾಟಿರುವುದಿಲ್ಲ ಅಷ್ಟರಲ್ಲಾಗಲೇ ಶಂಕ್ರ ಫೋನ್ ಮಾಡಿ ರೋಪು ಹಾಕಿರುತ್ತಾನೆ.

ತೀರ ಇತ್ತೀಚೆಗೆ ಅಂದರೆ ಮಾರ್ಚ್ 15 ರ ರಾತ್ರಿ ನೆಲಮಂಗಲದ ಬಸ್‌ಸ್ಟ್ಯಾಂಡ್ ಪಕ್ಕದ ಸಪ್ನಾ ವೈನ್ಸ್‌ಗೆಂದು ಕುಡಿಯಲು ಹೋದವನು ಮಾಜಿ ಮಂತ್ರಿ ಅಂಜನಮೂರ್ತಿಯ ಅಣ್ಣನ ಮಗ ಜೈರಾಮ. ಈತ ನೆಲಮಂಗಲದ ಕೋಟೆ ವಾರ್ಡಿನ ಮಾಜಿ ಕೌನ್ಸಿಲರ್. ಸಪ್ನಾ ವೈನ್ಸ್ ಮಾಲೀಕ ದಾಬಾ ಆನಂದ ಹೇಳಿಕೇಳಿ ಚಿತ್ತನಗೆರೆ ಶಂಕ್ರನ ಶಿಷ್ಯ. ಸೊಂಡೆಕೊಪ್ಪ ಬೈಪಾಸಿನಲ್ಲಿರುವ ಆನಂದ್ ಬಾರ್, ಅದರ ಪಕ್ಕದ ಜ್ಯೋತಿ ವೈನ್ಸ್‌ಗೆ ಈತನೇ ಮಾಲೀಕ. ಜೈಲಲ್ಲಿರುವ ಶಂಕ್ರನಿಗೆ ಸಕಲವನ್ನೂ ಸರಬರಾಜು ಮಾಡಿಕೊಂಡೇ ತನ್ನ ಲಿಕ್ಕರ್ ದಂಧೆಯನ್ನು ನಡೆಸುವ ದಾಬಾ ಆನಂದ ಈ ಹಿಂದೆ ನೆಲಮಂಗಲದಲ್ಲಿ ಸಂಭವಿಸಿದ್ದ ಕಳ್ಳಭಟ್ಟಿ ದುರಂತದ ಮೂಲ ಪುರುಷ. ಕಳ್ಳಭಟ್ಟಿ ಸಾವುಗಳ ಕೇಸು ಹೊತ್ತು ಜೈಲಿಗೂ ಹೋಗಿ ಬಂದ.

ಇಂಥ ದಾಬಾ ಆನಂದನ ಸಪ್ನಾ ವೈನ್ಸಿಗೆ ಹೋದ ಮಾಜಿ ಕೌನ್ಸಿಲರ್ ಜೈರಾಮ ತನಗೆ ಪೆಗ್ ವಿಸ್ಕಿ ಕೊಡುವಂತೆ ಕೇಳಿದರೆ ವೈನ್‌ಸ್ಟೋರಿನ ಕ್ಯಾಷಿಯರ್ ಕ್ವಾಟರನ್ನೇ ತಗೋ, ನಮ್ಮಲ್ಲಿ ಪೆಗ್ ಸಿಸ್ಟಮ್ ಇಲ್ಲ ಎಂದು ಬಿಟ್ಟ. ಮಾತಿಗೆ ಮಾತು ಬೆಳೆದು ಜಗಳವಾಗಿದೆ. ಮಾಲೀಕ ಆನಂದನಿಗೂ ಫೋನ್ ಹೋಗಿದೆ. ಕ್ಷಣಾರ್ಧದಲ್ಲೇ ತನ್ನ ಬೈಕನ್ನೇರಿ ಬಂದ ಆನಂದ ಮಾಜಿ ಕೌನ್ಸಿಲರ್ ಜೈರಾಮನನ್ನು ಅಟಕಾಯಿಸಿಕೊಂಡು ತನ್ನ ಮೊಬೈಲಿನಿಂದ ಜೈಲಲ್ಲಿದ್ದ ಶಂಕ್ರನಿಗೆ ಫೋನ್ ಮಾಡಿದ್ದಾನೆ. ಅತ್ತ ಶಂಕ್ರ ಫೋನೆತ್ತಿಕೊಂಡವನೇ ಜೈರಾಮನಿಗೆ ರೋಪು ಹಾಕಿದ್ದಾನೆ.

ಜೈಲಿಂದ ಶಂಕ್ರ ಆವಾಜು ಬಿಟ್ಟಿದ್ದೇ ತಡ, ಬಾಲ ಮುದುರಿಕೊಂಡ ಜೈರಾಮ ದಾಬಾ ಆನಂದನ ಲಿಕ್ಕರ್ ಬಿಲ್ಲು ಪಾವತಿಸಿದ್ದೇ ಜಾಗ ಖಾಲಿ ಮಾಡಿಬಿಟ್ಟ. ನೆಲಮಂಗಲದ ದುರ್ಗತಿಗೆ ಇದಕ್ಕಿಂತ ಬೇಕೆ? ಇಲ್ಲಿರುವುದು ರೌಡಿಗಳ ಪರ್ಯಾಯ ಸರ್ಕಾರ.....! ●

ಸೋಸಲೆ ಮಠ ಕಳ್ಳ ಸ್ವಾಮಿ ವಿದ್ಯಾಮನೋಹರ



ಶುದ್ಧ ಅಪಾಪೋಲಿಗೆ ಕಾವಿ ತೊಡಿಸಿದರೆ ಏನೇನು ಅನಾಹುತಗಳಾಗಬಹುದೋ ಅದಕ್ಕೆಲ್ಲ ವ್ಯಾಸರಾಯಮಠ ತಾಜಾಉದಾಹರಣೆಯಾಗಿ ನಿಂತಿದೆ. ಇಂತಹದ್ದೊಂದು ಪರಿಸ್ಥಿತಿಗೆ ಕಾರಣವಾಗಿರುವಾತ ಅದೇ ಮಠದ ಪೀಠಾಧಿಪತಿ ವಿದ್ಯಾಮನೋಹರ ತೀರ್ಥನೆಂಬ ಬೇಜವಾಬ್ದಾರಿ ಆಸಾಮಿ. ಕಾವಿ ಹೊದ್ದ ದೇಹದೊಳಗೆ ಸಕಲ ತೆವಲುಗಳನ್ನೂ ಜೀವಂತವಾಗಿರಿಸಿಕೊಂಡಿದ್ದ ಈತ ಅದಕ್ಕೆಲ್ಲ ಮಠದ ಹುಂಡಿಯನ್ನೇ ನೆಚ್ಚಿದ್ದ. ಇಂಥ ಪಾಪಕಾರ್ಯಗಳೆಲ್ಲ ಇದೀಗ ಒಟ್ಟಾಗಿ ಅಟಕಾಯಿಕೊಂಡಂತಿದೆ. ಕಳ್ಳ ಸ್ವಾಮಿ ಕಾವಿಯ ಸಮೇತ ಆಂಧ್ರಪ್ರದೇಶದ ಕಡಪ ಜೈಲಿಗೆ ಗದುಮಿಸಿಕೊಂಡು ವಾಪಸಾಗಿದ್ದಾನೆ. ಮಠದ ಪಾವಿತ್ರ್ಯ ಭಕ್ತರ ನಂಬುಗೆಗಳೆಲ್ಲ ಬುಡಮೇಲಾಗಿವೆ.

ವ್ಯಾಸರಾಜ ಮಠದ ಹಿಂದಿನ ಪೀಠಾಧೀಶ ವಿದ್ಯಾವಾಚಸ್ಪತಿ ತಮ್ಮ ಮೊಮ್ಮಗನಿಗೆ ಕಾವಿ ತೊಡಿಸಿದಾಗಲೇ ಸಂಭಾವ್ಯ ಅನಾಹುತಗಳೆಲ್ಲ ಭಕ್ತರಿಗೆ ಗೋಚರವಾಗಿದ್ದವು. ಖುದ್ದು ವಾಚಸ್ಪತಿಗಳೇ ಮಠವನ್ನ ಸಾಕಷ್ಟು ಅಧ್ವಾನ ಸ್ಥಿತಿ ತಲುಪಿಸಿದ್ದರು. ಒಂದು ಹಿಂಡು ಗಂಡು ಮಕ್ಕಳಿಗೆ ಪಿತೃವಾಗಿದ್ದ ಶ್ರೀಗಳು ಮಠವೆಂಬುದನ್ನು ಮಕ್ಕಳ ಮುಂದೆ ಬಾಳೆಲೆಯಂತೆ ಹರಡಿಬಿಟ್ಟಿದ್ದರು. ಇಂಥ ಸ್ವಾಮಿಯ ಉತ್ತರಾಧಿಕಾರಿಯಾಗಿ ವಕ್ಕರಿಸಿದವನು ವಿದ್ಯಾಮನೋಹರ.


ಹೇಳಿಕೇಳಿ ವ್ಯಾಸರಾಯ ಮಠ ಅಖಂಡ 800 ವರ್ಷಗಳ ಇತಿಹಾಸ ಹೊಂದಿದೆ. ಇದುವರೆಗೆ ಮೂವತ್ತೈದು ಮಂದಿ-ಪೀಠಾಧೀಶರನ್ನು ಕಂಡಿರುವ ಮಠ ಹಲವಾರು ರಾಜಮಹಾರಾಜರ ದೇಣಿಗೆಯ ದೆಸೆಯಿಂದ ಅಗಾಧವಾದ ಆಸ್ತಿಯನ್ನು ಹೊಂದಿದೆ. ಇಂಥಾ ಮಠಕ್ಕೆ ಸ್ವಾಮಿಯಾಗಿ ಬರುವಾತನಿಗೆ ಕೇವಲ ಧಾರ್ಮಿಕ ಶ್ರದ್ಧೆಯಿದ್ದರಷ್ಟೇ ಸಾಲದು, ಆದಾಯ, ಆಸ್ತಿಗಳು ಮುಕ್ಕಾಗದಂತೆ ನೋಡಿಕೊಳ್ಳುವ ಛಾತಿಯೂ ಇರಬೇಕು. ಆದರೆ ವಿದ್ಯಾಮನೋಹರನಲ್ಲಿ ಕಂಡದ್ದನ್ನು ನುಂಗುವ ಉತ್ಸಾಹದ ಹೊರತಾಗಿ ಬೇರ್‍ಯಾವುದೂ ಇರಲಿಲ್ಲ.

ಅಂಥ ಮನಸ್ಥಿತಿಯ ಕಾರಣದಿಂದಲೇ ಸದರಿ ಪ್ರಕರಣ ಜೀವ ಪಡೆದಿದೆ. ಮಠದ ಹೆಸರಲ್ಲಿ ತಿರುಪತಿಯಲ್ಲಿ ದೊಡ್ಡದೊಂದು ಆಸ್ತಿಯಿದೆ. ಅದರಲ್ಲಿ ಈ ಹಿಂದೆಯೇ ಬಹುಮಹಡಿ ಕಟ್ಟಡವೊಂದನ್ನು ಕಟ್ಟಲಾಗಿದೆ. 2005ರಲ್ಲಿ ಈ ಇಡೀ ಕಟ್ಟಡವನ್ನು ಶ್ರೀಹರಿ ಎಂಬಾತನಿಗೆ 30 ವರ್ಷದ ಲೆಕ್ಕಕ್ಕೆ ಭೋಗ್ಯಕ್ಕೆ ಕೊಡಲಾಗಿತ್ತು. ಇದರ ಬಾಬತ್ತಾಗಿ ಪ್ರತೀ ವರ್ಷ 1 ಕೋಟಿಯಷ್ಟು ಮಠಕ್ಕೆ ಹರಿದುಬರುತ್ತಿತ್ತು.

ಆದರೆ ತನ್ನ ತರಹೇವಾರಿ ತೆವಲುಗಳಿಗೆ ದುಡ್ಡು ಬರುವ ರೂಟು ಹುಡುಕುತ್ತಿದ್ದನಲ್ಲಾ ವಿದ್ಯಾಮನೋಹರ? ಆತನ ಕಣ್ಣಿಗೆ ತಿರುಪತಿಯ ಕಟ್ಟಡ ಮತ್ತೆ ಬಿದ್ದಿದೆ. 2009ರಲ್ಲಿ ಇದೇ ಕಟ್ಟಡವನ್ನು ಸಂಪತ್‌ಕುಮಾರ್ ಎಂಬಾತನಿಗೆ ಭೋಗ್ಯಕ್ಕೆ ಕೊಟ್ಟಿದ್ದಾನೆ. ಈ ಸಂಬಂಧ 35 ಲಕ್ಷ ರೂಪಾಯಿ ಅಡ್ವಾನ್ಸ್ ರೂಪದಲ್ಲಿ ಕಳ್ಳಸ್ವಾಮಿಯ ಕೈಸೇರಿದೆ. ವಂಚನೆಯ ಅರಿವಿಲ್ಲದ ಸಂಪತ್ ತಿರುಪತಿಗೆ ತೆರಳಿ ಕಟ್ಟಡ ಸ್ವಾಧೀನ ಪಡಿಸಿಕೊಳ್ಳಲು ಹೋಗಿದ್ದೇ ಅಸಲಿ ಹಕ್ಕುದಾರ ಶ್ರೀಹರಿಯಿಂದ ಸತ್ಯ ತಿಳಿದಿದೆ. ವಿದ್ಯಾಮನೋಹರ ಅನೇಕ ಮಸಲತ್ತು ಸೃಷ್ಟಿಸಿ ಸಂಪತ್‌ನನ್ನ ತೆಪ್ಪಗಿರಿಸಲು ನೋಡಿದನಾದರೂ ಅಗ್ರಿಮೆಂಟ್‌ನನ್ವಯ 70 ಲಕ್ಷ ಮರಳಿ ಕೊಡಬೇಕಾಯ್ತು.

ಸ್ವಾಮಿ ಹಂತಹಂತವಾಗಿ 70 ಲಕ್ಷಕ್ಕೆ ಚೆಕ್ಕು ನೀಡುತ್ತಾ ಹೋದ. ಮಠದ ಖಾತೆ ಈತನ ತೆವಲಿಗೆ ಸಿಕ್ಕು ತಳ ಹಿಡಿದಿದ್ದರಿಂದ ಅವೆಲ್ಲ ಬೌನ್ಸ್ ಆಗುತ್ತಾ ಸಾಗಿದವು. ಈ ಬಗ್ಗೆ ತಿಳಿಸಿದರೂ ಸ್ವಾಮಿ ಕ್ಯಾರೇ ಅನ್ನದಿದ್ದರಿಂದ ರೊಚ್ಚಿಗೆದ್ದ ಸಂಪತ್‌ಕುಮಾರ್ ಚೆಕ್ ಬೌನ್ಸ್ ಆದಾಗಲೆಲ್ಲಾ ಕಡಪ ಪೊಲೀಸ್ ಠಾಣೆಯಲ್ಲಿ ಕಳ್ಳ ಸ್ವಾಮಿಯ ವಿರುದ್ಧ ಕೇಸು ದಾಖಲಿಸುತ್ತಾ ಹೋದ. ಕೊಳ್ಳೆ ಹೊಡೆದ ಹಣ ಸುರಿಯುತ್ತಾ ವೈಯಕ್ತಿಕ ಲಾಲಸೆಗಳಲ್ಲಿ ಮುಳುಗಿದ್ದ ಸ್ವಾಮಿಗೆ ಕಡಪದಿಂದ ರವಾನೆಯಾದ ನೋಟೀಸುಗಳಿಗೆ ಸ್ಪಂದಿಸಲು ಬಿಡುವ ಆದುದರಿಂದಲೇ ಮೊನ್ನೆ ಕಡಪದ ಪೊಲೀಸರು ಪುರುಸೊತ್ತು ಮಾಡಿಕೊಂಡು ಬಂದು ಕಳ್ಳಸ್ವಾಮಿಯನ್ನು ಬಸವನಗುಡಿ ಮಠದಿಂದ ಎಳಕೊಂಡು ಹೋಗಿದ್ದಾರೆ.

ಹಾಗೆ ಮಾಡಿದ ಅಖಂಡ ವಂಚನೆಯಿಂದಾಗಿಯೇ ಕಡಪದ ಜೈಲು ಕಂಡ ವಿದ್ಯಾಮನೋಹರ ಮಾರನೇ ದಿನವೇ ಬೇಲ್ ಪಡೆದಿದ್ದಾನೆ. ಅಲ್ಲಿಂದ ಸೀದಾ ಬೆಂಗಳೂರಿಗೆ ಬಂದಿಳಿದು ಮಠ ಹೊಕ್ಕು ಏನೂ ಆಗಿಲ್ಲವೆಂಬಂತೆ ಪೂಜೆ-ಪುನಸ್ಕಾರಗಳಿಗೆ ರೆಡಿಯಾಗುತ್ತಿದ್ದಂತೆ ಭಕ್ತರ ಪಿತ್ಥ ಏರತೊಡಗಿತ್ತು. ಸ್ವಾಮಿಯ ಕಳ್ಳಾಟದ ವಿರುದ್ಧ ಶ್ರೀ ವ್ಯಾಸರಾಜ ಸೇವಾ ಸಮಿತಿಯವರು ಗಾಂಧಿ ಬಜಾರಿನ (ಬೆಣ್ಣೆ ಗೋವಿಂದ ಛತ್ರದ ಪಕ್ಕ) ಮಠದ ಮುಂದೆ ಧರಣಿ ಕೂತು ಪೀಠ ಬಿಟ್ಟು ಮನೆಗೆ ಹೋಗುವಂತೆ ಆಗ್ರಹಿಸಿದರು. ಇದಕ್ಕೆ ಭಕ್ತರನೇಕರು ದನಿಗೂಡಿಸಿ ವ್ಯಾಸರಾಜ ಮಠದ ಪಾವಿತ್ರ?ಕ್ಕೆ ಧಕ್ಕೆ ತಂದಿರುವ ವಿದ್ಯಾಮನೋಹರ ಆ ಸ್ಥಾನದಲ್ಲಿರಲು ಅರ್ಹನಲ್ಲ ಅಂತ ಛೀಮಾರಿ ಹಾಕಿದರು.



ಆದರೆ ಭಂಡತನವೇ ಜೀವ ಪಡೆದು ಖಾವಿ ಸುತ್ತಿಕೊಂಡಿರುವ ವಿದ್ಯಾಮನೋಹರ "ಹಂಗೇನೂ ಇಲ್ಲ, ಸುಮ್ನೆ ಕಡಪದ ಕಡೆ ಹೋಗಿದ್ದೆ" ಎಂಬರ್ಥದಲ್ಲಿ ಮಾತಾಡಿ ನುಣುಚಿಕೊಳ್ಳಲೆತ್ನಿಸಿದ. ಆದರೆ ಕಡಪ ಟೌನ್ ಪೊಲೀಸ್ ಠಾಣೆಯಿಂದ ಬಸವನಗುಡಿ ಠಾಣೆಗೆ ಮಾಹಿತಿ ನೀಡಿಯೇ ವಿದ್ಯಾಮನೋಹರನನ್ನು ಎಳೆದುಕೊಂಡು ಹೋಗಿರುವುದಕ್ಕೆ ದಾಖಲೆಗಳು ಸಿಗುತ್ತವೆ! ಅಷ್ಟಕ್ಕೂ ಮಠದ ನಿಯಮದ ಪ್ರಕಾರ ಯಾರೇ ಸ್ವಾಮೀಜಿ ಬೇರೆಡೆ ಹೋಗಬೇಕಾದರೂ ದೇವರ ಪೆಟ್ಟಿಗೆ, ದಂಡದೊಂದಿಗೆ ಕೆಲ ಸಿಬ್ಬಂದಿಯನ್ನೂ ಕರೆದುಕೊಂಡು ಹೋಗಬೇಕು ಎಂಬ ನಿಯಮವಿದೆ. ಆಕ್ರೋಶಗೊಂಡ ಭಕ್ತರು ಅದನ್ನಾಕೆ ಬಿಟ್ಟೋದ್ರಿ ಸ್ವಾಮಿ ಅಂದರೆ, ಕಳ್ಳನ ಕಾವಿ ಒದ್ದೆಯಾಗಲಾರಂಭಿಸಿತ್ತು!

ವಿದ್ಯಾಮನೋಹರನ ಪೂರ್ವಾಶ್ರಮವನ್ನೊಮ್ಮೆ ತಡಕಾಡಿದರೆ ಆತನ ಇಂದಿನ ವರ್ತನೆ ಅಷ್ಟೇನೂ ಆಶ್ಚರ್ಯ ಹುಟ್ಟಿಸುವುದಿಲ್ಲ. ಇಂಥವನನ್ನು ಪೀಠಾಧೀಶನನ್ನಾಗಿಸಿದ್ದರಲ್ಲಿ ವಿದ್ಯಾವಾಚಸ್ಪತಿಗಳ ಲಂಪಟತನದ ಹೊರತಾಗಿ ಬೇರ್‍ಯಾವ ಕಾರಣಗಳೂ ಸಿಗುವುದಿಲ್ಲ. ತಮ್ಮ ಅವಧಿಯಲ್ಲೇ ಮಠವನ್ನು ಮನಬಂದಂತೆ ಎಕ್ಕುಟ್ಟಿಸಿದ್ದ ವಾಚಸ್ಪತಿಗಳು ಆ ಪರಂಪರೆಯನ್ನು ತನ್ನ ಮಕ್ಕಳೇ ಮುಂದುವರೆಸಬೇಕೆಂಬ ಅಪೇಕ್ಷೆ ಹೊಂದಿದ್ದರು. ತನ್ನ ಮಗ ಶುಕ್ರಾಚಾರ್ಯನನ್ನೇ ಪೀಠಕ್ಕೆ ಕೂರಿಸುವ ಮನಸ್ಸಿತ್ತಾದರೂ ಮಠದ ನಿಯಮ ಅಡ್ಡಬಂತು. ಹಾಗಂತ ಬೇರ್‍ಯಾರಿಗೋ ಅಧಿಕಾರ ಬಿಟ್ಟು ಕೊಡಲು ವಾಚಸ್ಪತಿಗಳ ವೃದ್ಧ ಆತ್ಮ ಬಿಲ್‌ಕುಲ್ ತಯಾರಿರಲಿಲ್ಲ. ಅಂತಹದೊಂದು ಸಂದಿಗ್ಧ ಸ್ಥಿತಿಯಲ್ಲಿರುತ್ತಲೇ ಶ್ರೀಗಳ ಕಣ್ಣಿಗೆ ಬಿದ್ದವನು ಅವರ ಮಗ ಉದ್ಧವಾಚಾರ್ಯನ ಪುಂಡ ಪುತ್ರ ಶರತ್!

ಮೈಸೂರಿನಲ್ಲಿ ತೀರಾ ಕನಿಷ್ಠ ಮಾರ್ಕು ತೆಗೆದು ಎಸ್ಸೆಸ್ಸೆಲ್ಸಿಯಲ್ಲಿ ಬಚಾವಾಗಿದ್ದ ಶರತ್ ಪುಂಡ ಪೋಕರಿತನಗಳನ್ನೇ ಮೈಗೂಡಿಸಿಕೊಂಡಿದ್ದವನು. ಹಿರಿಯರ ಒತ್ತಾಸೆಯ ಮೇರೆಗೆ ಇಂಜಿನಿಯರಿಂಗ್ ಡಿಪ್ಲೊಮಾ ಸೇರಿದನಾದರೂ ಕೆಲವೇ ದಿನಗಳಲ್ಲಿ ಹೊರಬಿದ್ದು ಅಂಡಲೆಯಲಾರಂಭಿಸಿದ್ದ. ವೇದ-ಸಂಸ್ಕೃತ ಯಾವುದಕ್ಕೂ ಈತನ ಮೆದುಳಲ್ಲಿ ಜಾಗವಿರಲಿಲ್ಲ.

ಇಂಥವನನ್ನು ವಿದ್ಯಾವಾಚಸ್ಪತಿಗಳು 2004ರಲ್ಲಿ ಚೆನ್ನೈಗೆ ಎಳೆದೊಯ್ದು ಖಾವಿ ತೊಡಿಸಿ ದೀಕ್ಷೆ ನೀಡಿದರು. ಇದರ ವಿರುದ್ಧ ಮಠದ ಕಟ್ಟರ್ ಭಕ್ತರೇ ಕೆಂಡಾಮಂಡಲವಾದರು. ಇಂಥ ವಂಚನೆಯ ವಿರುದ್ಧ ಭಕ್ತರೇ ಸೇರಿಕೊಂಡು ಶ್ರೀ ವ್ಯಾಸರಾ ಸೇವಾ ಸಮಿತಿ ಅಂತೊಂದು ಸಂಘ ಕಟ್ಟಿಕೊಂಡು ಅಖಾಡಕ್ಕಿಳಿದರು. ಇಂದಿಗೂ ಇದರ ಸದಸ್ಯರ ಹೋರಾಟಗಳು ಮುಂದುವರೆಯುತ್ತಲೇ ಇವೆ. ಆದರೆ ವಿದ್ಯಾಮನೋಹರನೆಂಬ ಪೀಡೆ ಮಠದಿಂದ ತೊಲಗುವ ಲಕ್ಷಣಗಳಿಲ್ಲ.

ಇಂದಿಗೂ ಈತನ ಪೂಜಾಶೈಲಿ, ವರ್ತನೆಗಳು ಬದಲಾಗಿಲ್ಲ. ಈ ಬಗ್ಗೆ ಸಾಮಾನ್ಯ ಭಕ್ತರೂ ಆಡಿಕೊಳ್ಳುವಂತಾಗಿದೆ. ವಿಗ್ರಹವನ್ನು ಈ ಕಡೆಯಿಂದ ಆ ಕಡೆ ಎತ್ತಿಡುವುದೇ ಈತನ ಪಾಲಿಗೆ ಪೂಜೆ. ಗೌಜಿನ ನಡುವೆ ಬಾಯಾಡಿಸುವುದೇ ಮಂತ್ರ! ತೀರಾ ಬೆದರಿಕೆ ಹಾಕಿದರೂ ನೆಟ್ಟಗೆ ನಾಲ್ಕು ಸಂಸ್ಕೃತ ಬಾರದ ಈತನನ್ನು ಈಗ ವರ್ಷದ ಹಿಂದೆ ಚಾತುರ್ಮಾಸ ವಿಧಿಯನ್ವಯ ಶಾಸ್ತ್ರ ಕಲಿಯಲೋಸುಗ ಶಿವಮೊಗ್ಗದ ಬಾಳಗಾರು ಮಠಕ್ಕಟ್ಟಲಾಗಿತ್ತು. ಇದು ನಿಜವಾದ ಭಕ್ತಿಯಿರುವವರಿಗೆ ಅತ್ಯಂತ ಪೂಜನೀಯ ವಿಚಾರ. 45 ದಿನಗಳ ಕಾಲ ಧ್ಯಾನ, ಕಲಿಕೆಯಲ್ಲೇ ತೊಡಗಬೇಕಾಗುತ್ತದೆ. ಆದರೀತ ಆ ಅವಧಿಯಲ್ಲಿ ಒಂದು ಶ್ಲೋಕವನ್ನೂ ಕಲಿಯಲಿಲ್ಲ. ಬಾಳಗಾರು ಮಠದ ಹಿರಿಯ ಸ್ವಾಮೀಜಿ ಮುಂಜಾನೆ 5 ಗಂಟೆಗೆ ಎದ್ದು ಭಕ್ತಿ ದಿನಚರಿ ಆರಂಭಿಸಿದರೆ ಗಡವ ವಿದ್ಯಾಮನೋಹರ 8 ಗಂಟೆ ಹೊತ್ತಿಗೆ ಆಕಳಿಸುತ್ತಾ ಏಳುತ್ತಿದ್ದ. ಅದಾದನಂತರ ಮಲಗುತ್ತಿದ್ದ. -ಇದು ವಿದ್ಯಾಮನೋಹರ ಎಂಥವನೆಂಬುವುದಕ್ಕೆ ಸಣ್ಣದೊಂದು ಸ್ಯಾಂಪಲ್ ಅಷ್ಟೇ!

ಇಂಥ ದರಿದ್ರ ಆಸಾಮಿಯನ್ನು ಪ್ರಜ್ಞೆ ಇರುವ ಯಾರೂ ಸ್ವಾಮೀಜಿಯೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸದ್ಯ ವ್ಯಾಸರಾಯ ಮಠದ ಬಹುತೇಕ ಭಕ್ತರು ಅದೇ ಮನಸ್ಥಿತಿ ಹೊಂದಿ ವ್ಯಾಸರಾಯ ಸೇವಾ ಸಮಿತಿ ಸೇರಿಕೊಂಡಿದ್ದಾರೆ. ಸ್ವಾಮಿಯ ವಿರುದ್ಧ ಭಕ್ತರಲ್ಲಿ ಎಂಥಾ ಅಸಹ್ಯವಿದೆಯೆಂದರೆ ಈ ಬಾರಿ ಮಠದವರು ಪ್ರಿಂಟು ಹಾಕಿಸಿರುವ ಪಂಚಾಂಗವನ್ನು ಯಾರೂ ಮುಟ್ಟಿ ನೋಡಿಲ್ಲ. ವ್ಯಾಸರಾಯ ಸೇವಾ ಸಮಿತಿಯ ಪಂಚಾಂಗಗಳನ್ನೇ ಎಲ್ಲಾ ಕೊಂಡಿದ್ದಾರೆ. ಇದು ಭಕ್ತರ ಸಾತ್ವಿಕ ಆಕ್ರೋಶವಷ್ಟೇ.

ಆದರೆ ಮಠವನ್ನು ಪೂರ್ತಿ ಎಕ್ಕುಟ್ಟಿಸುವ ಪಣ ತೊಟ್ಟವನಂತೆ ವರ್ತಿಸುತ್ತಿರುವ ವಿದ್ಯಾಮನೋಹರ, ನಟರಾಜ ಜೋಯಿಸ ಎಂಬಾತನನ್ನ ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದಾನೆ. ಈತ ಸ್ವಾಮಿ ಹೇಳಿದ್ದಕ್ಕೆಲ್ಲಾ ಗೋಣಾಡಿಸುವ ಆಸಾಮಿ. ಇವನನ್ನಿಟ್ಟುಕೊಂಡೇ ಇನ್ನಷ್ಟು ಮಠದ ದುಡ್ಡು ಭೂಮಿ ಹೊಡೆಯುವ ಸ್ಕೆಚ್ಚು ವಿದ್ಯಾಮನೋಹರನದ್ದು.

ಸ್ವಾಮಿಯಾಗುವುದಿರಲಿ, ವ್ಯಾಸರಾಜ ಮಠದ ಬಾಗಿಲು ಕಾಯೋ ಯೋಗ್ಯತೆಯೂ ಇಲ್ಲದ ವಿದ್ಯಾಮನೋಹರನನ್ನ ಕಾವಿ ಬಿಚ್ಚಿ ಮನೆಗಟ್ಟಿ ನಿಜವಾದ ಭಕ್ತಿಗೆ ಆಸ್ಪದ ಕೊಡುವ ಕೆಲಸ ತುರ್ತಾಗಿ ಆಗಬೇಕಿದೆ. ಸದ್ಯ ಭಕ್ತಗಣದ ನಿರೀಕ್ಷೆಯೂ ಅದೇ.....

• ಸಂತೋಷ್ ಬಾಗಿಲಗದ್ದೆ

ನಡುರಾತ್ರಿ ಬಂದು ಹುಂಡಿ ಒಡೀತಾನೆ!

ವಿದ್ಯಾಮನೋಹರನ ಸ್ವಾಮೀಜಿಯ ರೂಪದಲ್ಲಿ ಮಠ ಹೊಕ್ಕ ದರೋಡೆಕೋರನೆಂಬುದು ಆತನ ನಡವಳಿಕೆಗಳಿಂದಲೇ ಸಾಬೀತಾಗುತ್ತದೆ. ಈತ ಬರೀ ಮಠದ ಆಸ್ತಿಪಾಸ್ತಿಗಳನ್ನಷ್ಟೇ ಅಡ ಇಟ್ಟಿಲ್ಲ, ಬದಲಾಗಿ ಹುಂಡಿಯ ಕಾಸನ್ನೂ ರಾಜಾರೋಷವಾಗಿ ಉಡಿತುಂಬಿಸಿಕೊಳ್ಳುತ್ತಿದ್ದಾನೆ.

ಸೋಸಲೆ ವ್ಯಾಸರಾಯ ಮಠದ ಶಾಖೆಗಳು ದೇಶಾದ್ಯಂತ ಹಬ್ಬಿಕೊಂಡಿರುವುದರಿಂದ ಇದಕ್ಕೆ ಯಥೇಚ್ಛ ಭಕ್ತ ಗಣವಿದೆ. ಆದುದರಿಂದಲೇ ಅಗಾಧವಾಗಿ ಹುಂಡಿ ಕಾಸೂ ಹರಿದುಬರುತ್ತದೆ. ಇದು ಪೋಲಾಗಬಾರದೆಂಬ ಉದ್ದೇಶದಿಂದಲೇ ಪ್ರತೀ ಸಾರಿ ಹುಂಡಿ ತೆರೆದಾಗಲೂ ನಾಲ್ಕೈದು ಜನರ ಮುಂದೆ ಲೆಕ್ಕ ಮಾಡಿ ಸೀಲ್‌ಹಾಕಿಸಿಕೊಂಡು ಒಟ್ಟು ಹಣವನ್ನು ಮಠದ ಅಕೌಂಟ್‌ಗೆ ಜಮಾ ಮಾಡಬೇಕೆಂಬ ನಿಯಮ ರೂಪಿಸಲಾಗಿದೆ.

ಆದರೆ ವಿದ್ಯಾಮನೋಹರ ಗಾದಿಗೇರಿದ ಇಷ್ಟು ವರ್ಷದಲ್ಲಿ ಒಂದೇ ಒಂದು ಸಾರಿಯೂ ಆ ನಿಯಮ ಪಾಲಿಸಿಲ್ಲ. ಹೆಚ್ಚು ಕಾಲ ಮೈಸೂರಿನ ಮಠದಲ್ಲೇ ಠಿಕಾಣಿ ಹೂಡುವ ಈತ ನಡುರಾತ್ರಿಯ ಹೊತ್ತಿಗೆ ಇನ್ನೋವಾ ಕಾರಿನಲ್ಲಿ ಗಾಂಧಿಬಜಾರಿನ ಶಾಖೆಗೆ ಬಂದಿಳಿಯುತ್ತಾನೆ. ರಾಜಾರೋಷವಾಗಿ ಹುಂಡಿಯ ಕಾಸನ್ನ ತುಂಬಿಕೊಂಡು ಕಣ್ಮರೆಯಾಗುತ್ತಾನೆ. ಇತರೆ ಶಾಖೆಗಳ ಹುಂಡಿಗಳಿಗೂ ಇದೇ ಗತಿ. ತಿಂಗಳಿಗೆ ಎರಡು ಮೂರು ಬಾರಿ ಈ ರೀತಿ ದರೋಡೆ ನಡೆಸುವ ವಿದ್ಯಾಮನೋಹರ ಈ ಹುಂಡಿ ಕಾಸಿನ ಬಗ್ಗೆ ಇಂದಿಗೂ ಸಮಗ್ರ ಮಾಹಿತಿಯಾಗಲಿ, ಲೆಕ್ಕವಾಗಲೀ ನೀಡಿಲ್ಲ.

ಕಾವಿ ಉಟ್ಟವರನ್ನು ಸರ್ವಸಂಗ ಪರಿತ್ಯಾಗಿಗಳು, ಲೌಕಿಕದ ಲಾಲಸೆಗಳನ್ನು ಮೀರಿದವರು ಅಂತೆಲ್ಲ ಭಾವಿಸಲಾಗುತ್ತದೆ. ಆದರೀತ ಅದಕ್ಕೆಲ್ಲ ತದ್ವಿರುದ್ಧ ದುಬಾರಿ ರೇಟಿನ ವಾಹನಗಳ ಹುಚ್ಚುಹತ್ತಿಸಿಕೊಂಡು ಇನ್ನೋವಾ, ಸ್ಕಾರ್ಪಿಯೋ ವಾಹನಗಳನ್ನು ಮಠದ ದುಡ್ಡಲ್ಲೇ ಖರೀದಿಸಿ ಮಜಾ ಉಡಾಯಿಸುತ್ತಿದ್ದಾನೆ. ಆದರೆ ಇದಕ್ಕೆ ಕಟ್ಟಬೇಕಾದ ಕಂತನ್ನ ಕಟ್ಟದೇ ಯಾಮಾರಿಸುವ ಕಲೆಯೂ ಈತನಿಗೆ ಸಿದ್ಧಿಸಿದೆ. ಅದೆಷ್ಟೋ ಸಲ ಕಂಪೆನಿಯ ಅಧಿಕಾರಿಗಳು ಮಠಕ್ಕೆ ನುಗ್ಗಿ ವಿಚಾರಿಸಿದ್ದಿದೆ. ಇತ್ತೀಚೆಗಂತೂ ಮಠದ ಬಸ್ಸೊಂದನ್ನು ಅಧಿಕಾರಿಗಳು ಸೀಜ್ ಮಾಡಲು ಮುಂದಾಗಿದ್ದರು.

ಒಟ್ಟಾರೆಯಾಗಿ ಮಠವೊಂದರಲ್ಲಿ ಏನೇನು ನಡೆಯಬಾರದೋ ಅದೆಲ್ಲ ವ್ಯಾಸರಾಯ ಮಠದಲ್ಲಿ ನಡೆಯುತ್ತಿವೆ. ಸ್ವಾಮೀಜಿಯಾದವನು ಯಾವುದನ್ನು ಮಾಡಬಾರದೋ ಅದನ್ನು ವಿದ್ಯಾಮನೋಹರ ಬಲು ಆಸ್ಥೆಯಿಂದ ಮಾಡುತ್ತಿದ್ದಾನೆ! ಇಂಥವನನ್ನ ಭಕ್ತರು ಏನಂತ ಸಹಿಸಿಯಾರು?

ಶಾಖೆ ಇರುವಲ್ಲೆಲ್ಲ ಸಖಿಯರಯ್ಯ!

ಈ ಆಸಾಮಿ ಭೂಗಳ್ಳತನವೂ ಸೇರಿದಂತೆ, ಹುಂಡಿಕಾಸನ್ನೂ ಕದ್ದು ಏನು ಮಾಡ್ತಾನೆ? ಸ್ವಾಮಿಗಳಿಗೆ ಅಷ್ಟೊಂದು ಹಣ ಕರಗಿಸುವಂಥ ಯಾವ ಸಮಸ್ಯೆಯಿದೆ? -ಇಂಥ ಅಸಂಖ್ಯ ಪ್ರಶ್ನೆಗಳು ವಿದ್ಯಾಮನೋಹರನ ಸುಂಗಾಟ ಗಮನಿಸಿ ದವರನ್ನು ಕಾಡುವುದು ಸಹಜವೇ. ಈ ಪ್ರಶ್ನೆಗಳು ನಮ್ಮನ್ನೂ ಕಾಡಿಸಿದ್ದವು. ಕದ್ದ ಕಾಸೆಲ್ಲ ವಾಹನ ಖರೀದಿ ಖಯಾಲಿಗೆ ಕರಗಿರಬಹುದಾ ಅಂತ ನೋಡಹೋದರೆ ಆದಕ್ಕೂ ನ್ಯಾಯವಾಗಿ ಕಂತು ಕಟ್ಟದೆ ಸತಾಯಿಸುತ್ತಿದ್ದಾನೆ. ಕದ್ದ ಕಾಸಿಗೆ ಸಾಟಿಯಾಗಬಲ್ಲ ಯಾವುದೇ ಪ್ರಾಪರ್ಟಿಗಳೂ ಈತನಿಗಿದ್ದಂತಿಲ್ಲ. ತೀರಾ ಹುಡುಕಾಡಿದರೆ ಎಲ್ಲವನ್ನು ಮೀರಿಸುವಂತಹ ಖಯಾಲಿಯೊಂದು ಶ್ರೀ ವಿದ್ಯಾಮನೋಹರನಿಗಿದೆ. ಅದು ಸೆರಗಿಗೆ ಸಂಬಂಧಿಸಿದ್ದು! ಒಂದು ಮೂಲದ ಪ್ರಕಾರ ವಿದ್ಯಾಮನೋಹರ ಕದ್ದ ಕಾಸೆಲ್ಲ ಈ ಖಯಾಲಿಗೇ ಹರೋಹರ ಅನ್ನುತ್ತಿದೆ. ಹಾಗಂತ ತನ್ನ ಬಳಿ ಬರುವ ಭಕ್ತೆಯರಿಗೆ ಯಾವುದೇ ರೀತಿಯ ಕಾಟ ಕೊಟ್ಟ ಉದಾಹರಣೆಗಳಿಲ್ಲ. ಆದರೆ ಭಕ್ತರ ವಲಯದ ಹೊರತಾಗಿ ಎಲ್ಲೆಲ್ಲಿ ಮಠದ ಶಾಖೆಗಳಿವೆಯೋ ಅಲ್ಲೆಲ್ಲಾ ಈತನಿಗೆ ಸಖಿಯರಿದ್ದಾರೆಂಬ ವಿಚಾರ ಮಠದ ಅಂಗಳಲ್ಲೇ ಹರಿದಾಡುತ್ತಿದೆ. ತನಗೆ ಶರಣುಬಂದ ಸಖಿಯರನ್ನಷ್ಟೇ ಅಲ್ಲದೆ ಅವರ ಇಡೀ ಕುಟುಂಬವನ್ನು ಪೊರೆಯುವ ಜವಾಬ್ದಾರಿಯನ್ನು ಸ್ವಾಮಿಗಳು ತೆಗೆದುಕೊಳ್ಳುತ್ತಾರೆ. ಅದಕ್ಕೆ, ನಂಜನಗೂಡು ಭಾಗದಲ್ಲಿರುವ ಸ್ವಾಮಿಗಳ ಮುಖ್ಯ ಸಖಿ ಪೇದ (ಹೆಸರು ಬದಲಿಸಿದೆ)ಳ ಮಕ್ಕಳ ಮುಂಜಿಯನ್ನೂ ಶ್ರೀಗಳೇ ಮುಂದೆ ನಿಂತು ಮಾಡಿಸಿರುವುದು ಸ್ಪಷ್ಟ ಉದಾಹರಣೆ. ಕಾವಿ ತೊಟ್ಟೇ ಈ ರೀತಿ ದಗಲ್ಬಾಜಿ ನಡೆಸುತ್ತಿರುವ ಈ ಅವಿವೇಕಿಗೆ ಯಾವುದರಲ್ಲಿ ಹೊಡೆಯಬೇಕು?

ಅಕ್ಕನ ಮದುವೆ ಅದ್ದೂರಿ

ಕೌಟುಂಬಿಕ ವ್ಯಾಮೋಹ ವಿಚಾರದಲ್ಲಿ ವಿದ್ಯಾಮನೋಹರ ತನ್ನಜ್ಜ ವಿದ್ಯಾವಾಚಸ್ಪತಿಯವರನ್ನೇ ಮೀರಿಸುವಂತಿದ್ದಾನೆ. ಈತನ ಪಾಲಿಗೆ ಮಠವೇ ಮನೆ, ಮನೆಯೇ ಮಠ! ವಿದ್ಯಾಮನೋಹರ 2009ರ ಆಗಸ್ಟ್ ತಿಂಗಳಲ್ಲಿ ತನ್ನಕ್ಕ ಪ್ರೀತಿಯ ಮದುವೆಯನ್ನು ಗುರುಪ್ರಸಾದ್ ಎಂಬಾತನೊಂದಿಗೆ ಭಲೆ ಅದ್ದೂರಿಯಾಗಿ ಮಾಡಿ ಮುಗಿಸಿದ್ದಾನೆ. ತಾನು ಸನ್ಯಾಸ ಸ್ವೀಕರಿಸಿದ್ದೇನೆಂಬ ಪರಿವೆಯೇ ಇಲ್ಲದಂತೆ ಎಲ್ಲವನ್ನೂ ತಾನೇ ಮುಂದೆ ನಿಂತು ಮಾಡಿ ಮುಗಿಸಿದ್ದಾನೆ. ಈ ಮದುವೆಗೆ ಸ್ವಾಮಿ ತರಹೇವಾರಿ ರೀತಿಯಲ್ಲಿ ಮಾಡಿದ ಖರ್ಚು ಎಂಥವರನ್ನೂ ದಂಗು ಬಡಿಸುವಂತಿದೆ.

ಮೈಸೂರಿನ ಹೈಟೆಕ್ ಅಂಗಡಿಯೊಂದರಲ್ಲಿ ಅಖಂಡ 2 ಲಕ್ಷದ ಸೀರೆ ಖರೀದಿಸಿರುವ ವಿದ್ಯಾಮನೋಹರ ಭೀಮಾ ಜ್ಯುವೆಲ್ಲರಿಯಿಂದ ಎರಡ್ಮೂರು ಲಕ್ಷ ಮೌಲ್ಯದ ಚಿನ್ನಾಭರಣ ಕೊಂಡಿದ್ದಾನೆ. ಇಷ್ಟೇ ಅಲ್ಲದೆ ಮದ್ರಾಸಿನಲ್ಲೂ ಲಕ್ಷಾಂತರ ಮೌಲ್ಯದ ಚಿನ್ನ ಖರೀದಿಸಿದ್ದಾನೆಂಬ ಗುಮಾನಿಗಳಿವೆ. ಮೈಸೂರಿನ ವಿದ್ಯಾಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ನಡೆದ ಈ ಮದುವೆ ಅಕ್ಷರಶಃ ಹೈಟೆಕ್, ಅದ್ದೂರಿಯಾಗಿತ್ತು. ಕಳ್ಳ ಸನ್ಯಾಸಿ ಇವೆಲ್ಲವನ್ನು ಮಠದ ಕೈಂಕರ್ಯಗಳಿಗಿಂತಲೂ ಮುತುವರ್ಜಿಯಿಂದ ಮಾಡಿ ಮುಗಿಸಿದ್ದ.

ಭಕ್ತರ ಹಣ ಇದೇ ರೀತಿ ಯಾವ್ಯಾವ ಕೆಲಸಗಳಿಗೆ ಕರಗಿದೆಯೋ ಯಾರಿಗೆ ಗೊತ್ತು?


ಅಶೋಕ್ ಮನೆಯಲ್ಲಿ ಪುಟ್ರಾಜು ಮತ್ತು ಲಕ್ಷ್ಮಿನಾರಾಯಣ



ರವೀಂದ್ರನಿಗೂ ಮುನ್ನ ಸೋಮಣ್ಣನ ಎಡಗೈ ಬಲಗೈಯಂತಿದ್ದವರು ಮಾಜಿ ಉಪ ಮೇಯರ್ ಪುಟ್ರಾಜು ಮತ್ತು ಗಾಳಿ ಆಂಜನೇಯ ವಾರ್ಡಿನ ಮಾಜಿ ಕೌನ್ಸಿಲರ್ ಲಕ್ಷ್ಮಿನಾರಾಯಣ. ಸೋಮಣ್ಣನ ದುರಂತವೋ ಎಂಬಂತೆ ಅವರಿಬ್ಬರೂ ಈಗ ಅಶೋಕ್ ಮನೆಯಲ್ಲಿ ರಿಹಾಣಿ ಹಾಕಿದ್ದಾರೆ.

ಇವರಿಬ್ಬರ ಏಕೋದ್ದೇಶವಿಷ್ಟೆ. ಹೇಗೂ ಮುಂದಿನ ಚುನಾವಣೆಯಲ್ಲಿ ಸೋಮಣ್ಣ ಗೋವಿಂದರಾಜನಗರಕ್ಕೆ ನಿಲ್ಲಲಾರ. ನಿಂತರೂ ಪ್ರಿಯಾಕೃಷ್ಣನ ಮುಂದೆ ಗೆಲ್ಲಲಾರ. ಆದಕ್ಕೆ ಅಶೋಕರನ್ನೇ ಗೋವಿಂದರಾಜನಗರಕ್ಕೆ ಕರೆತರುವುದು. ಮೊದಲೇ ಗೋವಿಂದರಾಜನಗರ ಒಕ್ಕಲಿಗರ ಭದ್ರಕೋಟೆಯಾದ್ದರಿಂದ ಅಶೋಕ್ ಸಲೀಸಾಗಿ ಗೆದ್ದು ಬಿಡುತ್ತಾರೆ. ಲೇಔಟ್ ಕೃಷ್ಣಪ್ಪ ಬೇರೆ ಅಶೋಕ್ ಹಿತೈಷಿಯಾದ್ದರಿಂದ ತಮ್ಮ ಮಗನನ್ನು ಡೆಮ್ಮಿ ಮಾಡಿ ಅಶೋಕ್ ಗೆಲ್ಲಲು ಸಹಕರಿಸುತ್ತಾರೆ. ಹಾಗೇ ವಿಜಯನಗರಕ್ಕೆ ಕೃಷ್ಣಪ್ಪನವರ ವಿರುದ್ಧ ಬಿಜೆಪಿ ಡೆಮ್ಮಿ ಕ್ಯಾಂಡಿಡೇಟ್ ನಿಲ್ಲಿಸುತ್ತದೆಯಾದ್ದರಿಂದ ಅಲ್ಲೂ ಒಕ್ಕಲಿಗರ ಕೃಷ್ಣಪ್ಪ ಗೆದ್ದು ಸೋಮಮ್ಣರನ್ನು ವಿಜಯನಗದಿಂದ ಕಾಯಮ್ಮಾಗಿ ಜಾಗ ಖಾಲಿ ಮಾಡಿಸಿದಂತಾಗುತ್ತದೆ.

ಇದು ಪುಟ್ರಾಜು ಮತ್ತು ಲಕ್ಷ್ಮಿನಾರಾಯಣ ಸೇರಿಕೊಂಡು ಅಶೋಕ್ ತಲೆಗೆ ಹುಳಬಿಟ್ಟಿರುವ ಪರಿ.



ಸದ್ಯ ಅಶೋಕ್ ಕೂಡ ಗೋವಿಂದರಾಜನಗರಕ್ಕೆ ವಲಸೆ ಬರದೇ ಬೇರೆ ದಾರಿಯಿಲ್ಲ. ಏಕೆಂದರೆ ಪದ್ಮನಾಭನಗರದಲ್ಲಿ ಅಶೋಕ್ ಪರಿಸ್ಥಿತಿ ನೆಟ್ಟಗಿಲ್ಲ. ಕಳೆದ ಚುನಾವಣೆಯಲ್ಲಿ ಅಶೋಕ್ ಗೆಲ್ಲಲು ಪರೋಕ್ಷವಾಗಿ ನೆರವಾಗಿದ್ದು ಜೆಡಿಎಸ್ ನಾಯಕ ದೇವೇಗೌಡರು. ತಮ್ಮವನೆಂಬ ಹಂಗಿಗೆ ಬಿದ್ದೇ ಕುಮಾರಸ್ವಾಮಿ-ದೇವೇಗೌಡರು ಅಶೋಕ್ ಗೆಲುವಿಗೆ ನೆರವಾದರು. ಜೆಡಿಎಸ್ ಅಭ್ಯರ್ಥಿ ಕಬಡ್ಡಿ ಬಾಬು ಪರ ಒಂದೇ ಒಂದು ದಿನವೂ ಪ್ರಚಾರಕ್ಕೆ ಬರಲಿಲ್ಲ, ಈಗ ಹಾಗಿಲ್ಲ, ಅಶೋಕ್ ಮತ್ತು ಕುಮಾರಸ್ವಾಮಿ ನಡುವಿನ ಸಂಬಂಧ ಹಳಸಿದೆ. ಪದ್ಮನಾಭನಗರಕ್ಕೇನಾದರೂ ಮತ್ತೆ ಅಶೋಕ್ ಕಾಲಿಟ್ಟರೆಂದರೆ ದೇವೇಗೌಡರ ಫ್ಯಾಮಿಲಿಯವರೇ ಅಲ್ಲಿ ಜೆಡಿಎಸ್ ಅಭ್ಯರ್ಥಿಯಾಗುತ್ತಾರೆ. ಸರಿಸುಮಾರು 70 ಸಾವಿರದಷ್ಟಿರುವ ಮುಸ್ಲಿಮರೆಲ್ಲ ಸಾರಾಸಗಟಾಗಿ ದೇವೇಗೌಡರ ಬೆನ್ನಿಗೆ ನಿಂತರೆಂದರೆ ಅಶೋಕ್ ಏನೇ ಹರಸಾಹಸ ಮಾಡಿದರೂ ಗೆಲ್ಲುವುದು ಕಷ್ಟ.

ಇದು ಗೊತ್ತಿದ್ದೇ ಅಶೋಕ್ ಗೋವಿಂದರಾಜನಗರಕ್ಕೆ ವಲಸೆ ಬರುತ್ತಿದ್ದಾರೆ. ಸ್ಯಾಂಪಲ್ಲಿಗೆಂದು ಸೋಮಣ್ಣನ ಎಡಗೈ ಬಲಗೈಗಳಂತಿದ್ದ ಪುಟ್ರಾಜು-ಲಕ್ಷ್ಮಿನಾರಾಯಣರನ್ನು ಪಳಗಿಸಿ ಎಮ್ಮೆಲ್ಸಿ ಅಶ್ವತ್ಥನಾರಾಯಣನ ಜೊತೆ ಮಾಡಿದ್ದಾರೆ. ಸೋಮಣ್ಣನಿಗೆ ಗೋವಿಂದರಾಜ ನಗರಕ್ಕೆ ಮತ್ತೊಮ್ಮೆ ನಿಲ್ಲುವ ಧೈರ್ಯವಿಲ್ಲ, ವಿಜಯನಗರಕ್ಕೆ ಬಂದರೆ ಅಲ್ಲಿ ಕೃಷ್ಣಪ್ಪ ಬಿಡುವುದಿಲ್ಲ, ಇಲ್ಲಿ ರವೀಂದ್ರನ ಕಲೆಗಾರಿಕೆಯೆಂದರೆ ಅಶೋಕ್ ಪರ ಡೆಮ್ಮಿ ಅಭ್ಯರ್ಥಿಯಾಗಿ ತಾನು ಲೇಔಟ್ ಕೃಷ್ಣಪ್ಪನವರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗುವುದು!

ಆದರೆ ಲಕ್ಷ್ಮಿನಾರಾಯಣ ಬಿಡಬೇಕಲ್ಲ, ವಿಜಯನಗರಕ್ಕೆ ತಾನೇ ಮುಂದಿನ ಬಿಜೆಪಿ ಅಭ್ಯರ್ಥಿ ಎಂದು ಈಗಾಗಲೇ ಒಂದು ರೌಂಡ್ ಪ್ರಚಾರ ಮುಗಿಸಿರುವ ಲಕ್ಷ್ಮಿನಾರಾಯಣ ರವೀಂದ್ರನನ್ನು ಸುಮ್ಮನೆ ಬಿಡುತ್ತಾನಾ? ಹಾಗೊಮ್ಮೆ ರವೀಂದ್ರನೇ ನಿಂತನೆಂದರೆ ಕೈ ಕಟ್ಟಿ ಕೂರುವುದುಂಟಾ? ಸೋಮಣ್ಣನ ವಿರುದ್ಧ ಆತನ ಶಿಷ್ಯರೇ ಕತ್ತಿ ಮಸೆಯುತ್ತಿದ್ದಾರೆ. ಜೊತೆಗೆ ತಂತಮ್ಮಲ್ಲೇ ಕಿತ್ತಾಡುತ್ತಿದ್ದಾರೆ. ಸೋಮಣ್ಣನ ಸಾಮ್ರಾಜ್ಯದ ದುರ್ಗತಿಗೆ ಏನೆನ್ನಬೇಕೋ?




ಅಶೋಕ್ ಕಪಟನಾಟಕ ಶಿಷ್ಯ ರವೀಂದ್ರ ಸೋಮಣ್ಣನ ಬುಡಕ್ಕೇ ಬೆಂಕಿ ಇಟ್ಟ

ಅಶೋಕ್ ಮತ್ತು ಸೋಮಣ್ಣನ ನಡುವಿನ ಜಿದ್ದಾಜಿದ್ದಿ ಮತ್ತು ವೈಷಮ್ಯಕ್ಕೆ ಸದ್ಯ ರವೀಂದ್ರ ತುಪ್ಪ ಸುರಿಯುತ್ತಿದ್ದಾನೆ. ಇಬ್ಬರ ಮಧ್ಯೆ ತಂದಿಟ್ಟು ತಾನು ದೋಚುತ್ತಿದ್ದಾನೆ. ಅತ್ತ ಅಶೋಕ್‌ಗೂ ಮಕ್ಮಲ್ ಟೋಪಿ ಇತ್ತ ಸೋಮಣ್ಣನಿಗೂ ಪಂಗನಾಮ. ತಾನೇ ಬೆಳೆಸಿದ ಸರ್ಪ ತನಗೇ ಕಚ್ಚುತ್ತದೆ ಎಂದು ಸೋಮಣ್ಣ ಹಣೆ ಚಚ್ಚಿಕೊಳ್ಳುತ್ತಿದ್ದಾನೆ. ಪಕ್ಕಾ ಶಿಷ್ಯ ರವೀಂದ್ರನೇ ಈ ರೀತಿ ಗೂಟ ಹೊಡೆಯುತ್ತಿದ್ದಾನೆಂದರೆ ಇನ್ನು ಸೋಮಣ್ಣನನ್ನೇ ನಂಬಿ ಬಿಜೆಪಿಗೆ ಬಂದ ರೌಡಿ ರಾಣಿ ಶಾಂತಕುಮಾರಿಯಂತವರು ಆಟ ಆಡದೇ ಇರುತ್ತಾರಾ?

ವಿಜಯನಗರದ ಸೋಕಾಲ್ಡ್ ವೀರಪುತ್ರ ಸೋಮಣ್ಣನಿಗೆ ಮಂತ್ರಿಗಿರಿಯಿದೆ, ಅಧಿಕಾರವಿದೆ ನಿಜ. ಆದರೆ ಶತ್ರುಕಾಟಕ್ಕಿಂತ ಶಿಷ್ಯನ ಕಾಟವೇ ವಿಪರೀತವಾದರೆ ಅಂಥಾ ಕರ್ಮಕ್ಕೆ ಏನೆನ್ನಬೇಕು?

ಪುಂಡುಪೋಕರಿಗಳನ್ನು ರಾಜಕೀಯವಾಗಿ ಬೆಳೆಸ ಹೊರಟರೆ ಎಂಥಾ ಗತಿಯಾಗುತ್ತದೆ ಎಂಬುದನ್ನು ಸೋಮಣ್ಣನಿಗೆ ಲೇಟೆಸ್ಟಾಗಿ ತೋರಿಸಿಕೊಡುತ್ತಿದ್ದಾನೆ ಪಕ್ಕಾ ಶಿಷ್ಯ ರವೀಂದ್ರ. ಹಾಲಿ ವಿಜಯನಗರದ ಕೌನ್ಸಿಲರ್, ಬಿಬಿಎಂಪಿಯ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷ, ಮುಂಬರುವ ವಿಧಾನಸಭೆ ಎಲೆಕ್ಷನಿಗೆ ವಿಜಯನಗರದ ಬಿಜೆಪಿ ಟಿಕೆಟ್ ಆಕಾಂಕ್ಷಿ, ಮಹಾನ್ ಕಿಲಾಡಿ, ಪ್ರಚಂಡ ಪ್ರಳಯಾಂತಕ; ಇತ್ಯಾದಿ ಅಸಂಖ್ಯಾತ ಗುಣವಿಶೇಷಗಳ ಎಚ್. ರವೀಂದ್ರ ಈಗ ಗುರು ಸೋಮಣ್ಣನಿಗೇ ಗುನ್ನಾ ಇಕ್ಕಿದ್ದಾನೆ.

ಇತ್ತೀಚೆಗೆ ವಿಜಯನಗರದಲ್ಲಿ ಆದ್ದೂರಿ ಸಾರಿಗೆ ಕಾಂಪ್ಲೆಕ್ಸ್ ಉದ್ಘಾಟನೆಗೆ ಸ್ವತಃ ಮಂತ್ರಿ ಅಶೋಕ್ ಬಂದರಾದರೂ ಸೋಮಣ್ಣನಿಗಿಂತಲೂ ಅಲ್ಲಿ ಮಿಂಚಿದ್ದು ಶಿಷ್ಯ ರವೀಂದ್ರನೇ. ಅದಕ್ಕೂ ಮುನ್ನ ಬಿಬಿಎಂಪಿಯ ವಿವಿಧ ಕಾಮಗಾರಿಗಳ ಭಾರೀ ಸಮಾವೇಶವೇ ನಡೆದು ಮೇಯರ್ ನಟರಾಜ್, ಮಂತ್ರಿ ಅಶೋಕ್, ಸಂಸದ ಅನಂತ್‌ಕುಮಾರ್ ಇತ್ಯಾದಿಗಳೆಲ್ಲರ ಎದುರು ಸೋಮಣ್ಣನಿಗೆ ಮುಖಭಂಗವಾದರೂ ಶಿಷ್ಯ ರವೀಂದ್ರ ಮಾತ್ರ ಗುರುವನ್ನು ಸಂತೈಸುವ ಬದಲು ಆದ ಅಪಮಾನಕ್ಕೆ ಖುಷಿಪಡುತ್ತಿದ್ದ. ಗೆಲ್ಲುವ ತನಕ ಸೋಮಣ್ಣನಿಗೆ ಜೈ ಎಂದು ಗೆದ್ದ ನಂತರ ಜಾತಿಯ ಕ್ಯಾತೆಗೆ ನಿಂತು ಮಂತ್ರಿ ಅಶೋಕ್ ಬಾಲ ಹಿಡಿದ. ಹಿಂದಾದರೆ ತನ್ನೆಲ್ಲಾ ಬ್ಯಾನರು, ಫ್ಲೆಕ್ಸ್, ಕಟೌಟುಗಳಲ್ಲಿ ಸೋಮಣ್ಣನನ್ನೇ ಕುಲ ದೈವದಂತೆ ಮೆರೆಸುತ್ತಿದ್ದ ರವೀಂದ್ರ ಈಗ ಅಶೋಕ್‌ರ ಪರಮಭಕ್ತ, ವಿಜಯನಗರದುದ್ದಕ್ಕೂ ಇಟ್ಟಾಡುವ ರವೀಂದ್ರನ ಕಟೌಟು, ಬ್ಯಾನರುಗಳಲ್ಲಿ ಸೋಮಣ್ಣನ ಫೋಟೋ ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ!




ಅಶ್ವತ್ಥ ನಾರಾಯಣ

ಪಾಪ ಸೋಮಣ್ಣ ತಲೆತಲೆ ಚಚ್ಚಿಕೊಳ್ಳುತ್ತಿದ್ದಾನೆ. ಎಂಥಾ ನನ್ ಮಕ್ಳನ್ನ ಬೆಳೆಸ್ದೆ ನೋಡಿ. ಬಡ್ಡೀಮಕ್ಳು ನನಗೇ ಗೂಟ ಹೊಡೀತಾರಲ್ಲ; ಬಡ್ತೀನಾ? ಎಂದು ಹಲ್ಲು ಕಡಿಯುತ್ತಿರುವ ಸೋಮಣ್ಣನ ಪೇಚಾಟಕ್ಕೆ ಶಿಷ್ಯ ರವೀಂದ್ರನನ್ನೇ ಛೂಬಿಟ್ಟ ಅಶೋಕ್ ಸದ್ಯ ವಿಜಯನಗರದ ಪಾಲಿಗೆ ಕಪಟನಾಟಕ ಸೂತ್ರಧಾರಿ!

ಮೊನ್ನೆ ಬಿಎಂಟಿಸಿಯ ಹೊಸ ಕಾಂಪ್ಲೆಕ್ಸ್ ಉದ್ಘಾಟನೆಗೆಂದು ಮಂತ್ರಿ ಅಶೋಕ್ ವಿಜಯನಗರಕ್ಕೆ ಬಿಜಯಂಗೈಸಿದರಾದರೂ ಸೋಮಣ್ಣ ಮಾತ್ರ ಪತ್ತೆಯಿಲ್ಲ. ಮಿಂಚಿದ್ದು ಸೋಮಣ್ಣನ ಕಡುವೈರಿಗಳಾದ ಲೇಔಟ್ ಕೃಷ್ಣಪ್ಪ ಮತ್ತು ಪ್ರಿಯಾಕೃಷ್ಣ.

ತನ್ನದೇ ಅಖಾಡದಲ್ಲಿ ತಬ್ಬಲಿಯಂತೆ ಸೋಮಣ್ಣ ಮೈ ಪರಚಿಕೊಳ್ಳುತ್ತಿದ್ದರೆ ಪಟ್ಟ ಶಿಷ್ಯ ರವೀಂದ್ರ ಗುರುವನ್ನೇ ಮೀರಿಸಿ ಮೆರೆದಾಡುತ್ತಿದ್ದಾನೆ. ನಿನ್ನೆಮೊನ್ನೆಯ ತನಕ ದಿನಬೆಳಗ್ಗೆಯಾದರೆ ಸೋಮಣ್ಣನ ಮನೆ ಮುಂದೆ ಇಟ್ಟಾಡುತ್ತಿದ್ದ ರವೀಂದ್ರ ಈಗ ಗುರು ಸೋಮಣ್ಣನ ಎದುರಾಳಿ ಅಶೋಕ್ ಛೇಂಬರಿನ ಮುಂದೆ ದ್ವಾರಪಾಲಕ. ಗೆದ್ದು ಅಧಿಕಾರವಿದ್ದೂ ಬಿಜೆಪಿ ಸರ್ಕಾರವಿದ್ದೂ ಹಣೆ ಹಣೆ ಚಚ್ಚಿಕೊಳ್ಳುವಂತೆ ಸೋಮಣ್ಣನ ಬುಡಕ್ಕೆ ಬೆಂಕಿಯಿಟ್ಟು ತಮಾಷೆ ನೋಡುತ್ತಿರುವ ಮಂತ್ರಿ ಅಶೋಕ್‌ಗೆ ಸದ್ಯ ರವೀಂದ್ರನೇ ಲಾಯಕ್ಕಾದ ಅಸ್ತ್ರ

ಇಲ್ಲಿ ಅಶೋಕ್ ಹುನ್ನಾರಕ್ಕೂ ಕಾರಣವಿದೆ. ಬೆಂಗಳೂರಿನ ಮಟ್ಟಿಗೆ ತನ್ನ ಏಕಚಕ್ರಾಧಿಪತ್ಯಕ್ಕೆ ಅತೀ ದೊಡ್ಡ ಅಪಾಯ ಅಂತಿದ್ದರೆ ಅದು ಸೋಮಣ್ಣ ಮಾತ್ರ ಎಂಬುದು ಅಶೋಕ್‌ಗೆ ಚೆನ್ನಾಗಿ ಗೊತ್ತಿದೆ. ಸಂಘಟನೆ, ಚಾಕಚಕ್ಯತೆ ಮತ್ತು ಡೀಲಿನ ವಿಷಯಕ್ಕೆ ಬಂದರೆ ಸೋಮಣ್ಣನ ಮುಂದೆ ತಾನು ಏನೇನೂ ಅಲ್ಲ ಎಂಬುದೂ ಅಶೋಕ್‌ಗೆ ಮನದಟ್ಟಾಗಿದೆ. ಮುಖ್ಯಮಂತ್ರಿ ಯಡ್ಡಿಗೆ ಅಶೋಕ್‌ಗಿಂತಲೂ ಸೋಮಣ್ಣನೇ ಮುಖ್ಯ. ಅದು ಕೇವಲ ಜಾತಿ ಕಾರಣಕ್ಕಷ್ಟೇ ಅಲ್ಲ, ಮುಂದೊಮ್ಮೆ ಅಶೋಕ್‌ಗೆ ಲಗಾಮು ಹಾಕಲು ಸೋಮಣ್ಣನಂಥ ಕಿಲಾಡಿಯೇ ಬೇಕೆಂಬ ದೂರಾಲೋಚನೆ ಕೂಡ. ಇದು ಅಶೋಕ್‌ಗೆ ಯಾವತ್ತೋ ಗೊತ್ತಾಗಿದೆ. ಬೆಂಗಳೂರಿನ ವಿಷಯದಲ್ಲಿ ಕಟ್ಟಾ, ಸುರೇಶ್ ಕುಮಾರ್, ರಾಮಚಂದ್ರಗೌಡ, ವಿಮಲಾ ಗೌಡ, ಪಿ.ಸಿ. ಮೋಹನ್‌ಗಿಂತಲೂ ಸೋಮಣ್ಣ ಇವತ್ತಲ್ಲ ನಾಳೆ ತನಗೆ ಮುಳುಗುನೀರು



ತರುತ್ತಾನೆಂದೇ ಭೀತಿಗೆ ಬಿದ್ದ ಅಶೋಕ್ ವಿಜಯನಗರದ ವಿಷಯದಲ್ಲಿ ಸೋಮಣ್ಣನ ಕಡುವೈರಿ ಲೇಔಟ್ ಕೃಷ್ಣಪ್ಪನವರ ಜೊತೆ ಒಳಗೊಳಗೇ ಕೈಜೋಡಿಸಿದ್ದಾರೆ.

ಸೋಮಣ್ಣನನ್ನು ತುಳಿಯಲೆಂದೇ ಅಶ್ವತ್ಥನಾರಾಯಣ ಎಂಬ ಚಿಲ್ಟಿ ಒಕ್ಕಲಿಗನನ್ನು ತಂದು ಎಮ್ಮೆಲ್ಸಿ ಮಾಡಿದ್ದು ಇದೇ ಅಶೋಕ್. ಏನೇ ಲಗಾಟ ಹೊಡೆದರೂ ಗಾಳಿ ಆಂಜನೇಯ ವಾರ್ಡಿಗೆ ನಿಂತು ಕನಿಷ್ಠ ಕೌನ್ಸಿಲರ್ ಕೂಡ ಆಗಲಾರದ ಅಶ್ವತ್ಥ ನಾರಾಯಣನನ್ನು ಎಮ್ಮೆಲ್ಸಿ ಮಾಡಿದ್ದು ಅಶೋಕ್ ಸೋಮಣ್ಣನಿಗೆ ಹಾಕಿದ ಮೊದಲ ಬರೆಯಾಗಿತ್ತು, ಹಕೀಕತ್ತೇನೆಂದರೆ ಕಳೆದ ಗೋವಿಂದರಾಜ ನಗರ ಉಪಚುನಾವಣೆಯಲ್ಲಿ ಇದೇ ಅಶ್ವತ್ಥನಾರಾಯಣ ಸೋಮಣ್ಣನ

ಉಮೇಶ್ ಶೆಟ್ಟಿಯ ನಾಗರಬಾವಿ ಜಾತ್ರೆಯಲ್ಲಿ....

ಫೆಬ್ರವರಿ 12 ರಂದು ನಾಗರಬಾವಿ ಸರ್ಕಲ್ಲಿನಲ್ಲಿ ನಡೆದ ಬಿಬಿಎಂಪಿಯ ವಿವಿಧ ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ನಡೆದ ರಾದ್ಧಾಂತವೊಂದೇ ವಿಜಯನಗರದ ಕಾಂಗ್ರೆಸ್-ಬಿಜೆಪಿ ಜಿದ್ದಾಜಿದ್ದಿಗೆ ಸಾಕ್ಷಿಯಂತಿತ್ತು,

ಸೋಮಣ್ಣನ ಮತ್ತೊಬ್ಬ ಶಿಷ್ಯ ಉಮೇಶ್ ಶೆಟ್ಟಿಯ ನಾಗರಬಾವಿ ವಾರ್ಡು ಮತ್ತು ಶಾಂತಕುಮಾರಿಯ ಮೂಡಲಪಾಳ್ಯ ವಾರ್ಡಿನ ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಯ ಕಾರ್ಯಕ್ರಮಕ್ಕೆಂದೇ ಮೇಯರ್ ನಟರಾಜ್ ಬಂದಿದ್ದರು. ಸಂಸದ ಅನಂತ್‌ಕುಮಾರ್, ಮಂತ್ರಿ ಅಶೋಕ್, ಸೋಮಣ್ಣ, ಎಮ್ಮೆಲ್ಸಿ ಅಶ್ವತ್ಥನಾರಾಯಣ ಎಲ್ಲರೂ ವೇದಿಕೆಯಲ್ಲಿದ್ದರು. ಐದು ಸಾವಿರಕ್ಕೂ ಅಧಿಕ ಮಂದಿ ಸಭಿಕರಿದ್ದ ಈ ಕಾರ್ಯಕ್ರಮ ಶುರುವಾಗುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರ ಧಿಕ್ಕಾರ, ಘೋಷಣೆ ಶುರುವಾಯಿತು.

ಹೀಗೆ ಕಾಂಗ್ರೆಸ್ ಕಾರ್ಯಕರ್ತರೆಲ್ಲ ಏಕಾಏಕಿ ಸೋಮಣ್ಣನ ವಿರುದ್ಧ ದಾಂಧಲೆಗಿಳಿಯಲು ನೆಪವಾಗಿದ್ದು ಶಾಸಕ ಪ್ರಿಯಾಕೃಷ್ಣರಿಗಾದ ಅವಮಾನವಂತೆ-

ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಪ್ರಿಯಾಕೃಷ್ಣರ



ಅಧ್ಯಕ್ಷತೆ ಎಂದೇ ಮುದ್ರಿಸಲಾಗಿತ್ತು, ವಾರದ ಹಿಂದೆಯೇ ಶಾಸಕ ಪ್ರಿಯಾಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲು ಒಪ್ಪಿಕೊಂಡಿದ್ದರು. ಪ್ರೊಟೋಕಾಲ್ ಪ್ರಕಾರ ಆಯಾ ಶಾಸಕರೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಬೇಕೆಂಬುದನ್ನು ಪಾಲಿಕೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಿದ್ದರು. ಹಾಗಿದ್ದೂ ಸೋಮಣ್ಣನ ಮುಖ ನೋಡಿದ್ದೇ ಕಾಂಗ್ರೆಸ್ ಕಾರ್ಯಕರ್ತರು ರೊಚ್ಚಿಗೆದ್ದು ಧಿಕ್ಕಾರ ಶುರುಹಚ್ಚಿಕೊಂಡರು. ಗೃಹಮಂತ್ರಿ ಅಶೋಕ್ ಖುದ್ದು ವೇದಿಕೆಯಲ್ಲಿದ್ದರೂ ರೊಚ್ಚಿಗೆದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಸಮಾಧಾನ ಮಾಡಲಿಲ್ಲ, ಗಲಾಟೆಯನ್ನು ನಿಯಂತ್ರಿಸುವಂತೆ ಅಲ್ಲಿದ್ದ ಪೊಲೀಸರಿಗಾದರೂ ಸೂಚಿಸಬಹುದಿತ್ತು, ಇದ್ಯಾವುದನ್ನೂ ಮಾಡದೇ ಮಜಾ ನೋಡುತ್ತ ಕೂತ ಅಶೋಕ್‌ಗೆ ಬಹುಶಃ ಅದೇ ಬೇಕಿತ್ತು, ಏಕೆಂದರೆ ಪ್ರತಿಭಟಿಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರೆಲ್ಲ ತನ್ನ ಆಪ್ತ ಪ್ರಿಯಾಕೃಷ್ಣರ ಪರವಾಗಿದ್ದವರಲ್ಲವೆ? ಎಷ್ಟೆಂದರೂ ಸೋಮಣ್ಣ ತನ್ನ ಎದುರಾಳಿ ತಾನೆ? ಮುಖಭಂಗವಾದಷ್ಟೂ ತನಗೇ ಅನುಕೂಲ ತಾನೆ?

ಇದು ಅಶೋಕ್ ಮಸಲತ್ತಾದರೆ ಸೋಮಣ್ಣನ ಪಾಡು ನಿಜಕ್ಕೂ ನಾಯಿಪಾಡು.



ಜೊತೆಗಿದ್ದೇ ವೈರಿ ಕೃಷ್ಣಪ್ಪನವರ ಪರ ಡಬ್ಬಲ್ ಕ್ರಾಸ್ ಮಾಡಿದ್ದ.

ಅಂಥವನನ್ನು ಅಶೋಕ್ ಎಮ್ಮೆಲ್ಸಿ ಮಾಡುತ್ತಾರೆಂದರೆ ಸೋಮಣ್ಣನ ಸೋಲಿಗೆ ಅಶೋಕ್ ಕೂಡ ಕೈಜೋಡಿಸಿದ್ದರೆಂಬುದಕ್ಕೆ ಇದೊಂದೇ ಸಾಕಲ್ಲವೇ?

ಸೋಮಣ್ಣ ಯಡ್ಡಿಗೆ ಎಷ್ಟೇ ಪರಮಾಪ್ತನಾದರೂ ಬಿಜೆಪಿಯ ಒಕ್ಕಲಿಗರ ಅಧಿನಾಯಕ ಅಶೋಕ್‌ಗೆ ಸೋಮಣ್ಣನೇ ಭವಿಷ್ಯದ ಎದುರಾಳಿ. ಗೋವಿಂದರಾಜನಗರದಲ್ಲಿ ಸೋಮಣ್ಣ ಸೋತಿದ್ದು, ಆನಂತರ ಅಶ್ವತ್ಥನಾರಾಯಣನನ್ನು ಎಮ್ಮೆಲ್ಸಿ ಮಾಡಿದ್ದು, ಈಗ ರವೀಂದ್ರ ಕೈಕೊಟ್ಟಿದ್ದು ಇತ್ಯಾದಿಗಳೆಲ್ಲ ಮೇಲುನೋಟಕ್ಕೆ ಸೋಮಣ್ಣನ ಶನಿದೆಸೆಯಂತೆ ಕಂಡರೂ ಇದರ ಆಳದಲ್ಲಿರುವುದು ಅಶೋಕ್ ಕೈವಾಡವೆ!

ಒಂದಾನೊಂದು ಕಾಲಕ್ಕೆ ಗುಡದಳ್ಳಿಯಲ್ಲಿ ರೇಷನ್ ಡಿಪ್ಪೋ ಇಟ್ಟುಕೊಂಡು ಅಕ್ಕಿ ಸಕ್ಕರೆ ಕದ್ದು ಮಾರುತ್ತಿದ್ದ ರವೀಂದ್ರ ಕ್ರಮೇಣ ಚಂಪಾಪುರ ಅಗ್ರಹಾರದಲ್ಲಿ ಅಡ್ಡೆ ಹಾಕತೊಡಗಿದ. ನಾರಾಯಣಕುಮಾರ್ ಬಿನ್ನಿಪೇಟೆಗೆ ಶಾಸಕರಾಗಿದ್ದಷ್ಟೂ ಕಾಲ ಕನ್ನಡ ಚಳವಳಿಯ ಬಾವುಟ ಹಿಡಿದ ಸೋಮಣ್ಣ ಗೆದ್ದ ಮರುದಿನಕ್ಕೇ ನಾರಾಯಣ್‌ಕುಮಾರ್‌ಗೆ ಕೈಕೊಟ್ಟ. ಸೋಮಣ್ಣ ಕಾಂಗ್ರೆಸ್ಸಿನಲ್ಲಿದ್ದಾಗಲೇ ಕದ್ದುಮುಚ್ಚಿ ಮಂತ್ರಿ ರಾಮಲಿಂಗಾರೆಡ್ಡಿಯ ಮನೆಬಾಗಿಲು ಕಾಯುತ್ತಿದ್ದ. ಒಂದೆಡೆ ರಾ.ಲಿಂ. ರೆಡ್ಡಿಯ ವಿರುದ್ಧ ಸೋಮಣ್ಣ ಕಿಡಿಕಾರುತ್ತಿದ್ದರೆ ಮತ್ತೊಂದೆಡೆ ಶಿಷ್ಯ ರವೀಂದ್ರ ಗುರುವಿನ ಎದುರಾಳಿಯ ಜೊತೆ ಕದ್ದುಮುಚ್ಚಿ ಚಕ್ಕಂದಕ್ಕಿಳಿದಿದ್ದ. ಅಂಥವನನ್ನು ಅದೇನೆಂದು ಸೋಮಣ್ಣ ನಂಬಿದರೋ ಅಥವಾ ರಾಜಕೀಯ ಕಾರಿದ್ಯವೋ. ಕಳೆದ ಪಾಲಿಕೆ ಚುನಾವಣೆಯಲ್ಲಿ ಪುಟ್ಟರಾಜು, ಲಕ್ಷ್ಮಿನಾರಾಯಣರನ್ನೂ ಮೀರಿ ರವೀಂದ್ರನನ್ನು ಹಚ್ಚಿಕೊಂಡರು.

ಗೆದ್ದ ರವೀಂದ್ರ ಈಗ ಅಶೋಕ್ ಮನೆಬಾಗಿಲಲ್ಲಿದ್ದಾನೆ. ಸೋಮಣ್ಣನ ಪಾಡು ಏನಾಗಿರಬೇಡ? ಅಷ್ಟಕ್ಕೂ ರವೀಂದ್ರ ಸೋಮಣ್ಣನಿಗೆ ಕೈಕೊಟ್ಟು ಅಶೋಕ್ ಭಟ್ಟಂಗಿತನಕ್ಕಿಳಿದಿದ್ದರ ಹಿಂದಿರುವುದು ದುರಾಶೆ. ಜೊತೆಗಿದ್ದರೂ ಸೋಮಣ್ಣನ ಮೇಲೆ ಅಪನಂಬಿಕೆ. ಪುಟ್ಟರಾಜುವನ್ನು ಮುಗಿಸಿದಂತೆ ತನ್ನನ್ನೂ ಜೊತೆಗಿಟ್ಟುಕೊಂಡೇ ಸೋಮಣ್ಣ ಮುಗಿಸಬಹುದೆಂಬ ಅಳುಕು. ಎಲ್ಲಕ್ಕೂ ಮಿಗಿಲಾಗಿ ಜಾತಿ ಬುದ್ಧಿಯಿತ್ತಲ್ಲ; ತಾನೂ ಒಕ್ಕಲಿಗ ಅಶೋಕ್ ಕೂಡ ಒಕ್ಕಲಿಗರಾದ್ದರಿಂದ ಸೋಮಣ್ಣ ಕೈಕೊಟ್ಟರೂ ಅಶೋಕ್ ನೆರಳಿದ್ದೇ ಇರುತ್ತದೆಯಲ್ಲ ಎಂಬುದು ರವೀಂದ್ರನ ಲೆಕ್ಕಾಚಾರ.

ಅಶೋಕ್‌ಗೂ ಇದೇ ಬೇಕಿತ್ತು. ಸೋಮಣ್ಣನ ಬಲಗೈ ಬಂಟನನ್ನೇ ಸೆಳಗಿಸಿಕೊಂಡರೆ ಮುಂದೊಮ್ಮೆ ಸೋಮಣ್ಣನಿಗೇ ಗುನ್ನ ಇಕ್ಕಬಹುದೆಂಬ ಮುಂದಾಲೋಚನೆ. ಅದಕ್ಕೆಂದೇ ವಿಜಯನಗರ ವಾರ್ಡಿನ ಕ್ಯಾಟಗರಿ ಬದಲಿಸಿಕೊಟ್ಟರು. ತಾವೇ ನಿಂತು ಟಿಕೆಟ್ ಕೊಡಿಸಿದ್ದೆಂದು ನಂಬಿಸಿದರು. ಈಗ ಪಾಲಿಕೆಯ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಗೆ ತಾನೇ ರವೀಂದ್ರನಿಗೆ ಅಧ್ಯಕ್ಷತೆ ಕೊಡಿಸಿದ್ದು ಎಂದು ಅಶೋಕ್ ಬಿಂಬಿಸುತ್ತಿದ್ದಾರಾದರೂ ಅದರಲ್ಲಿ ಸೋಮಣ್ಣನ ಕೊಡುಗೆಯೂ ಇದ್ದೇ ಇದೆ.

ಆದರೆ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಉತ್ಪತ್ತಿಯಿದೆಯಲ್ಲ ಅದು ತಿಂಗಳೊಂದಕ್ಕೇ ಕೋಟಿ ಮೊತ್ತದ ಆದಾಯ. ಎಲ್ಲೇ ಬೃಹತ್ ಕಾಮಗಾರಿ ನಡೆದರೂ ಅಲ್ಲಿಗೆ ರವೀಂದ್ರ ದಾಳಿಯಿಡುತ್ತಾರೆ. ಪಾಲಿಕೆಯ ಇಂಜಿನಿಯರ್‌ಗಳು, ಕಂಟ್ರ್ಯಾಕ್ಟರುಗಳನ್ನೆಲ್ಲ ಕರೆದು ಈಗಾಗಲೇ ಒಂದು ಸುತ್ತಿನ ರೋಲ್‌ಕಾಲ್ ನಡೆಸಿದ್ದಾನೆ. ಜೊತೆಗೆ ತಾನೇ ಬೇನಾಮಿಯಾಗಿ ಕಂಟ್ರ್ಯಾಕ್ಟ್ ನಡೆಸುವುದು, ತನಗೆ ಬೇಕಾದವರಿಗೆ ಕಾಂಟ್ರ್ಯಾಕ್ಟ್ ಕೊಡಿಸುವುದು ರವೀಂದ್ರನ ಹುಟ್ಟುಗುಣ. ಇಷ್ಟೆಲ್ಲಾ ಉತ್ಪತ್ತಿಯನ್ನು ಗುರು ಸೋಮಣ್ಣನ ಜೊತೆ ಹಂಚಿಕೊಳ್ಳಬೇಕೆಂದರೆ ಹೊಟ್ಟೆ ಉರಿಯದೇ ಇರುತ್ತಾ? ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಎತ್ತುವಳಿಯನ್ನು ತಾನೇ ನುಂಗಿ ಹಾಕಲು ರವೀಂದ್ರ ಬಳಸಿದ ತಂತ್ರವೇ ಡಬ್ಬಲ್ ಕ್ರಾಸ್. ಅಶೋಕ್‌ಗೆ ನಿಷ್ಠನಂತೆ ಸೋಮಣ್ಣನ ಮುಂದೆ ಪೋಜು ಕೊಡುವುದು, ಸೋಮಣ್ಣನ ಹಾವಳಿ ಎಂಬಂತೆ ಅಶೋಕ್‌ಗೆ ಚಾಡಿ ಹೇಳುವುದು, ಎತ್ತುವಳಿಯ ಪಾಲನ್ನು ಅಶೋಕ್‌ಗೆ ಕೊಟ್ಟೆ ಎಂದು ಸೋಮಣ್ಣನೆದುರು ಬುಜ ಕಿವುಚಿ, ಸೋಮಣ್ಣನೇ ಎಲ್ಲವನ್ನೂ ಕಿತ್ತುಕೊಂಡ ಎಂದು ಅಶೋಕ್ ಮುಂದೆ ಲಟಿಕೆ ಮುರಿದರೆ ಇಬ್ಬರನ್ನೂ ಯಾಮಾರಿಸಿ ತಾನು ನುಂಗಬಹುದೆಂಬ ದುರಾಶೆ ಕೇಡಿ ರವೀಂದ್ರನದ್ದು.

ಅಶೋಕ್ ಮತ್ತು ಸೋಮಣ್ಣನ ನಡುವಿನ ಜಿದ್ದಾಜಿದ್ದಿ ಮತ್ತು ದ್ವೇಷಮುಕ್ಕೆ ಸದ್ಯ ರವೀಂದ್ರ ತುಪ್ಪ ಸುರಿಯುತ್ತಿದ್ದಾನೆ. ಇಬ್ಬರ ಮಧ್ಯೆ ತಂದಿಟ್ಟು ತಾನು ದೋಚುತ್ತಿದ್ದಾನೆ. ಅತ್ತ ಅಶೋಕ್‌ಗೂ ಮಕ್ಮಲ್ ಟೋಪಿ ಇತ್ತ ಸೋಮಣ್ಣನಿಗೂ ಪಂಗನಾಮ. ತಾನೇ ಬೆಳೆಸಿದ ಸರ್ಪ ತನಗೇ ಕಚ್ಚುತ್ತದೆ ಎಂದು ಸೋಮಣ್ಣ ಹಣೆ ಚಚ್ಚಿಕೊಳ್ಳುತ್ತಿದ್ದಾನೆ. ಪಕ್ಕಾ ಶಿಷ್ಯ ರವೀಂದ್ರನೇ ಈ ರೀತಿ ಗೂಟ ಹೊಡೆಯುತ್ತಿದ್ದಾನೆಂದರೆ ಇನ್ನು ಸೋಮಣ್ಣನನ್ನೇ ನಂಬಿ ಬಿಜೆಪಿಗೆ ಬಂದ ರೌಡಿ ರಾಣಿ ಶಾಂತಕುಮಾರಿಯಂತವರು ಆಟ ಆಡದೇ ಇರುತ್ತಾರಾ?

ಅಧಿಕಾರವಿದ್ದೂ ಮಂತ್ರಿಗಿರಿಯಿದ್ದೂ ಶತ್ರು, ಕಾಟಕ್ಕಿಂತ ಶಿಷ್ಯರ ಹಾವಳಿಯೇ ಅತಿಯಾಗಿದೆ ಸೋಮಣ್ಣನಿಗೆ. ಪಾಪದ ಬೀಜ ಬಿತ್ತಿದ ಮೇಲೆ ಫಲ ತಿನ್ನಬೇಕಲ್ಲವೇ?

• ರಾ. ಸೋಮನಾಥ್

ತಾವು ಆಮರಣಾಂತ ಉಪವಾಸ ಕೂತ್ರೆ ಒಳ್ಳೇದು ಸ್ವಾಮಿ

"ವಿಪಕ್ಷ ಸ್ಥಾನದಲ್ಲಿ ಕುಳಿತ ಸದಸ್ಯರು ಆಡಳಿತ ಪಕ್ಷದ ತಪ್ಪುಗಳನ್ನು ಎತ್ತಿ ತೋರಿಸಬೇಕು. ಅದೇ ಅವರ ಕರ್ತವ್ಯ. ಈ ಕರ್ತವ್ಯವನ್ನು ಮರೆತು ಪ್ರತಿದಿನ ಸರ್ಕಾರಕ್ಕೆ ತೊಂದರೆ ಕೊಡಬಾರದು. ಸರ್ಕಾರವೂ ಕೂಡ ರಾಜ್ಯದ ಅಭಿವೃದ್ಧಿ ಮಾಡಬೇಕು. ಅದುಬಿಟ್ಟು ಶಾಸಕರ ಖರೀದಿಯಂತಹ ವ್ಯವಹಾರ ಮಾಡಬಾರದು. ಅಂತಹ ಸ್ಥಿತಿ ಎದುರಾಗಿದ್ದರೆ ವಿಧಾನಸಭೆ ವಿಸರ್ಜಿಸಿ ನೇರ ಚುನಾವಣೆಗೆ ಹೋಗಿ ಗೆದ್ದು ಬನ್ನಿ..."

ಸದರಿ ಮಾತುಗಳನ್ನ ಯಾರು ಹೇಳಿರಬಹುದೆಂದು ಊಹಿಸಿ! ಗದ್ದರಿ ಹೇಳಿರಬಹುದೇ? ಆ ಕೋಲಿ ಬಸವ ಹೇಳಲು ಸಾಧ್ಯವೇ ಇಲ್ಲ, ಮತ್ತೆ ಅಡ್ವಾಣಿ ಹೇಳಿರಬಹುದೇ? ತಮ್ಮ ಬ್ಲಾಗ್‌ನಲ್ಲಿ ಬರೆದುಕೊಳ್ಳಬಹುದು. ಇನ್ನು ಬಿಜೆಪಿಗೆ ತಲೆನೋವಾಗಿರುವ ರಾಜ್ಯಪಾಲರ ಉವಾಚವೇ? ಅವರು ಏನಾದರೂ ಮಾಡಿಕೊಳ್ಳಿ ಎಂದು ಸುಮ್ಮನಾಗಿದ್ದಾರೆ.


ಆಶ್ಚರ್ಯ! ಸದರಿ ಸಲಹೆಯನ್ನ ರಂಭಾಪುರಿ ಮಠಾಧೀಶರೇ ಕೊಟ್ಟಿರಂತಲ್ಲಾ! ಎಲ್ಲಿಗ್ಗೆ ಬಂತು ನಮ್ಮ ಪ್ರಜಾಪ್ರಭುತ್ವ, ಥೂತ್ತೇರಿ!

* * * * *

ಈ ರಂಭಾಪುರಿ ಪ್ರಕಾರ ವಿಪಕ್ಷಗಳು ಸರ್ಕಾರದ ತಪ್ಪು ತೋರುವುದು ಬಿಟ್ಟು ಇಲ್ಲದ ತೊಂದರೆ ಕೊಡುತ್ತಿವೆ. ದಿನ ಬೆಳಗಾಯ್ತೆಂದರೆ ಎಡೂರಪ್ಪನ ಅಕ್ರಮ ಪತ್ತೆ ಹಚ್ಚುತ್ತಲೇ ಪ್ರೇರಣಾ ಟ್ರಸ್ಟಿಗೆ ಕೋಟಿ ಕೋಟಿ ಬಂದು ಬೀಳುತ್ತಿರುವುದನ್ನು ಎತ್ತಿ ತೋರುವುದು ಸರ್ಕಾರಕ್ಕೆ ಕೊಡುವ ತೊಂದರೆಯಂತಲ್ಲಾ, ಇರಬಹುದು. ಟ್ರಸ್ಟಿನ ಫಲಾನುಭವಿಗಳೆಲ್ಲಾ ರಂಭಾಪುರಿಯ ಭಕ್ತರು ಎಂದು ಅನ್ಯಮಠದ ಭಕ್ತಾದಿಗಳು ಆಡಿಕೊಳ್ಳುತ್ತಿರುವಾಗಲೇ, ಚೆಕ್ ಬೌನ್ಸ್ ಕೇಸಿನಿಂದ ಪೊಲೀಸರ ಅತಿಥಿಯಾಗಿ ಈಚೆ ಬಂದಿರುವ ವಿದ್ಯಾಮನೋಹರ ತೀರ್ಥ ಸ್ವಾಮಿ "ಪೊಲೀಸರು ನನ್ನ ಭಕ್ತರು. ಅವರು ನನ್ನ ಕಾಲಿಗೆ ಬಿದ್ದು ಕಾಣಿಕೆ ಕೊಟ್ಟು ಕಳುಹಿಸಿದರು. ಜೊತೆಗೆ ಆಗಾಗ್ಗೆ ಬಂದು ಕಾಲಿಗೆ ಬೀಳಿಸಿಕೊಂಡು ಹೋಗಿ ಎಂದು ಬೇಡಿಕೊಂಡು ಕಳಿಸಿದರೆ ಹೊರತು ಧನಾದೇಶ ಪತ್ರಕ್ಕೂ ನಮ್ಮ ಪೀಠಕ್ಕೂ ಯಾವುದೇ ಸಂಬಂಧವಿಲ್ಲ, ಆದ್ದರಿಂದ ಈ ಸಂಬಂಧವಾಗಿ ನಾನು ಪೀಠತ್ಯಾಗ ಮಾಡಲಾರೆ?" ಎಂದು ಬಿಟ್ಟಿದೆಯಂತಲ್ಲಾ, ಥೂತ್ತೇರಿ!!

* * * * *

ಸದ್ಯದ ಕರ್ನಾಟಕದ ಭಂಡ ಮನಸ್ಸುಗಳೆಲ್ಲಾ ಯಡ್ಡಿಯನ್ನ ಅನುಸರಿಸುತ್ತ ಯಾವ ಕಾರಣಕ್ಕೂ ನಮ್ಮ ಜಾಗವನ್ನು ಬಿಡುವುದಿಲ್ಲ ಎಂದು ಹೇಳುತ್ತಿರುವಾಗಲೇ, ಚೆಕ್‌ಬೌನ್ಸ್ ಖ್ಯಾತಿಯ ಸ್ವಾಮಿಯ ವಿಷಯವನ್ನು ಸ್ವಾಮಿಗಳ ಸ್ವಾಮಿಯಾದ ಪೇಜಾವರಶ್ರೀಯಲ್ಲಿ ವಿಚಾರಿಸಿದರೆ ಹೇಗೆ ಅನ್ನಿಸಿತಲ್ಲಾ, ಆ ಕೂಡಲೇ ಸ್ವಾಮೀಜಿಗಳಿಗೆ ಫೋನ್ ಮಾಡಲಾಯ್ತು.



ರಿಂಗ್‌ಟೋನ್ : "ಕೃಷ್ಣಾ ನೀ ಬೇಗನೇ ಬಾರೋ, ಬೇಗನೇ ಬಂದೂ ಮುಖವನ್ನು..."

"ಹಲೋ, ಯಾರು?"

"ಸ್ವಾಮೀಜಿ ನಾನು ಯಾಹೂ ಅಂತ, ಪತ್ರಕರ್ತ."

"ಏನಾಗಬೇಕು ಹೇಳಿ."

"ಉಷ್ಣ ವಿದ್ಯುತ್ ಸ್ಥಾವರದ ವಿಷಯ ಎಲ್ಲಿಗೆ ಬಂತು ಸ್ವಾಮಿ."

"ಅದರ ವಿರುದ್ಧ ನಾನು ಉಪವಾಸ ಕೂರ್‍ತ ಇದ್ದೇನೆ."

"ಆಮರಣಾಂತನ?"

"ಇಲ್ಲ, ಮಧ್ಯಾಹ್ನ ಮಾತ್ರ ಊಟ ಮಾಡ್ತೆನೆ."

"ಅಂದ್ರೆ, ಸಾಯಂಕಾಲದ ಊಟ, ಬೆಳಗ್ಗೆ ತಿಂಡಿಯೆಲ್ಲ ಸೇರಿ ಒಮ್ಮೆಲೆ ಬಾರಿಸ್ತೀರ."

"ಬಾರಿಸ್ತೀರ ಅಂತ ಹೇಳಿ ಕಟಕಿಯಾಡುವುದು ಬೇಡ. ಒಂದು ಹೊತ್ತಿನ ಊಟಕ್ಕಾಗುವಷ್ಟು ಮಾತ್ರ ನನ್ನಲ್ಲಿ ಜಾಗವುಂಟು."

"ತಮಾಷಿ ಮಾಡಿದೆ ಸ್ವಾಮಿ, ಸಿಟ್ಟಾಗಬೇಡಿ."

"ತಮಾಷೆ ಯಂತ? ನನಗೆ ಗೊತ್ತು, ಬ್ರಾಹ್ಮಣರು ಊಟ ಮಾಡುವುದನ್ನು ನೀವು ಆಡಿಕೊಳ್ಳುವುದುಂಟು. ನೀವು ಊಟ ಮಾಡುವುದಿಲ್ಲವ?"

"ನಾವಿನ್ನೇನು ಮಣ್ಣ ತಿಂತಿವ? ನಾವೂ ಊಟ ಮಾಡ್ತೀವಿ. ಆದರೆ ನಿಮ್ಮ ಊಟ ಏಕಾಂತವಾಗಿ ಗೌಪ್ಯವಾಗಿ ನಡಿಯೋದ್ರಿಂದ ಅನುಮಾನ ಬಂಧು ಹಾಗೆ ಕೇಳಿದೆ. ನೀವು ನಮ್ಮ ಜೊತೆನೆ ಊಟ ಮಾಡಿದ್ರೆ ಇಂತ ಪ್ರಶ್ನೆ ಕೇಳ್ತಿರಲಿಲ್ಲ."

"ನಾನು ಯಾರೊಡನೆಯೂ ಊಟ ಮಾಡುವುದಿಲ್ಲ."

"ಬೇಡ ಬಿಡಿ, ನೀವು ಊಟ ಮಾಡದ ನೋಡಿದ್ರೆ ನಮಿಗೆ ಅನ್ನ ಸೇರದಿಲ್ಲ. ಪ್ರಶ್ನೆ ಅದಲ್ಲ, ನಿಮ್ಮ ಸಮ್ಮಂದಿಯೊಬ್ಬ ಚೆಕ್‌ಬೌನ್ಸ್ ಕೇಸಲ್ಲಿ ಸಿಗಾಯ್ಕಂಡವ್ರನೆ?"

ಥೂತ್ತೇರಿ

•ಯಾಹೂ

"ನನ್ನ ಸಮಂಧಿ ಯಾರು?"

"ಸೋಸಲೆ ವ್ಯಾಸರಾಜ ಮಠದ ಶ್ರೀ ಶ್ರೀ ಶ್ರೀ ವಿದ್ಯಾಮನೋಹರ ತೀರ್ಥ ಸ್ವಾಮೀಜಿ."

"ಅವರು ಸಮ್ಮಂದಿಯಲ್ಲ."

"ನೀವು ಸ್ವಾಮೀಜಿಗಳಲ್ಲವೇ?"

"ಹೌದು."

"ಮತ್ತೆ ಅವರೂ ಸ್ವಾಮೀಜಿನೆ. ಸ್ವಾಮೀಜಿಗಳೆಲ್ಲಾ ಒಂದು ಜಾತಿ ಅಂತ ತಿಳಕೊಂಡಿದ್ದಿನಿ."

"ಅದೇ ನೀವು ತಪ್ಪು ತಿಳಿದದ್ದು. ಈಗ ಮುರುಘಾ ಮಠದ ಸ್ವಾಮಿಯನ್ನ, ಆದಿಚುಂಚನಗಿರಿ ಸ್ವಾಮಿಯನ್ನ ನನ್ನ ಸಮ್ಮಂಧಿ ಅನ್ನಲಾಗುತ್ತ."

"ಸಾರಿ ಸ್ವಾಮಿ, ಜಾತಿಗೊಂದು ಸ್ವಾಮಿ ಅಂದಮೇಲೆ ಅವು ಆ ಜಾತಿನ ಪ್ರತಿನಿಧಿಸುತ್ತವೆ. ಅಂಗಾಗಿ ಸ್ವಾಮಿಗಳೆಲ್ಲ ಒಂದು ಅನ್ನೊ ನನ್ನ ಅಜ್ಞಾನದ ಕಣ್ಣು ತೆರಿತು. ಆದ್ರು ಈ ವಿದ್ಯಾಮನೋಹರ ನೀವೆಷ್ಟೇ ಅಲ್ಲಗಳದ್ರೂ ನಿಮ್ಮ ಸಮ್ಮಂದಿ. ಈತನ ಕೇಸಲ್ಲಿ ಏನೇಳ್ತಿರಿ?"

"ನೋಡಿ, ನನ್ನ ಎದುರು ಈಗ ಉಷ್ಣ ಸ್ಥಾವರದ ಹೋರಾಟವಿದೆ. ಚೆಕ್‌ಬೌನ್ಸ್ ವಿಷಯ ಅಲ್ಲ."

"ಆದ್ರು ಸ್ವಾಮಿ ತಾವೆಷ್ಟು ದೊಡ್ಡವರು ಅಂದ್ರೆ ನಿಮ್ಮ ಆಕೃತಿ ಚಿಕ್ಕದಾಗಿದ್ದರೂ ನೀವು ಹಿಮಾಲಯದಷ್ಟು ದೊಡ್ಡವರು. ಅದ್ಕೆ ನೋಡಿ. ಎಡೂರಪ್ಪ ಸರ್ಕಾರದ ಸಮಸ್ಯೆಗಳೆಲ್ಲಾ ನಿಮ್ಮ ಹತ್ರ ಬರ್ತವೆ. ಈ ನಾಡಿನ ಹಲ್ಕಟ್ ಸ್ವಾಮಿಗಳ ಸಂಗತಿಗಳೆಲ್ಲಾ ನಿಮ್ಮ ಉತ್ತರ ಬಯಸ್ತವೆ. ಈ ತುದೀಲಿ ಸರದ ಹೋರಾಟ, ಆ ತುದೀಲಿ ನೀರಾ ರಾಡಿಯಾ, ಇನ್ನೊಂದು ತುದೀಲಿ ಉಡುಪಿ ಭಟ್ಟನ ಹೆಂಡತಿರರಿಗೆ ನೀವು ನಿಗಾವಹಿಸಬೇಕಾಗಿದೆ. ನನಗೆ ತಿಳದಂಗೆ ಭಾರತದ ಪ್ರಧಾನಿನೂ ಇಷ್ಟು ಸಮಸ್ಯೆಲಿ ತೊಡಗಿಸಿಕೊಂಡಿಲ್ಲ, ರಿಯಲಿ ಗ್ರೇಟ್, ಹ್ಯಾಟ್ಸ್ ಆಫ್ ಸ್ವಾಮೀಜಿ."

"ನಿಮ್ಮ ಅಭಿಪ್ರಾಯಕ್ಕೆ ನಮ್ಮ ಅಭಿನಂದನೆ."

"ಈ ವಿದ್ಯಾಮನೋಹರನ ಸಮಸ್ಯೆ ಹೇಗೆ ಬಗೆಹರಸ್ತಿರಿ?"


"ಆ ಮಠದ ಭಕ್ತಾದಿಗಳು ಆ ಸಮಸ್ಯೆ ಬಗೆಹರಿಸಿಕೊಳ್ಳುವುದುಂಟು. ಮೇಲಾಗಿ, ಚೆಕ್ ಬೌನ್ಸ್ ಆದಕೂಡಲೇ ಅಪರಾಧಿ ಅನ್ನಲು ಬರುವುದಿಲ್ಲ. ಯಾರ ಚೆಕ್ಕು ಯಾರು ತೆಕ್ಕೊಂಡಿದ್ದು, ಬ್ಯಾಂಕಿಗೆ ಹಾಕಿದ್ದು ಯಾರು, ಅದು ಯಾವ ಬ್ಯಾಂಕು, ನಿಜಕ್ಕು ಆ ಚೆಕ್ಕು ಬೌನ್ಸಾಗಿದೆಯೋ ಅಥವಾ ಯಾರಾದರೂ ಮಾಡಿದ್ದಾರೊ.. ಇಂತ ವಿಷಯಗಳೆಲ್ಲಾ ತನಿಖೆಯಾಗಬೇಕು. ಆ ನಂತರ ಅವರು ಅಪರಾಧಿ ಎಂಬುದು ಸಾಬೀತಾಗಬೇಕು. ಅದೆಲ್ಲ ಆದಮೇಲೆ ನೋಡುವ."

"ಗ್ರೇಟ್ ಸ್ವಾಮಿ. ನಿಜಕ್ಕೂ ಎಡೂರಪ್ಪನಂತ ರಾಜಕಾರಣಿಗಳು ಬದುಕಿ ಬಾಳ್ತಾಯಿರದೇ ನಿಮ್ಮಂಥ ಜಗದ್ಗುರುಗಳ ಆಶೀರ್ವಾದಗಳಿಂದ. ನಿಮ್ಮ ಉಪವಾಸ ಯಶಸ್ವಿಯಾಗ್ಲಿ, ಈ ನಾಡಿನ ಒಳಿತಿಗಾಗಿ ನೀವು ಅಮರಣಾಂತ ಉಪವಾಸ ಮಾಡಿದ್ರೆ ತುಂಬ ಒಳ್ಳೆದು."

"ನಾನಿನ್ನೂ ಬದುಕಬೇಕು!"


ಥೂತ್ತೇರಿ!!!

ಈಶ್ವರಪ್ಪ & ಕಂ ಕಿರಿಕ್



"ಯಡಿಯೂರಪ್ಪ ಹಠಾವೋ ಬಿಜೆಪಿ ಬಚಾವೋ" ಎಂಬ ನಾಮಾಂಕಿತದಲ್ಲಿ ರಾಜ್ಯ ಆಡಳಿತ ಪಕ್ಷದಲ್ಲಿ ಹೊಸ ಭಿನ್ನಮತೀಯ ಚಟುವಟಿಕೆ ದಿಢೀರನೆ ಆರಂಭವಾಗಿದೆ. ಈ ಹಿಂದೆ ವಿರೋಧ ಪಕ್ಷಗಳಾದ ದಳ ಮತ್ತು ಕಾಂಗ್ರೆ ಬಿಜೆಪಿ ಶಾಸಕರನ್ನು ಯಡಿಯೂರಪ್ಪ ವಿರುದ್ಧ ಎತ್ತಿಕಟ್ಟಿದ್ದರು. ಆದರೆ ಈ ಬಾರಿ ಬಿಜೆಪಿಯವರೇ ತಮ್ಮ ಸ್ವಂತ ಕಾಲ ಬಲದಲ್ಲಿ ಬಂಡಾಯ ಎದ್ದಿರುವುದು ಆಶ್ಚರ್ಯಕರ ಬೆಳವಣಿಗೆಯಾಗಿದೆ.

ಅಷ್ಟೇ ಅಲ್ಲ, ಈ ಹಿಂದಿನಂತೆ ಮಂತ್ರಿ ಸ್ಥಾನ ಸಿಗದ ಅತೃಪ್ತ ಶಾಸಕರು ಈ ಬಾರಿ ಬಂಡಾಯವೆದ್ದಿಲ್ಲ, ಬದಲಿಗೆ ಬಿಜೆಪಿಯ ರಾಜ್ಯಾಧ್ಯಕ್ಷ ಈಶ್ವರಪ್ಪನವರೇ ಈ ಸುತ್ತಿನ ಭಿನ್ನಮತೀಯ ಚಟುವಟಿಕೆಯ ನಾಯಕತ್ವವನ್ನು ವಹಿಸಿಕೊಂಡಿದ್ದಾರೆ.



ಇನ್ನೊಂದು ಮಹತ್ವದ ಬೆಳವಣಿಗೆ ಯಾವುದೆಂದರೆ ಕಳೆದ ಎರಡು ವರ್ಷಗಳಿಂದ ಎಂದೂ ಮುಖಕ್ಕೆ ಮುಖ ಕೊಟ್ಟು ಮಾತನಾಡಿರದಿದ್ದ ಈಶ್ವರಪ್ಪ ಮತ್ತು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತ್‌ಕುಮಾರ್ ಈಗ ಜಂಟಿಯಾಗಿ ಪ್ರಸ್ತುತ 'ಬಿಜೆಪಿ ಬಚಾವೋ' ಕಾರ್ಯಕ್ರಮದಲ್ಲಿ ಮಗ್ನರಾಗಿದ್ದಾರೆ.

ಇದೆಲ್ಲ ಕೊನೆಗೂ 'ಯಡ್ಡಿ ಹಠಾವೋ' ಚಳವಳಿಯು ಪರಾಕಾಷ್ಠೆಯನ್ನು ತಲುಪಿದೆ ಎಂಬುದನ್ನು ತೋರುತ್ತಿದ್ದು ಯಡ್ಡಿ ಪಾಲಿಗೆ ಸಂಕಟ ತಂದಿದೆ.

ಒಂದೆಡೆ ಜನತಾದಳದ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಪ್ರೇರಣಾ ಟ್ರಸ್ಟಿಗೆ ಸಂಬಂಧಪಟ್ಟಂತೆ ಬೆಂಗಳೂರು ಮತ್ತು ದೆಹಲಿಯಿಂದ ಒಂದೇಸಮನೆ ಗದಾಪ್ರಹಾರ ಮಾಡುತ್ತಿರುವಾಗಲೇ ಇನ್ನೊಂದೆಡೆ ಆಡಳಿತಾರೂಢ ಬಿಜೆಪಿಯಲ್ಲೇ ಬಂಡಾಯದ ಕಾವು ಮತ್ತೆ ಎದ್ದಿರುವುದು ರಾಜ್ಯ ರಾಜಕೀಯದಲ್ಲಿ ಮಹತ್ತರ ಬದಲಾವಣೆಗಳಾಗುವ ಲಕ್ಷಣಗಳನ್ನು ಸೂಚಿಸುತ್ತಿದೆ.


ಮೊನ್ನೆಮೊನ್ನೆಯಷ್ಟೇ ಬೆಳಗಾವಿಯಲ್ಲಿ 'ಯಶಸ್ವಿ'ಯಾಗಿ ವಿಶ್ವ ಕನ್ನಡ ಸಮ್ಮೇಳನವನ್ನು ಮುಗಿಸಿದ ಉತ್ಸಾಹದಲ್ಲೇ ಬೀಗುತ್ತಿದ್ದ ಮುಖ್ಯಮಂತ್ರಿ ಯಡ್ಡಿ ಈ ದಿಢೀರ್ ಭಿನ್ನಮತೀಯ ಚಟುವಟಿಕೆಯಿಂದ ಖಿನ್ನರಾಗಿದ್ದಾರೆ.

ಪಕ್ಷದ ಆಂತರಿಕ ವಲಯದಿಂದ ಕೇಳಿಬರುತ್ತಿರುವುದೇನೆಂದರೆ 'ಈ ಬಾರಿ ಯಡಿಯೂರಪ್ಪ ಮನೆಗೆ ಹೋಗುವುದು ಗ್ಯಾರಂಟಿ' ಎಂಬುದು. ಆ ನಿಟ್ಟಿನಲ್ಲಿ ಬಿಜೆಪಿ ಶಾಸಕರು ತಮ್ಮದೇ ಆದ ರಾಜಕೀಯ ಲೆಕ್ಕಾಚಾರ ಮತ್ತು ತಂತ್ರಗಳಲ್ಲಿ ತೊಡಗಿದ್ದಾರೆ. ಹಲವರ ಪ್ರಕಾರ ಹಾಲಿ ಭಿನ್ನಮತೀಯ ಚಟುವಟಿಕೆಯು ದೆಹಲಿಯ ಹೈಕಮಾಂಡಿನ ಸೂಚನೆಯ ಮೇರೆಗೆ ನಡೆಯುತ್ತಿದೆಯಂತೆ. ಹೈಕಮಾಂಡ್ ಕೃಪಾಕಟಾಕ್ಷ ಅಥವಾ ಗ್ರೀನ್‌ಸಿಗ್ನಲ್ ಸಿಗದಿದ್ದರೆ ಯಡ್ಡಿ ವಿರುದ್ಧ ವಿಧಾನ ಸೌಧದಿಂದ ಕೂಗಳತೆ ದೂರದಲ್ಲಿರುವ ಪಕ್ಷದ ಕಚೇರಿಯಲ್ಲೇ ಭಿನ್ನಮತದ ಚಟುವಟಿಕೆಗಳು ನಡೆಯಲು ಹೇಗೆ ಸಾಧ್ಯ? ಎಂದು ಅವರು ಕೇಳುತ್ತಿದ್ದಾರೆ. ಅವರ ಮಾತಿನ ಅರ್ಥ 'ಯಡ್ಡಿ ಹಠಾವೋ' ಎಂಬ ಬಂಡಾಯದ ಕತೆ, ಚಿತ್ರಕತೆ, ಹಿನ್ನೆಲೆ ವಾದ್ಯ ಗೋಷ್ಠಿ ಎಲ್ಲವನ್ನೂ ದೆಹಲಿಯ ಹಲವು ನಾಯಕರೇ ರಚಿಸಿದ್ದಾರೆ ಎಂಬುದು.

ಆದರೆ ದೆಹಲಿ ಬಿಜೆಪಿಯಲ್ಲೇ ಒಡಕುಗಳಿವೆ. ಒಂದೆಡೆ ಯಡ್ಡಿಯ ಬೆನ್ನಿಗೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಗಡ್ಕರಿ ಮತ್ತು ಅರುಣ್ ಜೆಟ್ಲಿ ಬಂಡೆಗಲ್ಲಿನಂತೆ ನಿಂತಿದ್ದಾರೆ. ಇನ್ನೊಂದೆಡೆ ಯಡ್ಡಿ ಅಧಿಕಾರದಿಂದ ಇಳಿಯಬೇಕು ಎಂಬ ಮಂತ್ರವನ್ನು ಹಿರಿಯ ನಾಯಕ ಅಡ್ವಾಣಿ ಮತ್ತು ಸುಷ್ಮಾ ಸ್ವರಾಜ್ ಪಠಿಸುತ್ತಲೇ ಇದ್ದಾರೆ.

ಬಿಜೆಪಿಯ ಒಂದು ಮೂಲದ ಪ್ರಕಾರ, ಯಡಿಯೂರಪ್ಪನ ಪ್ರೇರಣಾ ಟ್ರಸ್ಟಿಗೆ ಸಂಬಂಧಪಟ್ಟ ಅವ್ಯವಹಾರದ ದಾಖಲೆ ಪತ್ರಗಳನ್ನು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ನೀಡಿದ್ದೇ ರಾಷ್ಟ್ರೀಯ ಬಿಜೆಪಿ ನಾಯಕರಂತೆ. ಅಷ್ಟೇ ಅಲ್ಲ, ಈ ಹಗರಣವನ್ನು ಬೆಂಗಳೂರಿನ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿ ಕರೆದು ಹೇಳುವ ಬದಲು ದೆಹಲಿಯಲ್ಲಿ ಹೇಳಬೇಕೆಂದೂ, ಆ ಮೂಲಕ ರಾಷ್ಟ್ರ ಮಟ್ಟದಲ್ಲಿ ಯಡಿಯೂರಪ್ಪನಿಗೆ ಮುಖಭಂಗ ಆಗುವಂತೆ ನೋಡಿಕೊಳ್ಳಬೇಕೆಂದೂ ಐಡಿಯಾ ಕೊಟ್ಟವರೇ ರಾಷ್ಟ್ರೀಯ ಬಿಜೆಪಿ ನಾಯಕರಂತೆ. ಅದರ ಪ್ರಕಾರವೇ ಕುಮಾರಸ್ವಾಮಿ ಎಡಪಕ್ಷದ ನಾಯಕರ ಜೊತೆಗೆ ಸೇರಿ ದೆಹಲಿಯಲ್ಲಿ ಯಡಿಯೂರಪ್ಪನ ಅವ್ಯವಹಾರ ಕುರಿತ ಪತ್ರಿಕಾಗೋಷ್ಠಿ ನಡೆಸಿ ಎಲ್ಲರೂ ಬೆಚ್ಚಿಬೀಳುವಂತೆ ಮಾಡಿದರಂತೆ. ಮೊನ್ನೆ ಲೋಕಸಭೆಯಲ್ಲಿ ಇದೇ ವಿಷಯದ ಬಗ್ಗೆ ಮಾಜಿ ಪ್ರಧಾನಿ ದೇವೇ ಗೌಡರು ಕೂಡ ಗುಡುಗಿದ್ದಾರೆ. ದೇವೇಗೌಡರು ತಮ್ಮ ಪಕ್ಷದ ನಾಯಕ ಮತ್ತು ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪನ ವಿರುದ್ಧ ಟೀಕಾ ಪ್ರಹಾರವನ್ನು ಮಾಡುತ್ತಿದ್ದಾಗ ವಿರೋಧ ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಅದಕ್ಕೆ ಪ್ರತ್ಯುತ್ತರ ನೀಡುವ ಬದಲು ಸುಮ್ಮನೆ ಕುಳಿತುಕೊಂಡಿದ್ದೂ ಅನೇಕ ಸಂಶಯಗಳಿಗೆ ಕಾರಣವಾಗಿದೆ.

ಇಲ್ಲಿಯತನಕ ಸಂಭವಿಸಿರುವ ಹಲವಾರು ಭಿನ್ನಮತೀಯ ಚಟುವಟಿಕೆಗಳನ್ನು ಯಶಸ್ವಿಯಾಗಿ ಮಟ್ಟ ಹಾಕಿ ತನ್ನ ಕುರ್ಚಿಗೆ ಜಿಗಣೆಯಂತೆ ಅಂಟಿಕೊಂಡು ಕುಳಿತಿರುವ ಯಡಿಯೂರಪ್ಪ ಈ ಬಾರಿ ಅತ್ಯಂತ ವಿಭಿನ್ನ ರೀತಿಯ ಭಿನ್ನಮತೀಯ ಚಟುವಟಿಕೆಯನ್ನು ಎದುರಿಸುತ್ತಿದ್ದಾರೆ. ರಾಜ್ಯಾಧ್ಯಕ್ಷ ಈಶ್ವರಪ್ಪ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತ್ ಕುಮಾರ್ ಮತ್ತು ಗಣಿಕಳ್ಳರಾದ ಜನಾರ್ದನ ರೆಡ್ಡಿ- ಈ ತ್ರಿಮೂರ್ತಿಗಳು ಈಗ ಯಡ್ಡಿ ವಿರುದ್ಧ ಒಟ್ಟು ಸೇರಿದ್ದಾರೆಂದರೆ ಖಂಡಿತವಾಗಿಯೂ ಯಡಿಯೂರಪ್ಪನವರಿಗೆ ಕಂಟಕಪ್ರಾಯ ಒದಗಿಬರಲಿದೆ ಎಂಬುದು ರಾಜಕೀಯ ಪಂಡಿತರ ಲೆಕ್ಕಾಚಾರ.



ಇದೆಲ್ಲಾ ಆರಂಭವಾದುದು ಸುಮಾರು ಒಂದು ತಿಂಗಳ ಹಿಂದೆ. ಅಲ್ಲಿತನಕ ಯಡ್ಡಿ ಮತ್ತು ಈಶ್ವರಪ್ಪ ಗಂಡಹೆಂಡತಿಯರಂತೆ ಪರಸ್ಪರ ಪ್ರೀತಿ ವಿಶ್ವಾಸದಲ್ಲೇ ಸಹಬಾಳ್ವೆ ನಡೆಸುತ್ತಿದ್ದರು. ಆದರೆ ಯಾವಾಗ ಯಡ್ಡಿ ಪಕ್ಷದ ಅಧ್ಯಕ್ಷ ಈಶ್ವರಪ್ಪನನ್ನು ಗಣನೆಗೆ ತೆಗೆದುಕೊಳ್ಳದೆ ಕೆಲವು ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿದರೋ ಆಗ ಈಶ್ವರಪ್ಪ ಕೆರಳೀ ಕೆಂಡವಾದರು. ಇದಕ್ಕಿಂತಲೂ ಮುಖ್ಯವಾಗಿ ಕಳೆದ ಬಾರಿ ದೆಹಲಿಯಲ್ಲಿ ಭಿನ್ನಮತೀಯ ಚಟುವಟಿಕೆ ನಡೆದಾಗ ಅದನ್ನು ಶಮನ ಮಾಡಿದ ಲೋಕಸಭಾ ಸದಸ್ಯ ಡಿ.ಬಿ.ಚಂದ್ರೇಗೌಡರ ಶಿಫಾರಸ್ಸಿನ ಮೇರೆಗೆ ಮಂಡಳಿಗಳ ಅಧ್ಯಕ್ಷರನ್ನು ಯಡ್ಡಿ ಆಯ್ಕೆ ಮಾಡಿದ್ದು ಈಶ್ವರಪ್ಪನ ಸಿಟ್ಟು ನೆತ್ತಿಗೇರುವಂತೆ ಮಾಡಿತು. ಇನ್ನು ಯಡ್ಡಿ ಪಕ್ಷದವರನ್ನು ಕಡೆಗಣಿಸಿ ಪಕ್ಷಾಂತರಿ ಚಂದ್ರೇಗೌಡರ ಆಪ್ತರನ್ನು ಮಂಡಳಿಗಳಿಗೆ ನೇಮಕ ಮಾಡಿದ್ದು ಬಿಜೆಪಿಯ ಕಾರ್ಯಕರ್ತರಲ್ಲೂ ಮತ್ತು ಶಾಸಕರಲ್ಲೂ ಅಸಮಾಧಾನಕ್ಕೆ ಕಾರಣವಾಯಿತು.

ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಯುತ್ತಿರುವಾಗ ಬೆಂಗಳೂರಿನಲ್ಲಿ ಈ ಭಿನ್ನಮತೀಯ ಚಟುವಟಿಕೆ ನಿಧಾನಕ್ಕೆ ಬಲಗೊಳ್ಳುತ್ತಾಹೋಯಿತು. ಅಂದಹಾಗೆ, ಯಡ್ಡಿ ವಿರೋಧಿ ಚಟುವಟಿಕೆಯಲ್ಲೇ ಬ್ಯುಸಿ ಆಗಿದ್ದ ಈಶ್ವರಪ್ಪ ಆ ಸಮ್ಮೇಳನದಲ್ಲಿ ಭಾಗವಹಿಸಲೇ ಇಲ್ಲ, ಅಷ್ಟೇ ಅಲ್ಲ, ತಾನೇಕೆ ಬೆಳಗಾವಿಯ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲ ಎಂಬುದರ ಬಗ್ಗೆ ಈಶ್ವರಪ್ಪ ಇಂದಿನ ತನಕ ಯಾವ ಸಮಜಾಯಿಷಿಯನ್ನೂ ನೀಡಿಲ್ಲ, ಈಶ್ವರಪ್ಪನ ಅನುಯಾಯಿಗಳು ಕೂಡ ವಿಶ್ವ ಕನ್ನಡ ಸಮ್ಮೇಳನವನ್ನು ಅತ್ಯಂತ ಜಾಣ್ಮೆಯಿಂದ ಬಹಿಷ್ಕರಿಸಿದರು.

ಸಮ್ಮೇಳನ ಮುಗಿದ ನಂತರ ಅಸೆಂಬ್ಲಿಯಲ್ಲಿ ವಿರೋಧ ಪಕ್ಷದವರು ಪ್ರೇರಣಾ ಟ್ರಸ್ಟಿಗೆ ಸಂಬಂಧಪಟ್ಟಂತೆ ಅಬ್ಬರದ ಧ್ವನಿಯಲ್ಲಿ ಗದ್ದಲ ಎಬ್ಬಿಸಿದಾಗ ಯಡ್ಡಿ ನೆರವಿಗೆ ಈಶ್ವರಪ್ಪರಾಗಲೀ ಅಥವಾ ಅವರ ಬೆಂಬಲಿಗರಾಗಲೀ ಧಾವಿಸಲೇ ಇಲ್ಲ, ಇದೆಲ್ಲವನ್ನು ಒಟ್ಟುಗೂಡಿಸಿ ನೋಡಿದರೆ ಈಶ್ವರಪ್ಪ ಮತ್ತು ಯಡಿಯೂರಪ್ಪ ನಡುವಿನ ಸಂಬಂಧ ಬಹಳ ಹಿಂದೆಯೇ ಹದಗೆಟ್ಟಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಇದೆಲ್ಲದಕ್ಕೆ ಕಲಶವಿಟ್ಟಂತೆ 'ಯಡಿಯೂರಪ್ಪನವರ ಭ್ರಷ್ಟಾಚಾರದ ಆಡಳಿತದಿಂದಾಗಿ ನಮ್ಮ ಪಕ್ಷದ ವರ್ಚಸ್ಸಿಗೆ ದೊಡ್ಡ ಧಕ್ಕೆ ಉಂಟಾಗಿದೆ, ಅವರನ್ನು ಬದಲಾಯಿಸದಿದ್ದರೆ ಕರ್ನಾಟಕದಲ್ಲಿ ಬಿಜೆಪಿ ಮುಂಬರುವ ದಿನಗಳಲ್ಲಿ ಸರ್ವನಾಶವಾಗುತ್ತದೆ' ಎಂದು ಈಶ್ವರಪ್ಪ ದೆಹಲಿ ದೊರೆಗಳಿಗೆ ದೂರು ನೀಡಿದ್ದಾರೆ.

ಇಲ್ಲಿಯವರೆಗೂ ಹಲವಾರು ವಿವಾದಗಳನ್ನು, ಭಿನ್ನಮತೀಯ ಚಟುವಟಿಕೆಗಳನ್ನು ತನ್ನ ರಾಜಕೀಯ ಚತುರತೆಯಿಂದಲೋ, ಕಪಟತನದಿಂದಲೋ ನಿಭಾಯಿಸಿಕೊಂಡು ಬಂದಿರುವ ಯಡಿಯೂರಪ್ಪ ಈಗ ಮೊದಲ ಬಾರಿಗೆ ನಿಜಕ್ಕೂ ಕಂಗಾಲಾಗಿದ್ದಾರೆ. ಆ ಕಾರಣಕ್ಕೆ ಮೊನ್ನೆ ರಾತ್ರಿ ಭಿನ್ನಮತೀಯ ಚಟುವಟಿಕೆ ನಡೆಯುತ್ತಿದ್ದ ಸ್ಥಳಕ್ಕೆ ಯಾವುದೇ ಆಹ್ವಾನವಿಲ್ಲದಿದ್ದರೂ ದಿಢೀರನೆ ಭೇಟಿ ಕೊಟ್ಟು ಅದನ್ನು ಶಮನ ಪಡಿಸಲು ಪ್ರಯತ್ನಿಸಿದ್ದಾರೆ.

ಯಡ್ಡಿ ಈ ಹಿಂದಿನಂತೆಯೇ ಮತ್ತೊಮ್ಮೆ ಭಿನ್ನಮತೀಯರನ್ನು ಮಟ್ಟ ಹಾಕಿ ಪಕ್ಷದ ಮೇಲೆ ಮತ್ತಷ್ಟು ಹಿಡಿತ ಸಾಧಿಸುತ್ತಾರೋ ಅಥವಾ ಕೊನೆಗೂ ತಮ್ಮ ಕುರ್ಚಿಯನ್ನು ತೊರೆದು ಮನೆಗೆ ತೊಲಗುತ್ತಾರೋ, ಅಥವಾ ಅನೇಕ ಸಂದರ್ಭಗಳಲ್ಲಿ ಯಡ್ಡಿ ಬೆದರಿಸಿರುವಂತೆ ತನ್ನ ಬೆಂಬಲಿಗ ಶಾಸಕರೊಂದಿಗೆ ಪಕ್ಷವನ್ನು ಛಿದ್ರಮಾಡಿ ಹೊಸ ಪಕ್ಷವನ್ನು ಕಟ್ಟುತ್ತಾರೋ ಎಂಬ ಕುತೂಹಲ ರಾಜಕೀಯ ವಲಯವನ್ನು ಆವರಿಸಿದೆ.

ಆದರೆ, ಯಡಿಯೂರಪ್ಪನ ಭಂಡತನವನ್ನು ಅತ್ಯಂತ ಹತ್ತಿರದಿಂದ ಬಲ್ಲವರ ಪ್ರಕಾರ ಆತ ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಕುರ್ಚಿಯಲ್ಲಿ ತಾನಲ್ಲದೆ ಮತ್ತೊಬ್ಬ ಚೆಡ್ಡಿ ನಾಯಕ ಕುಳಿತುಕೊಳ್ಳುವುದನ್ನು ಸಹಿಸುವುದಿಲ್ಲ, ಹೀಗಾಗಿ ಕೊನೆ ಕ್ಷಣದಲ್ಲಿ ಯಡಿಯೂರಪ್ಪ ವಿಧಾನಸಭೆ ವಿಸರ್ಜನೆಯಂಥ ಅತಿರೇಕದ ಕೆಲಸಕ್ಕೆ ಕೈ ಹಾಕಿದರೂ ಆಶ್ಚರ್ಯ ಪಡಬೇಕಾಗಿಲ್ಲ, ಹಾಗಾದರೆ ದೆಹಲಿಯಲ್ಲಿರುವ ಚೆಡ್ಡಿ ದೊರೆಗಳು ಹೇಗೆ ತಾವೇ ಹುಟ್ಟು ಹಾಕಿದ ಭಿನ್ನಮತೀಯ ಚಟುವಟಿಕೆಯನ್ನು ಬಗೆಹರಿಸುತ್ತಾರೆ ಎಂಬ ಪ್ರಶ್ನೆಯಂತೂ ಇದ್ದೇ ಇದೆ.


ಸದ್ಯದಲ್ಲೇ ನಡೆಯಲಿರುವ ನಾಲ್ಕು ರಾಜ್ಯಗಳ ವಿಧಾನ ಸಭಾ ಚುನಾವಣೆಯನ್ನು ಬಿಜೆಪಿಯ ನಾಯಕರು ಎದುರಿಸಬೇಕಿದೆ. ಮಾತ್ರವಲ್ಲ ಆ ರಾಜ್ಯಗಳಲ್ಲಿ ಹೊಸ ಉತ್ಸಾಹ ಮತ್ತು ವರ್ಚಸ್ಸಿನೊಂದಿಗೆ ಮತದಾರರಿಂದ ವೋಟಿನ ಭಿಕ್ಷೆ ಬೇಡಬೇಕಿದೆ. ಬಿಜೆಪಿ ಶಿಸ್ತಿನ ಪಕ್ಷ ಎಂದು ಬುರುಡೆ ಬಿಡಬೇಕಿದೆ. ಇದೆಲ್ಲದರ ಮಧ್ಯೆ ಯಡ್ಡಿಯೆಂಬ ಕಳಂಕದಿಂದು ಮುಕ್ತಿ ಪಡೆಯಬೇಕಿದೆ.

ಬಿಜೆಪಿಗೆ ಹೇಗೆ ಯಡ್ಡಿ ಒಂದು ಕಳಂಕವೋ, ಯಡ್ಡಿಗೆ ದೆಹಲಿಯ ಚೆಡ್ಡಿಗಳೇ ಕಂಟಕವಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಯಡ್ಡಿ ಗಟ್ಟಿಯೋ ಅಥವಾ ದೆಹಲಿ ದೊರೆಗಳು ಗಟ್ಟಿಯೋ ಎಂಬುದು ಸದ್ಯಕ್ಕೆ ಎಲ್ಲ ಚೆಡ್ಡಿಗಳ ಬಾಯಲ್ಲಿರುವ ಪ್ರಶ್ನೆ.

ಸ್ಪಷ್ಟೀಕರಣ


ನಮ್ಮ ಪತ್ರಿಕೆಯ ನವೆಂಬರ್ 10, 2010 ಮತ್ತು ಮಾರ್ಚ್ 9, 2011ರ ಸಂಚಿಕೆಗಳಲ್ಲಿ ಹುಬ್ಬಳ್ಳಿ-ಧಾರವಾಡ (ಪೂರ್ವ) ವಿಧಾನಸಭಾ ಕ್ಷೇತ್ರದ ಶಾಸಕ ವೀರಭದ್ರಪ್ಪ ಹಾಲಹರವಿ ಅವರನ್ನು ಕುರಿತು ಎರಡು ವರದಿಗಳು ಪ್ರಕಟಗೊಂಡಿದ್ದವು.

ಮೊದಲನೆಯ ವರದಿಯಲ್ಲಿ ಹುಬ್ಬಳ್ಳಿಯ ರೌಡಿ ಪಾಲಾಕ್ಷಿ ವೆಲ್ಲೂರು ಅಲಿಯಾಸ್ ಪಲ್ಲಿ ಹತ್ಯೆಯಾದಾಗ ಆತನ ಪ್ರತಿಮೆಯನ್ನು ಬಂಕಾಪುರ ಚೌಕದಲ್ಲಿ ಸ್ಥಾಪಿಸಬೇಕೆಂಬ ಕೆಲವರ ಬೇಡಿಕೆಗೆ ಹಾಲಹರವಿಯವರು ಸಮ್ಮತಿಸಿದ್ದರು ಎಂದು ವರದಿಯಾಗಿತ್ತು, ಆದರೆ ವಾಸ್ತವವಾಗಿ ಹಾಲಹರವಿಯವರು ಆ ಪ್ರಸ್ತಾಪವನ್ನು ವಿರೋಧಿಸಿದ್ದರು. ಹಾಗೆಯೇ 'ಕೈದಿಗಳ ಕಾಳಗಕ್ಕೆ ಧೂಳೆದ್ದ ಹುಬ್ಬಳ್ಳಿ ಕಾರಾಗೃಹ' ಎಂಬ ಎರಡನೆ ವರದಿಯಲ್ಲಿ ಹುಬ್ಬಳ್ಳಿಯ ಪಾತಕ ಪ್ರಪಂಚಕ್ಕೆ ಡಾನ್‌ಗಳಾದ ಬಿಜವಾಡ ಕುಟುಂಬರ ವಿರುದ್ಧ ಶಾಸಕ ಹಾಲಹರವಿಯವರು ಸಂಚು ರೂಪಿಸಿದ್ದಾರೆ ಎಂಬ ಅರ್ಥದಲ್ಲಿ ಬರೆಯಲಾಗಿತ್ತು.



ಹಾಲಹರವಿ

ಆದರೆ ಹಾಲಹರವಿಯವರು ಇದೆಲ್ಲ ಕಪೋಲಕಲ್ಪಿತ ಎಂದೂ, ಜೈಲಿನಲ್ಲಾದ ಗಲಭೆಗೂ ತನಗೂ ಸಂಬಂಧ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಜೊತೆಗೆ "ಮೃತ ದಲಿತ ಯುವಕ ಪಾಲಾಕ್ಷಿಯನ್ನು ಹಾಡುಹಗಲೇ ಭರ್ಬರವಾಗಿ ಕೊಂದವರಿಗೆ ಶಿಕ್ಷೆಯಾಗಲಿ ಎಂದದ್ದು ತಪ್ಪೇ?" ಎಂದು ಪ್ರಶ್ನಿಸಿ ತಮ್ಮ ಈ ಸ್ಪಷ್ಟೀಕರಣವನ್ನು ಪ್ರಕಟಿಸಬೇಕೆಂದು ಕೋರಿದ್ದಾರೆ.




ವಕೀಲ ರಾಜು

ನಮ್ಮ ಮಾರ್ಚ್ 23, 2011ರ ಸಂಚಿಕೆಯಲ್ಲಿ ಚಿಕ್ಕಮಗಳೂರಿನ ಪೆಟ್ರೋಲ್ ಮಾಫಿಯಾಗೆ ಸಂಬಂಧಿಸಿದಂತೆ ಪ್ರಕಟಗೊಂಡ ವರದಿಯಲ್ಲಿ ಆ ಪ್ರಕರಣದ ಪ್ರಥಮ ಆರೋಪಿ ರಾಜಾಶೆಟ್ಟಿಯ ವಕೀಲರಾದ ರಾಜು ಅವರ ಫೋಟೋ ಪ್ರಕಟಗೊಂಡಿತ್ತು. ಅದೇ ಪ್ರಕರಣದಲ್ಲಿ ರಾಜು ಎಂಬ ಹೆಸರಿನವನೊಬ್ಬ ಆರೋಪಿ ಆಗಿರುವುದರಿಂದಲೇ ಈ ಗೊಂದಲಕ್ಕೆ ಕಾರಣವಾಗಿತ್ತು. ವಾಸ್ತವವಾಗಿ ಆ ಪ್ರಕರಣಕ್ಕೂ ವಕೀಲ ರಾಜು ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇವೆ.

ಇಲ್ಲಿ ಇನ್ನೊಂದು ಮುಖ್ಯ ಅಂಶವನ್ನು ಗಮನಿಸಬೇಕು. ಶಾಸಕರಾದ ಹಾಲಹರವಿ ಮತ್ತು ವಕೀಲರಾದ ರಾಜು ಇಬ್ಬರೂ ದಲಿತ ಸಮುದಾಯದವರಾಗಿದ್ದು ಅವರು ದಲಿತ ಪರ ಹೋರಾಟಗಳ ಮೂಲಕ ಬೆಳೆದುಬಂದಿರುವವರು. ಅವರಿಬ್ಬರೂ ಪಿ.ಲಂಕೇಶರ ಅಭಿಮಾನಿಗಳೂ ಹೌದು. ಸಜ್ಜನರೂ, ಸೂಕ್ಷ್ಮಮತಿಗಳೂ ಆದ ಅವರಿಬ್ಬರಿಗೆ ಯಾವುದೇ ರೀತಿಯಲ್ಲಿ ಅನ್ಯಾಯ ಅಥವಾ ಅಪಮಾನ ಮಾಡುವ ಉದ್ದೇಶ ನಮ್ಮದಲ್ಲ, ಬದಲಾಗಿ ಇವರಿಬ್ಬರೂ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರಗಳಲ್ಲಿ ಇನ್ನಷ್ಟು ಯಶಸ್ಸು ಸಾಧಿಸಿ ಅಸಹಾಯಕ ದಲಿತರಿಗೆ ನೆರವಾಗಲಿ ಎಂದು ಆಶಿಸುತ್ತೇವೆ.

– ಸಂ



ಮುಂಡಗೋಡ: ಬಿಜೆಪಿ ಎಮ್ಮೆಲ್ಲೆ ಪುತ್ರನ ಪುಂಡಾಟ ಪುರಾಣ!

ಶಾಸಕ ವಿ.ಎಸ್.ಪಾಟೀಲರ ಏಕೈಕ ಪುತ್ರರತ್ನ ಬಾಪುಗೌಡನಿಗೆ ಯೌವನ-ಅಡ್ನಾಡಿ ಅಧಿಕಾರ ಒಟ್ಟೊಟ್ಟಿಗೆ ಬಂದಿರುವುದು ಮಂಗನಿಗೆ ಹೆಂಡ ಕುಡಿಸಿದಂತಾಗಿದೆ! ಅಂದಗಿ ಸರ್ಕಾರಿ ಶಾಲೆ ಮಾಸ್ತರ ಎಂ.ಎಸ್.ಕಾರ್ಕಳನಂಥ ಒಂದಿಷ್ಟು ಅಂದಗಿ-ಚೌಡಳ್ಳಿ ಭಾಗದ ಪುಂಡರದಂಡು ಕಟ್ಟಿಕೊಂಡಿರುವ ಬಾಪುಗೌಡನ ಗ್ಯಾಂಗಿನ ಹಾವಳಿ ಮಿತಿಮೀರಿಹೋಗಿದೆ.

ಉತ್ತರ ಕನ್ನಡದ ತೀರಾ ಹಿಂದುಳಿದ ತಾಲ್ಲೂಕು ಮುಂಡಗೋಡ ಬಿಸಿಲು-ಬರ-ಬಿಸಿಗಾಳಿ-ಭಂಡ ರಾಜಕಾರಣದ ತಾಣ. ಈ ಅರೆಬಯಲು ಸೀಮೆಗೆ ಆದರ ಶಾಸಕ ವೀರಭದ್ರಗೌಡ ಪಾಟೀಲನೆಂಬ ಲೋಪ್ರೊಫೈಲ್ ಪುಢಾರಿಯೇ ಸಂಪೂರ್ಣ ಶಾಪದಂತಾಗಿ ಹೋಗಿದ್ದಾನೆ. ಹೊರನೋಟಕ್ಕೆ ಗಂಜಿಯಲ್ಲಿ ಬಿದ್ದ ನಿರಪಾಯಕಾರಿ ನೊಣದಂತೆ ಗೋಚರಿಸುವ ಈ ಶರಣನ ಖದರು ಅಚಾನಕ್ ಶಾಸಕನಾಗುತ್ತಲೇ ಬದಲಾಗಿ ಹೋಯ್ತು! ಸಂಭಾವಿತನಂತೆ ಪೋಸು ಕೊಡುತ್ತಲೇ ಗಂಡಾಗುಂಡಿ ಶುರುವಿಟ್ಟುಕೊಂಡ ಪಾಟೀಲ್ ಸಾಹೇಬರಿಗೇ ತಾನು ಶಾಸಕನಾಗುತ್ತೇನೆಂಬುದು ಕನಸುಮನಸ್ಸಿನಲ್ಲೂ ಗೊತ್ತಿರಲಿಲ್ಲ. ಪಾಪ ಲಾಟರಿ ಹೊಡೆದಂತೆ ಶಾಸಕನಾದ ಪಾಟೀಲನನ್ನು ಅಧಿಕಾರ ಅಡ್ಡದಾರಿ ಹಿಡಿಸಿಬಿಟ್ಟಿತು!!

ಪೆದ್ದು ಪಾಟೀಲ ಹೆಸರಿಗಷ್ಟೇ ಮುಂಡಗೋಡ-ಯಲ್ಲಾಪುರ ಕ್ಷೇತ್ರದ ಎಮ್ಮೆಲ್ಲೆ; ಕಾರುಬಾರಲ್ಲೇ ಆತನ ಮೀಸೆ ಮೂಡದ ಮಗ ಬಾಪುಗೌಡ ಪಾಟೀಲನದು! ಈತನೂ ಅಪ್ಪನಂತೆಯೇ ಮುಗ್ಧ ಚಹರೆಯ ಹುಡುಗ. ಆದರೆ ಪೊಲೀಸ್ ಠಾಣೆಗಳಲ್ಲಿ-ಸರ್ಕಾರಿ ಕಚೇರಿಗಳಲ್ಲಿ ,ವರ್ಗಾವಣೆಯಲ್ಲಿ, ವಸೂಲಿಯಲ್ಲಿ, ಪವರ್ ಪ್ರಯೋಗದಲ್ಲಿ ಬಾಪುಗೌಡ ಭಯಾನಕ ಭೂಪ!! ಕ್ಷೇತ್ರದ ಭೌಗೋಳಿಕ ಪರಿಚಯವೇ ಇಲ್ಲದ ಶಾಸಕ ಪಾಟೀಲ್‌ಗೆ ಅಭಿವೃದ್ಧಿಯ ಆಸಕ್ತಿಯೇ ಇಲ್ಲ. ತಾನು ಶಾಸಕನಾಗಿದ್ದೇ ಸ್ವ ಉದ್ಧಾರಕ್ಕೆಂಬ ದೃಢ ನಿರ್ಧಾರಕ್ಕೆ ಬಂದಿರುವ ಈ ಅಬ್ಬೇಪಾರಿ ಕಂಟ್ರಾಕ್ಟರ್ ಇವತ್ತು ಕೋಟಿ-ಕೋಟಿಗೆ ತೂಗುತ್ತಾನೆ. ಮಗನೇ ಶಾಸಕ ಪಾಟೀಲರಿಗೆ ಕಲೆಕ್ಷನ್ ಏಜೆಂಟ್-ಸಲಹೆಗಾರ-ಪಿಎ-ಪಿಎಸ್... ಎಲ್ಲಾ!!

ಪಕ್ಕದ ಯಲ್ಲಾಪುರ ತಾಲ್ಲೂಕು ಬಿಡಿ, ಪಾಟೀಲರ ತವರು ಮುಂಡಾಗೋಡಿಗೂ ಆತನ ಶಾಸಕತ್ವದಿಂದ ಬಿಲ್ಲಿ ಪ್ರಯೋಜನವಾಗಿಲ್ಲ. ಹಾಗಂತ ಸಾಕಷ್ಟು ಸರ್ಕಾರಿ ಕಾಮಗಾರಿಗಳು ಕ್ಷೇತ್ರಕ್ಕೆ ಬರುತ್ತಿವೆ. ಅವೆಲ್ಲ ಪಾಟೀಲರ ಮಗ ಬಾಪುಗೌಡನ ಸಹಚರರ ಪಾಲಾಗುತ್ತಿವೆ. ಬಾಪುಗೆ ದೊಡ್ಡದೊಂದು ಪಾಲು ಈ ಕಳಪೆ ಕಾಮಗಾರಿಯಲ್ಲಿ ಕಟ್ಟಿಟ್ಟ ಬುತ್ತಿ!! ಪಾಟೀಲರು ಮಗನನ್ನು ಮುಂದಿಟ್ಟುಕೊಂಡು ಅದ್ಯಾವ ಪರಿ ಹಣ ಬಡಿದುಹಾಕಿದ್ದಾರೆಂಬುದನ್ನು ಆತ ಅಂದಗಿ ಎಂಬಲ್ಲಿದ್ದ ಪೂರ್ವಜರ ಗಟ್ಟಿಮುಟ್ಟಾದ ಮನೆಯನ್ನೇ ಮುರಿದು ಕೋಟಿ ಬಜೆಟ್‌ನ ಹೈಟೆಕ್ ಬಂಗಲೇ ಕಟ್ಟಿಸುತ್ತಿರುವುದು ಸಾರಿ-ಸಾರಿ ಹೇಳುತ್ತಿದೆ!! ಕ್ಷೇತ್ರದ ಕಷ್ಟಸುಖಕ್ಕೆಂದೂ ಸ್ಪಂದಿಸದ ಜೋಭದ್ರಗೇಡಿ ಪಾಟೀಲ ಜೀವಂತವಿದ್ದಾರೆಂದು ಜನರಿಗೆ ಗೊತ್ತಾಗುವುದು ಆತ ಆಗಾಗ ಸ್ವ-ಪಕ್ಷದ ಶತ್ರು ಸಂಸದ ಅನಂತ್ಕುಮಾರ್ ಜತೆ ಜಗಳಕ್ಕೆ ನಿಂತು ರಂಪ ಎಬ್ಬಿಸಿದಾಗಷ್ಟೇ!

ಶಾಸಕ ವಿ.ಎಸ್.ಪಾಟೀಲರ ಏಕೈಕ ಪುತ್ರರತ್ನ ಬಾಪುಗೌಡನಿಗೆ ಯೌವನ-ಅಡ್ನಾಡಿ ಅಧಿಕಾರ ಒಟ್ಟೊಟ್ಟಿಗೆ ಬಂದಿರುವುದು ಮಂಗನಿಗೆ ಹೆಂಡ ಕುಡಿಸಿದಂತಾಗಿದೆ! ಅಂದಗಿ ಸರ್ಕಾರಿ ಶಾಲೆ ಮಾಸ್ತರ ಎಂ.ಎಸ್.ಕಾರ್ಕಳನಂಥ ಒಂದಿಷ್ಟು ಅಂದಗಿ-ಚೌಡಳ್ಳಿ ಭಾಗದ ಪುಂಡರದಂಡು ಕಟ್ಟಿಕೊಂಡಿರುವ ಬಾಪುಗೌಡನ ಗ್ಯಾಂಗಿನ ಹಾವಳಿ ಮಿತಿಮೀರಿಹೋಗಿದೆ. ಈ ಎಮ್ಮೆಲ್ಲೆ ಕುಲತಿಲಕನ ಪಟಾಲಮ್‌ನ ಪುಂಡರಿಗೆ ಪೊಲೀಸರಾದಿಯಾಗಿ ಅಧಿಕಾರಿಗಳೆಲ್ಲಾ ದೊಗ್ಗು ಸಲಾಮು ಹಾಕಲೇಬೇಕು. ಇಲ್ಲದಿದ್ದರೆ ಕರಿ ನೀರಿನ ಶಿಕ್ಷೆ ಅಥವಾ ಗೂಸಾ ಗ್ಯಾರಂಟಿ. ಈ ರೌಡಿಗಳು ಅದೆಂಥ ಕಾನೂನು ಭಂಜಕ ಕೆಲಸ ಮಾಡಿದರೂ ಕೇಸ್ ಮಾಡುವಂತಿಲ್ಲ. ಸಹದೇವ ನಾಡಿಗೇರನಂಥ ತಲೆ ಮಾಸಿದ ತಾಪಂ ಸದಸ್ಯನಂಥವರೂ ಬಾಪುಗೌಡನ ಗುಲಾಮಗಿರಿ ಮಾಡಬೇಕಾಗಿ ಬಂದಿರುವುದು ದುರಂತ!

'ಅಧಿಕ ಪ್ರಸಂಗಿ' ಎಂದೇ ಮುಂಡಗೋಡಿನಲ್ಲಿ ಅಡ್ಡಹೆಸರಿಂದ ಪ್ರಸಿದ್ಧನಾಗಿರುವ ಬಾಪುಗೌಡ ಮೊನ್ನೆ ಮಾರ್ಚ್ 3ರಂದು ಗ್ಯಾಂಗ್ ಕಟ್ಟಿಕೊಂಡು ಅಪ್ಪ-ಸಿಪಿಐ ಎದುರೇ ಪೊಲೀಸರಿಗೆ ಹೊಡೆದು-ಬಡಿದು ತಾಂಡವ ನೃತ್ಯ ಮಾಡಿದ್ದಾನೆ. ಶಿರಸಿಯ ಎಕ್ಸಿಸ್ ಬ್ಯಾಂಕಲ್ಲಿ ಹೆಸರಿಗಷ್ಟೇ ಚಾಕರಿ ಮಾಡುವ ಈ ಬಾಪುಗೌಡ ಪಕ್ಕಾ ಚೆಡ್ಡಿ ಧುರೀಣ ಕಡೆಂಡು ರೌಡಿಗಳೊಂದಿಗೆ ಸೇರಿ ಮಾಡಿರುವ ಗುದುಮುರಿಗೆ ಪುರಾಣ ರೋಚಕವಾಗಿದೆ. ಜತೆಗೆ ಬಿಜೆಪಿ-ಚೆಡ್ಡಿ ಸಂಸ್ಕೃತಿ ಮುಂಡಗೋಡಿನಂಥ ಮುಗ್ಧ ಪಟ್ಟಣದ ನೆಮ್ಮದಿ ಹೇಗೆ ಕೆಡಿಸುತ್ತಿದೆ ಎಂಬುದನ್ನೂ ಬಿಚ್ಚಿಟ್ಟಿದೆ ಮಲ್ಲಿಕಾರ್ಜುನ ಕಟ್ರಿ ಎಂಬ ಮಸಲತ್ತುಗಾರನ ದಾಳದಂತಾಗಿರುವ ಹುಂಬ ಹುಡುಗ ಬಾಪುಗೌಡ ತನ್ನ ಅಪ್ಪ ನಿದ್ದೆಯಿಲ್ಲದೆ ರಾತ್ರಿ ಕಳೆಯುವಂತೆ ಮಾಡಿರುವ ಕತೆಯಿದು!

ಹಕೀಕತ್ತೇನು?


ಮಾರ್ಚ್ 2ರ ನಡುರಾತ್ರಿ ಸಮಯ ಸುಮಾರು 12.30 ಮುಂಡಗೋಡದ ಸೆನ್‌ಸೇಟಿವ್ ಸರ್ಕಲ್ ಬಂಕಾಪುರ ಸರ್ಕಲ್‌ನಲ್ಲಿ ನಾಕಾಬಂದಿ ಪೊಲೀಸರು ನಡೆಸುತ್ತಿದ್ದರು. ಎಎಸ್‌ಐ ಪಾಂಡುರಂಗ ಪಾಲೇಕರ್-ಪೇದೆಗಳಾದ ಬಿ.ಪಿ.ಪಾವಸ್ಕರ್, ಸೂರ್ಯನಾರಾಯಣ ಅಂಬಿಗ ಎಂಬವರು ಬರುವ-ಹೋಗುವ ವಾಹನಗಳ ತಪಾಸಣೆ ಡ್ಯೂಟಿಯಲ್ಲಿದ್ದರು. ಆ ಹೊತ್ತಲ್ಲಿ ಕೆ.ಎ.31/ಕ್ಯೂ 2251 ನಂಬರಿನ ಬೈಕೊಂದು ಬರ್ರ್... ಅಂತ ಬರುತ್ತದೆ. ಬೈಕ್ ತಡೆದು ನಿಲ್ಲಿಸಿದ ಪೊಲೀಸರು ಒಂಚೂರು ಒರಟಾಗೇ ದಾಖಲೆ ಕೇಳಿದ್ದಾರೆ. ಬೈಕಲ್ಲಿದ್ದ ಇಬ್ಬರಿಗೆ ಬೈದಿದ್ದಾರೆ. ಪ್ಯಾದೆ ಪಾವಸ್ಕರ್‌ನ ಹುಟ್ಟುಗುಣ ಇಲ್ಲಿ ದೊಡ್ಡ ಎಡವಟ್ಟು ಮಾಡಿಬಿಟ್ಟದೆ.

ಬೈಕೇರಿ ಬಂದಿದ್ದ ರಾಮಚಂದ್ರ ಕೋಣನಕೇರಿ ಮತ್ತು ಮಂಜುನಾಥ ರೆಡ್ಡಿ ಇಬ್ಬರೂ ಎಮ್ಮೆಲ್ಲೆ ವಿ.ಎಸ್.ಪಾಟೀಲರ ಪವರ್‌ಫುಲ್ ಪುತ್ರ ಬಾಪುಗೌಡನ ಜಿಗ್ರಿ ದೋಸ್ತಿಗಳು. ಇದು ಪೊಲೀಸರಿಗೆ ಗೊತ್ತಿರಲಿಲ್ಲ. ಪೊಲೀಸರು ತಮ್ಮ ಮಾಮೂಲಿ ಭಾಷೆ ಬಳಸಿದ್ದಾರೆ. ಬೈಕ್ ದಾಖಲೆಗಳಿಲ್ಲದ ಪುಂಡ ಹುಡುಗರು ಭಂಡ ಪೊಲೀಸರ ಜತೆ ಜಗಳಕ್ಕೆ ಬಿದ್ದಿದ್ದಾರೆ. ಮಾತಿಗೆ ಮಾತು ಬೆಳೆದಿದೆ. ಎಮ್ಮೆಲ್ಲೆ ಮಗನ ಗೆಳೆಯರು ತಾವೆಂದು ಹೇಳಿದ್ದಾರೆ. ಕುಡಿದ ನಶೆಯಲ್ಲಿದ್ದ ಪೊಲೀಸು ಶಾಸಕ-ಅವರ ಮಗನಿಗೂ ಬೈದಿದ್ದಾರೆ. ಯಾರಾದರೇನು? ದಾಖಲೆ ಕೊಡಿ ಎಂದು ಗದರಿಸಿದ್ದಾರೆ.

ಆಗ ಮಂಜುನಾಥ ಮೊಬೈಲ್‌ನಲ್ಲಿ ಬಾಪುಗೌಡನನ್ನು ಸಂಪರ್ಕಿಸಿದ್ದಾನೆ. ಪೊಲೀಸರಿಂದ ಬಿಡಿಸುವಂತೆ ಕೇಳಿದ್ದಾನೆ. ಫೋನು ಪಾಲೇಕರ್‌ಗೆ ಕೊಡಲು ಹೋಗಿದ್ದಾನೆ. ಪೊಲೀಸರು ಮೊಬೈಲ್ ಸ್ವೀಕರಿಸದೇ ಬಾಯಿಗೆ ಬಂದಂತೆ ಶಾಸಕನ ಪುತ್ರನಿಗಷ್ಟೇ ಅಲ್ಲ, ಅವನಪ್ಪ ಎಮ್ಮೆಲ್ಲೆ ಸಾಹೇಬರಿಗೂ 'ಗುಣಗಾನ' ಮಾಡಿದ್ದಾರೆ. ಅದೆಲ್ಲಾ ಫೋನಲ್ಲಿ ಬಾಪುಗೌಡ ಕೇಳಿಸಿಕೊಂಡು ಕುದ್ದು ಹೋಗಿದ್ದಾನೆ. ರಾತ್ರಿ ಬೆಳಗಾಗಲಿ ಎಂದು ಸಿಟ್ಟಿನಿಂದ ಕಾದಿದ್ದಾನೆ. ಬೆಂಗಳೂರಿಗೆ ವಿಧಾನಸಭೆ ಅಧಿವೇಶನಕ್ಕೆಂದು ಹೋಗಿದ್ದ ಅಪ್ಪನಿಗೆ ಫೋನಾಯಿಸಿ 'ಪುರಾಣ' ಹೇಳಿದ್ದಾನೆ. ಅಲ್ಲಿಗೆ ಶಾಸಕ ಸಾಹೇಬರೂ ಬರೋಬ್ಬರಿ ರಾಂಗ್ ಆಗಿದ್ದಾರೆ. ಇತ್ತ ಪೊಲೀಸರು ಪೆಟ್ಟಿಕೇಸ್ ಹಾಕಿ ಬೈಕ್ ಸವಾರರನ್ನು ಕಳಿಸಿದ್ದಾರೆ.

ಪೊಲೀಸರಿಗೆ ಭರ್ತಿ ಗೂಸಾ

ಮರುದಿನ ಮಧ್ಯಾಹ್ನದ ಹೊತ್ತಿಗೆ ಶಾಸಕ ಪಾಟೀಲ್ ಬೆಂಗಳೂರಿನಿಂದ ಲಗುಬಗೆಯಿಂದ ದೌಡಾಯಿಸಿದ್ದಾರೆ. ಮಗನ ಮಿತ್ರರ ಪುಂಡಾಟದಿಂದಾದ ಭಾನಗಡಿಯನ್ನು 'ರಾಷ್ಟ್ರೀಯ ವಿಪತ್ತು' ಎಂಬಂತೆ 'ಕಾಳಜಿ'ಯಿಂದ ಪಾಟೀಲರು ಓಡೋಡಿ ಬಂದಿದ್ದರು.



ತಕ್ಷಣ ಶಿರಸಿ ಡಿವೈಎಸ್ಪಿ ಉಲ್ಲಾಸ್ ವೆರ್ಣೇಕರ್, ಸಿಪಿಐಗಳನ್ನೆಲ್ಲ ಸಂಪರ್ಕಿಸಿ 'ಪ್ರತಿಷ್ಠೆ' ಪ್ರದರ್ಶಿಸಿದ್ದಾರೆ. ಕಕ್ಕಾಬಿಕ್ಕಿಯಾದ ಪೊಲೀಸ್ ಅಧಿಕಾರಿಗಳು ಶಾಸಕರನ್ನು ಸಮಾಧಾನಿಸಲು ಸಂಜೆ ವೇಳೆ ಫಾರೆಸ್ಟ್ ಐಬಿಯಲ್ಲೊಂದು ಸಂಧಾನಸಭೆ ಕರೆದಿದ್ದಾರೆ. ಮಾತುಕತೆ ರಾತ್ರಿಯಾದರೂ ಮುಗಿಯಲಿಲ್ಲ. ಸಭೆಯಲ್ಲಿದ್ದ ಶಾಸಕ ಪಾಟೀಲರು ಪೊಲೀಸರನ್ನು ತರಾಟೆಗೆ ತೆಗೆದುಕೊಂಡರೆ, ಆತನ ಮಗ ಬಾಪುಗೌಡನ ಪೋಲಿ ಪಟಾಲಮ್ ಹೊಡೆದಾಟಕ್ಕೆ ನುಗ್ಗುತ್ತಿತ್ತು. ಐಬಿ ಚೆಡ್ಡಿ-ಭಜರಂಗಿ ಪಡೆಯಿಂದ ಕಿಕ್ಕಿರಿದು ತುಂಬಿತ್ತು.

ಬಾಪುಗೌಡನ ಗೆಳೆಯರಿಗೆ ನೋಟೀಸ್ ನೀಡಿದ್ದ ಪಾಲೇಕರ್, ಪಾವಸ್ಕರ್ ಮತ್ತು ಅಂಬಿಗ ಎಂಬ ಪೊಲೀಸರಿಗೆ ಬಾಪುಗೌಡ ಹೀನಾಯವಾಗಿ ಬೈದು-ಮೂದಲಿಸಿ ತೀಟೆ ತೀರಿಸಿಕೊಂಡ. ಇಷ್ಟರಿಂದಲೂ ಸಮಾಧಾನವಾಗದ ಬಾಪುಗೌಡ 'ನಾನು ಎಮ್ಮೆಲ್ಲೆ ಮಗ ಮಾತಾಡೋದು ಅಂತ ಫೋನ್ ಮಾಡಿದ್ರೂ ನೀವ್ಯಾಕೆ ಮೊಬೈಲ್ ತಗಳಲಿಲ್ಲವ್ರೋ... ಸೂ... ಮಕ್ಕಳ... ಏನಂತ ತಿಳಿಕಂಡಿದ್ರಿ... ಎಮ್ಮೆಲ್ಲೆ ಮಗಾ ಅಂತಂದ್ರ..." ಎಂದಬ್ಬರಿಸುತ್ತಾ ಮೂವರು ಪೊಲೀಸರಿಗೆ ಹೊಡೆಯಲು ಹಾರಿಹೋದ! "ಹೊಡೀರಿ... ಹೊಡೀರಿ...!!" ಎಂದು ತನ್ನ ಗೂಂಡಾ ಗ್ಯಾಂಗಿಗೆ ಪ್ರಚೋದನೆ ನೀಡಿದ. ಬಾಪುಗೌಡ ಪೊಲೀಸ್ ಅಧಿಕಾರಿಗಳೆದುರೇ ಪ್ಯಾದೆಗಳ ಎದೆಗೆ ಒದ್ದು ಗುದ್ದಿದ. ಉಳಿದ ಸುಮಾರು 14 ಮಂದಿ ಒಂದೇ ಸಮನೆ ಪೊಲೀಸರ ಮೇಲೆ ಮುಗಿಬಿದ್ದು ಯದ್ವಾತದ್ವಾ ಮುಖ ಮೂತಿ ನೋಡದೆ ಗುದುಮಿದರು. ಪೊಲೀಸರು ಹೈರಾಣಾಗಿ ನೆಲಕಚ್ಚಿದರು. ಬಿದ್ದವರನ್ನು ಚೆಡ್ಡಿ-ಭಜರಂಗಿ ರೌಡಿಗಳು ಮನಸಾರೆ ತುಳಿದು ಕೇಕೆ ಹಾಕಿದರು. ಇದನ್ನೆಲ್ಲ ಶಾಸಕ ಪಾಟೀಲ್, ಡಿವೈಎಸ್ಪಿ, ಸಿಪಿಐ ಸಾಹೇಬರು ಕಣ್ಣು-ಬಾಯಿ ಬಿಟ್ಟುಕೊಂಡು ನೋಡಿದರು. ಇಷ್ಟಾಗುವಾಗ ರಾತ್ರಿ 9.30!! ಶಾಸಕನ ಮಗನ ಗ್ಯಾಂಗಿನ ಗೂಂಡಾಗಿರಿ ಮುಗಿದ ನಂತರ ಯಾರ್‍ಯಾರೋ ಹಲ್ಲೆಯಿಂದ ಜರ್ಜರಿತರಾಗಿದ್ದ ಪೊಲೀಸರನ್ನು ಆಸ್ಪತ್ರೆಗೆ ಸೇರಿಸಿದರು.

ಪೊಲೀಸ್ ಪಾತಕ!



ಶಾಸಕ ಪಾಟೀಲ್ ಖುದ್ದು ನಿಂತು ಮಗನಿಂದಲೇ ಪೊಲೀಸರಿಗೆ ಹೊಡೆಸಿ ತನ್ನ ಈಗೋ ಏನೋ ತಣಿಸಿಕೊಂಡರು. ಆತನ ಮಗ ರೌಡಿ ಬಾಪುಗೌಡ ಎಮ್ಮೆಲ್ಲೆ ಮಗನ ಪವರ ತೋರಿಸಿಕೊಂಡು ಪುಣ್ಯಕಟ್ಟಿಕೊಂಡು ಫೇಮಸ್ ಆದ. ಆದರೆ ಕಣ್ಣೆದುರೇ ತಮ್ಮ ಅಧೀನ ಸಿಬ್ಬಂದಿ ಪುಂಡರಿಂದ ಹಲ್ಲೆಗೀಡಾಗಿ ನರಳುತ್ತಿದ್ದುದ್ದನ್ನು ಡಿವೈಎಸ್ಪಿ ವೆರ್ಣೇಕರ್ ಮತ್ತವನ ಸಿಪಿಐ, ಪಿಎಸ್‌ಐಗಳು ನೋಡುತ್ತ ನಿಂತಿದ್ದು ಮಾತ್ರ ಘೋರ ಪಾತಕವೇ ಸರಿ!! ಮೊದಲನೆಯದಾಗಿ, ಈ ರಾಜಕೀಯದವರ ಒಣಪ್ರತಿಷ್ಠೆಯ ಹುಸಿ ಸಂಧಾನ ಸಭೆಗೆ ಅಪಾರ ಜನ ಸೇರುತ್ತಾರೆ, ಅವರೆಲ್ಲಾ ಶಾಸಕನ-ಅವರ ಮಗನ ನಿಷ್ಠಾವಂತ ಪುಂಡ ಅನುಯಾಯಿಗಳಾಗಿರುತ್ತಾರೆಂಬುದು ಗೊತ್ತಿದ್ದೂ ಪೊಲೀಸ್ ಅಧಿಕಾರಿಗಳು ಎಡವಟ್ಟು ಮಾಡಿಕೊಂಡಿದ್ದರು.

ಶಾಸಕನ ಉಂಡಾಡಿ ಪುಂಡನ ಮಿತ್ರರಿಗೆ ನೋಟೀಸ್ ಜಾರಿ ಮಾಡಿ ಸಣ್ಣ ಕೇಸೂ ಜಡಿದಿದ್ದ ಪೊಲೀಸರನ್ನು ಆ ಸಭೆಗೆ ಕರೆದಿದ್ದೇ ದೊಡ್ಡ ತಪ್ಪು. ಆ ಪೊಲೀಸರ ಮೇಲೆ ಶಾಸಕನ ಮಗನ ಟೋಳಿಗೆ ಆಕ್ರೋಶ-ಸೇಡು ಇದೆ ಎಂದು ಪೊಲೀಸ್ ಅಧಿಕಾರಿಗಳಿಗೆ ಗೊತ್ತಿರಲಿಲ್ಲವೇ? ಅದೊಂದು ರಣರಂಗವಾಗುತ್ತದೆಂಬ ವ್ಯವಹಾರ ಜ್ಞಾನ-ಪೊಲೀಸ್ ಜ್ಞಾನವೂ ಡಿವೈಎಸ್‌ಪಿ, ಸಿಪಿಐಗಳಿಗೆ ಇಲ್ಲದೆ ಹೋದದ್ದು ವಿಪರ್ಯಾಸ! ಹಿರಿಯ ಅಧಿಕಾರಿಗಳೇ ಕೈಕೆಳಗಿನ ಪಾಪದ ಪ್ಯಾದೆಗಳನ್ನು ಪುಂಡರ ಕೈಗೆ ಕೊಟ್ಟು ಬಡಿಸಿದಂತಾಗಿತ್ತು.

ಹಾಗೆಯೇ ಜನರೂ ಇಷ್ಟೊಂದು ನಿರ್ದಯವಾಗಿ ಪುಂಡಾಟ ಮಾಡಲು ಪೊಲೀಸರ ಪಾತಕವೂ ಕಾರಣ. ಪ್ಯಾದೆ ಪಾಂಡುರಂಗ ಪಾವಸ್ಕರ್ ಅಮಾಯಕರನ್ನು ಹೊಡೆಯುವುದು-ಬೆದರಿಸುವುದು-ಸುಲಿಯುವುದು ಇಡೀ ಮುಂಡಗೋಡಿಗೆ ಗೊತ್ತಿರುವಂಥದ್ದು. ಈತ ಸದಾ ಕುಡಿದಿರುತ್ತಾನೆ. ಗೂಡಂಗಡಿಗಳವರನ್ನು ಬಡಿದು ರೋಲ್‌ಕಾಲ್ ಮಾಡ್ತಾನೆ. ಇದು ಮುಂಡಗೋಡಿಗರನ್ನು ಕೆರಳಿಸಿತ್ತು. ಹಾಗೆಯೇ ದಾಖಲೆ ತೋರಿಸದ ಬೈಕ್ ಸವಾರರ ಮೇಲೊಂದು ಕೇಸ್ ಹಾಕಿ ಬಿಡುವುದು ಬಿಟ್ಟು ಅವರನ್ನು ಪಾವಸ್ಕರ್-ಪಾಲೇಕರ್ ಸತಾಯಿಸಿದ್ದು ತಪ್ಪು; ಅಷ್ಟೇ ಅಲ್ಲ, ಖಾಕಿ ದರ್ಪದಿಂದ ಶಾಸಕ ಮತ್ತು ಯುವರಾಜ ಬಾಪುಗೌಡನಿಗೂ ಬಾಯಿಗೆ ಬಂದಂತೆ ಅಮಲಿನಲ್ಲಿ ಬೈದಿದ್ದು-ಮೂದಲಿಸಿದ್ದು ಗಲಾಟೆಗೆ ಕಾರಣವಾಯ್ತು. ತಣ್ಣಗೆ ಕೇಸು ಹಾಕಿ ಕರ್ತವ್ಯ ಮಾಡಿದ್ದರೆ ಇಷ್ಟೆಲ್ಲ ಹೊಡೆತ ತಿನ್ನುವ ಹಾಗಾಗುತ್ತಿರಲಿಲ್ಲ. ಬೈಕ್ ಸವಾರರಿಂದ ದಕ್ಷಿಣೆ ಬಯಸಿ ಕಾಡಿದ್ದು ಪೊಲೀಸರು ಮಾಡಿದ ಅಪರಾಧ.

ಶಾಸಕ ಪಾಟೀಲ್ ತಾನು ಎಮ್ಮೆಲ್ಲೆಯಂಥ ಜವಾಬ್ದಾರಿಯುತ ಸ್ಥಾನಮಾನಕ್ಕೆ ಅನರ್ಹನೆಂಬುದು ಈ ಪ್ರಕರಣದಿಂದ ಸಾಬೀತಾಗಿಹೋಗಿದೆ. ಶಾಸಕನ ಪುತ್ರನ ಪುಂಡಾಟ ಪ್ರಸಂಗ ಜಿಲ್ಲೆಯ ಗಡಿದಾಟಿ ಸಿಎಂ ಯಡ್ಡಿ ಕಿವಿಗೂ ತಲುಪಿದೆ. ಸ್ವಜಾತಿ ಶಾಸಕನ ರಕ್ಷಿಸಲು ಸಿಎಂ ಪ್ರಕರಣವನ್ನು ಮುಚ್ಚಿಹಾಕಲು ಎಸ್ಪಿಗೂ ಸೂಚಿಸಿದ್ದಾರೆ. ಜಿಲ್ಲಾ ಮಂತ್ರಿ ಹೇತ್ಲಾಂಡಿ ಕಾಗೇರಿ ಡಬ್ಬಲ್ ಗೇಮ್ ಆಡುತ್ತಿದ್ದಾರೆ. ಯಡ್ಡಿ ಸರ್ಕಾರದ ಮಾನ ಹೋದರೂ ಪರವಾಗಿಲ್ಲ ಜಿಲ್ಲೆಯ ಬಿಜೆಪಿ ಶಾಸಕ-ಸಂಸದರಲ್ಲಿ ತನ್ನನ್ನು ಬಿಟ್ಟು ಉಳಿದವರೆಲ್ಲರೂ ನಾಲಾಯಕ್-ಜನದ್ರೋಹಿಗಳು-ಅವಾಂತರಕಾರಿಗಳು- ಅವ್ಯವಹಾರಿಗಳು ಎಂದು ತೋರಿಸಲು ಕಾಗೇರಿ ಸದಾ ಕರಾಮತ್ತು ಮಾಡುತ್ತಲೇ ಇರುತ್ತಾರೆ.

ಹೀಗಾಗಿ ಈಗ ಶಾಸಕರ ಮಗ ಬಾಪುಗೌಡ ಸಹಿತ ಆತನ 14 ಮಂದಿ ಸಹಚರರ ಮೇಲೆ ಪೊಲೀಸರಿಗೆ ಹೊಡೆದ ಕೇಸು ಹಾಕಲಾಗಿದೆ. ಬಾಪುಗೌಡ ಊರುಬಿಟ್ಟಿದ್ದಾನೆ. ಆತನ 8 ಜನ ಗೆಳೆಯರು ದಸ್ತಗಿರಿಯಾಗಿದ್ದಾರೆ. ಇನ್ನುಳಿದವರು ತಲೆಮರೆಸಿಕೊಂಡಿದ್ದಾರೆ. ಒಬ್ಬ ತಾಪಂ ಸದಸ್ಯನೂ ಒಳಗೆ ಬಿದ್ದಿದ್ದಾನೆ. ತನಿಖೆಗೆ ಸ್ಪೆಷಲ್ ಆಫೀಸರ್ ಅನ್ನು ನೇಮಿಸಲಾಗಿದೆ. ಮಗನ ಮಾತು ಕೇಳಿ 'ಎಮ್ಮೆಲ್ಲೆ ಪವರ್' ತೋರಿಸಲು ಹೋಗಿ ದೊಡ್ಡ ಗಂಡಾಂತರಕ್ಕೆ ಸಿಲುಕಿದ್ದಾರೆ. ಪಾರ್ಟಿಗೆ, ಸರ್ಕಾರಕ್ಕೆ ಆಗಿರುವ ಡ್ಯಾಮೇಜು, ಜನವಿರೋಧ, ಪೊಲೀಸರ ಆಕ್ರೋಶ ಕಂಟ್ರೋಲ್ ಮಾಡಲು ತನಿಖೆಯ ನಾಟಕ-ಕೇಸ್-ಬಂಧನ ನಡೆಸಲಾಗುತ್ತಿದೆ ಎಂದು ಕಾಗೇರಿ ಶಾಸಕ ಪಾಟೀಲರಿಗೆ ಸಮಾಧಾನ ಹೇಳುತ್ತಲೇ ಆತನ ಹಣಿಯುತ್ತಿದ್ದಾರೆ! ಕಾಗೇರಿ ಕಾಲದಲ್ಲಿ ಕಾನೂನಿ ನಾಡಳಿತ ನೆಲಕಚ್ಚಿಹೋಗಿದೆ. ಪೊಲೀಸರು ಸ್ಥೈರ್ಯಗೆಟ್ಟು ಚೆಡ್ಡಿಗಳ ಗುಲಾಮರಾಗಿದ್ದಾರೆ.

ಪೆದ್ದು ಶಾಸಕ ಪಾಟೀಲ್‌ಗೆ ಮಹಾಬ್ರಾಹ್ಮಣ ಕಾಗೇರಿಯ ಕರಾಮತ್ತು ಅರ್ಥವಾಗುತ್ತಿಲ್ಲ ಪಾಪ! ಪಾಟೀಲರ ಸತಾಯಿಸಿ ಕೇಸು ಹಳ್ಳಹಿಡಿಸುವುದು ಕಾಗೇರಿಯ ಗೇಮ್ ಪ್ಲಾನು. ಸ್ವಜಾತಿ ಶಾಸಕ, ನಿಷ್ಠಾವಂತ ಬಂಟ ವಿ.ಎಸ್.ಪಾಟೀಲರನ್ನು ಸಿ.ಎಂ. ಬಿಟ್ಟುಕೊಡುವುದಿಲ್ಲ, ಆದರೆ ಒಂದಂತೂ ಖರೆ. ಶಾಸಕ ಪಾಟೀಲರೂ, ಮಗ ಬಾಪುಗೌಡ ಹರಾಮಿ ಮಲ್ಲಿಕಾರ್ಜುನ ಕಟ್ರಿ ಎಂಬ ಶಕುನಿ ಮಾಮನಿಂದಾಗಿ ದಾರಿತಪ್ಪಿ ದೊಡ್ಡ ರಂಪ-ರಗಳೆ ಮಾಡಿಕೊಂಡಿದ್ದಾನೆಂಬುದು ಖಾತ್ರಿಯಾಗಿದೆ.


ಕೇಸೇನೋ ಖತಂ ಆಗಬಹುದು. ಆದರೆ ಶಾಸಕ ಪಾಟೀಲರ ಭಂಡಾಟ, ಆತನ ಮಗನ ಪುಂಡಾಟ, ಬಿಜೆಪಿ ಸರ್ಕಾರದ ಸಂಸ್ಕೃತಿ, ಪೊಲೀಸರ ಪಾತಕ ಇವು ಮುಂಡಗೋಡಿಗರು ಮರೆಯಲು ಸಾಧ್ಯವಾ?

• ನಹುಷ

ಸ್ವಾಭಿಮಾನಿ ಕನ್ನಡಿಗರ ಸಮಾವೇಶ

ಬೆಳಗಾವಿಯ ಸಮ್ಮೇಳನದ ಆರಂಭಕ್ಕೆ ಮುನ್ನಾದಿನ ಬೆಂಗಳೂರಿನಲ್ಲಿ ಕರ್ನಾಟಕ ಜನಶಕ್ತಿ ಸಂಘಟನೆಯು ಆಯೋಜಿಸಿದ್ದ 'ಸ್ವಾಭಿಮಾನಿ ಕನ್ನಡಿಗರ ಸಮಾವೇಶ'ವು ಅತೀ ಕಡಿಮೆ ಅವಧಿಯಲ್ಲಿ ಏರ್ಪಾಡಾಗಿದ್ದರೂ ದೊಡ್ಡ ಸಂಖ್ಯೆಯಲ್ಲಿ ಜನ ಭಾಗವಹಿಸಿದ್ದು ಗಮನಾರ್ಹವಾಗಿತ್ತು. ಇನ್ಫೋಸಿಸ್ ನಾರಾಯಣ ಮೂರ್ತಿಯ ನಿಜಬಣ್ಣವನ್ನು ತೆರೆದಿಟ್ಟ ಈ ಸಮಾವೇಶವು ಜನಸಾಮಾನ್ಯರು ಯಾವ ವಿಚಾರಗಳನ್ನು ಮರೆತು ಬಿಡಲಿ ಎಂದು ಬಿಜೆಪಿ ಸರ್ಕಾರ ಬಯಸಿತ್ತೋ ಅದೇ ವಿಚಾರಗಳನ್ನು ಆಯ್ಕೆ ಮಾಡಿ ಒಂದಿಡೀ ದಿನದ ಚರ್ಚೆ-ಸಂವಾದಗಳನ್ನು ನಡೆಸಿತು. ಬಿಜೆಪಿಯ ದುಷ್ಟ ಸರ್ಕಾರವು ತನ್ನ ಕೋಮುವಾದಿ ರಾಜಕಾರಣದ ಚೌಕಟ್ಟಿನೊಳಕ್ಕೆ ಕರ್ನಾಟಕದ ಸಾಂಸ್ಕೃತಿಕ ರಂಗವನ್ನು ಪಳಗಿಸಿ ಸೆಳೆದುಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳನ್ನು ಬಯಲುಗೊಳಿಸಿತು.

ಕೇವಲ ಬಿಜೆಪಿ ಮಾತ್ರವಲ್ಲ, ಕಾಂಗ್ರೆಸ್ ಅಥವಾ ಜೆಡಿಎಸ್‌ಗಳೇ ವಿಶ್ವ ಕನ್ನಡ ಸಮ್ಮೇಳನ ನಡೆಸಿದ್ದಿದ್ದರೂ ಈ ರೀತಿಯ ಒಂದು ಜಾಗೃತ ಕನ್ನಡಿಗರ ದನಿ ಸಮಾವೇಶದ ರೂಪದಲ್ಲಿ ದಾಖಲಾಗುತ್ತಿದ್ದುದು ಖಚಿತ. ಆ ದೃಷ್ಟಿಯಿಂದ ಇದು ಕೇವಲ ಕೋಮುವಾದಿ ಬಿಜೆಪಿಗಳು ನಡೆಸಿದ ವಿಶ್ವ ಕನ್ನಡ ಸಮ್ಮೇಳನಕ್ಕೆ ಮಾತ್ರ ಆಕ್ಷೇಪ ವ್ಯಕ್ತಪಡಿಸಿದ್ದಲ್ಲ ಎನ್ನಬಹುದು. ಜನಸಾಮಾನ್ಯರ ಬದುಕು-ಬವಣೆಗಳನ್ನು ಚರ್ಚಿಸಲಾಗದ ಸಮ್ಮೇಳನಗಳು ಯಾಕಾಗಿ ನಡೆಯಬೇಕೆಂಬುದೇ ಜಾಗೃತ ಕನ್ನಡಿಗರ ಪ್ರಶ್ನೆಯಾಗಿತ್ತು



ಇಷ್ಟಕ್ಕೂ, ಬೆಳಗಾವಿಯಲ್ಲೂ ಕೆಲವು ಗಂಭೀರ ಗೋಷ್ಠಿಗಳು ನಡೆದವು. ಆದರೆ ಆ ಗೋಷ್ಠಿಗಳಲ್ಲಿ ಒಬ್ಬನೇ ಒಬ್ಬ ಮಂತ್ರಿ, ಶಾಸಕ ಅಧಿಕಾರಿಗಳು ಕಾಣಿಸಿಕೊಳ್ಳಲಿಲ್ಲ, ಅವರೆಲ್ಲ ರಿಚರ್ಡ್ ಲೂಯಿಸ್ ಹಾಗೂ ಕೃಷ್ಣೇಗೌಡರ ಹಾಸ್ಯಗೋಷ್ಠಿಗೆ ಹೋಗಿ ಕೂತಿದ್ದರು.

ವಿಶ್ವ ಸಮಾವೇಶ ಬಿಜೆಪಿಯ ಆಪರೇಷನ್ ಕನ್ನಡ

• ಪಾರ್ವತೀಶ



ಶಾಸಕರನ್ನು ಖರೀದಿಸಲು ಆಪರೇಷನ್ ಕಮಲ ನಡೆಸಿದಂತೆ, ಸಾಹಿತಿ-ಕಲಾವಿದರು ಹಾಗೂ ಬುದ್ಧಿಜೀವಿಗಳನ್ನೂ ಖರೀದಿಸಲು ಒಂದು ಆಪರೇಷನ್ ನಡೆಯಿತೇ?

ಅದನ್ನು 'ಆಪರೇಷನ್ ಕನ್ನಡ' ಎನ್ನಬಹುದೇ?

ಬಿಜೆಪಿ ಸರ್ಕಾರ ಮಾರ್ಚ್ 11ರಿಂದ 13ರವರೆಗೆ ಬೆಳಗಾವಿಯಲ್ಲಿ ನಡೆಸಿದ 2ನೇ ವಿಶ್ವಕನ್ನಡ ಸಮ್ಮೇಳನದ ಭರಾಟೆ, ನೀರಿನಂತೆ ಹರಿದ ಕೋಟ್ಯಾಂತರ ಹಣ, ಪುಢಾರಿಗಳ ಸಡಗರ, ಬ್ಯೂರೋಕ್ರಾಟ್‌ಗಳ ಕೈಚಳಕ, ಬುದ್ಧಿವಂತರ ಮಂಕು ಕವಿದ ವರ್ತನೆ ಹಾಗೂ ಧನ್ಯತಾಭಾವಗಳನ್ನು ಗಮನಿಸಿದರೆ ಆಶ್ಚರ್ಯವಾಗುವಂತಿದೆ.

ಯಡ್ಡಿಯ ಹೇಳಿಕೆಯ ಪ್ರಕಾರ ಈ ಸಮ್ಮೇಳನಕ್ಕೆ ಖರ್ಚಾಗಿರುವ ಹಣ ಮೂವತ್ತೇಳು ಕೋಟಿ ರೂಪಾಯಿಗಳು! ಆದರೆ ಸಮ್ಮೇಳನದ ಮುಖ್ಯ ಜವಾಬ್ದಾರಿ ಹೊತ್ತಿದ್ದ ಹಿರಿಯ ಅಧಿಕಾರಿಯೊಬ್ಬರು 'ಲಂಕೇಶ್'ಗೆ ತಿಳಿಸಿದ್ದು ಒಟ್ಟು ಖರ್ಚು 60 ಕೋಟಿ ದಾಟಿದೆ ಎಂದು!

ಯಾವ ಪುರುಷಾರ್ಥಕ್ಕೆ ಇಷ್ಟು ದೊಡ್ಡ ಮೊತ್ತದ ಹಣ ಖರ್ಚು ಮಾಡಲಾಯಿತು?

ಇದರಿಂದೇನಾದರೂ ಕನ್ನಡ ಬೆಳೆಯಿತಾ? ಕನ್ನಡಿಗರ ಸಮಸ್ಯೆಗಳ ಕುರಿತಂತೆ ಆಳವಾದ ಚರ್ಚೆಯೇನಾದರೂ ಆಯಿತ? ಹೋಗಲಿ ಒಟ್ಟಾರೆ ಕರ್ನಾಟಕದ ವರ್ತಮಾನದ ಬದುಕು ಹಾಗೂ ಭವಿಷ್ಯದ ಬಗ್ಗೆ ಯೋಚಿಸಿ, ಚರ್ಚಿಸಿ ಅಜೆಂಡಾ ಒಂದನ್ನಾದರೂ ಹಾಕಿಕೊಳ್ಳಲಾಯಿತಾ?

ನಿಜ ಹೇಳಬೇಕೆಂದರೆ ಇದ್ಯಾವುದೂ ಆಗಲಿಲ್ಲ.

ಹಾಗಾದರೆ ಆಗಿದ್ದಾದರೂ ಏನು? ಬೇರೇನಿದೆ. 'ಆಪರೇಷನ್ ಕನ್ನಡ' ಅಷ್ಟೆ. ಇದನ್ನು ಎಷ್ಟು ವ್ಯವಸ್ಥಿತವಾಗಿ ನಡೆಸಲಾಗಿದೆಯೆಂದರೆ ಕೆಲವರಿಗೆ ಹಣ, ಹಲವರಿಗೆ ಅವಕಾಶ, ಇನ್ನೂ ಕೆಲವರಿಗೆ ಅನಿವಾರ್ಯತೆ, ಉಳಿದವರಿಗೆ ಆಹ್ವಾನ ಪಡೆದ ಕೃತಜ್ಞತಾಭಾವ ಮೂಡಿಸಿ ಒಟ್ಟಾರೆ ಬಹುತೇಕರು ಸಮಾವೇಶದಿಂದ ಹೊರಗುಳಿಯದಂತೆ ನೋಡಿಕೊಳ್ಳಲಾಯಿತು.

ಹೋಲ್‌ಸೇಲ್ ಖರೀದಿ

ಮೂರು ದಿನದ ಈ ಸಮ್ಮೇಳನವು ಕಿತ್ತೂರು ಚೆನ್ನಮ್ಮ ವೇದಿಕೆ, ಲಿಂಗರಾಜ ಕಾಲೇಜು ಹಾಗೂ ಆರ್‌ಪಿಡಿ ಮೈದಾನದಲ್ಲಿ 'ಸಮಾನಾಂತರವಾಗಿ ನಡೆದವು. ಆದರೆ ಹೆಚ್ಚಿನ ಸಮಯವನ್ನು ಹಾಡು, ಕುಣಿತ, ಸಂಗೀತ ಇವುಗಳೇ ಕಬಳಿಸಿದವು.

ಈ ಸಮಾವೇಶದಲ್ಲಿ ಒಂದೂವರೆ ಲಕ್ಷದಷ್ಟು ಜನ ಸೇರಿದ್ದಂತೂ ಹೌದು. ಮೂರು ದಿನದಲ್ಲಿ ಒಟ್ಟು ಹತ್ತು ಲಕ್ಷ ಜನ ಊಟ-ತಿಂಡಿ ತಿಂದು ಹೋಗಿದ್ದಾರೆ. ಭಾಗವಹಿಸಿದ್ದ ಜನರ ಪೈಕಿ ಸಾಹಿತಿ, ಕವಿ, ನಾಟಕ ಸಮೂಹ ಗಾಯಕರು, ಭಾಷಣಕಾರರು ಉಪಸ್ಥಿತಿ, ಪ್ರತಿಕ್ರಿಯಿಸುವವರು, ಉದ್ಘಾಟಕರು ಇಂತವರ ಸಂಖ್ಯೆಯೇ ಎರಡು ಸಾವಿರದಷ್ಟಿತ್ತು. ಅಂದರೆ ಕರ್ನಾಟಕದ ಕಲೆ ಸಾಹಿತ್ಯ ಸಂಸ್ಕೃತಿ ಕ್ಷೇತ್ರದ ಜನರಿವರು. ಇವರಲ್ಲಿ ಬಹುತೇಕರು ಬಿಜೆಪಿ ಸರ್ಕಾರದಿಂದ ನೇರವಾಗಿ ಆಹ್ವಾನ ಪಡೆದವರಾಗಿದ್ದರೆ ಇನ್ನುಳಿದವರನ್ನು ಆಯಾ ಜಿಲ್ಲೆಗಳ ಡಿಸಿಗಳು ಎತ್ತಾಕಿಕೊಂಡು ಬಂದಿದ್ದರು. ಸಮ್ಮೇಳನದ ಅಧಿಕೃತ ಖರ್ಚಿನ ಲೆಕ್ಕಕ್ಕೆ ಸೇರಿಸಿರದ ಎಲ್ಲಾ ಡಿಸಿಗಳ ಒಟ್ಟು ಖರ್ಚೆ 10 ಕೋಟಿ ದಾಟಿದೆ. ಪ್ರತಿ ಜಿಲ್ಲಾಧಿಕಾರಿಯೂ ವೋಲ್ವೋ ಬಸ್‌ಗಳನ್ನು ಬುಕ್ ಮಾಡಿ ಆಯಾ ಜಿಲ್ಲೆಗಳಿಂದ ಕನಿಷ್ಠ ಐವತ್ತು ಗಣ್ಯರನ್ನು ತುಂಬಿಕೊಂಡು ಬರುವಂತೆ ಸರ್ಕಾರ ಆದೇಶಿಸಿತ್ತು. ಖಚಿತ ಮಾಹಿತಿಯ ಪ್ರಕಾರ ಯಾವ ಜಿಲ್ಲೆಯಲ್ಲೂ ಜನರನ್ನು ಸೇರಿಸಲು ಡಿಸಿಗಳಿಗೆ ಕಷ್ಟವಾಗಲಿಲ್ಲ. ಈ ಬಸ್‌ಗಳ ಖರ್ಚಿನ ಜೊತೆಗೆ ಎಲ್ಲಾ ಜಿಲ್ಲೆಗಳಲ್ಲೂ ವಿಶ್ವ ಸಮ್ಮೇಳನದ ಕನ್ನಡ ರಥ, ಸ್ತಬ್ಧ ಚಿತ್ರಗಳ ಮೆರವಣಿಗೆ, ಬ್ಯಾನರ್ ಕರಪತ್ರಗಳ ಪ್ರಚಾರ ಕಾರ್ಯಕ್ಕೂ ಕೋಟ್ಯಾಂತರ ರೂಪಾಯಿ ಸುರಿಯಲಾಗಿದೆ.

ಇದೆಲ್ಲಕ್ಕಿಂತ ದಿಗ್ಭ್ರಮೆ ಹುಟ್ಟಿಸುವ ಸಂಗತಿ ಏನೆಂದರೆ ಸಮ್ಮೇಳನದಲ್ಲಿ ಭಾಗವಹಿಸಿದವರಿಗೆ ಬಿಜೆಪಿಗಳು ಕೊಟ್ಟಿರುವ ಸಂಭಾವನೆಯ ಮೊತ್ತ!

ಇದೆಷ್ಟಿದೆ ಗೊತ್ತೆ?

ಒಂದು ಪದ್ಯ ಓದಿದರೆ ಐದು ಸಾವಿರ, 20 ನಿಮಿಷಗಳ ಒಂದು ಭಾಷಣಕ್ಕೆ 7 ಸಾವಿರ, ಭಾಷಣಕ್ಕೆ ಪ್ರತಿಕ್ರಿಯೆ ನೀಡಿದವರಿಗೆ 5 ಸಾವಿರ, ಒಂದು ಗೋಷ್ಠಿಯ ಅಧ್ಯಕ್ಷತೆ ವಹಿಸಿದರೆ ಅಥವಾ ಉದ್ಘಾಟನೆ ಮಾಡಿದವರಿಗೆ ಅನಾಮತ್ತು 20 ಸಾವಿರ ರೂ. ಹಂಚಲಾಗಿದೆ. ಇಷ್ಟೇ ಅಲ್ಲ ಈ ಸಂಭಾವನೆಯೊಂದಿಗೆ ತಲಾ ಮೂರು ಸಾವಿರ ರೂ. ಪ್ರಯಾಣದ ಖರ್ಚು ನೀಡಲಾಗಿದೆ. ಇದರ ಜೊತೆಗೆ ಉಚಿತ ಊಟ-ವಸತಿ ಸೌಲಭ್ಯವೂ ಇತ್ತು.

ಕನ್ನಡ ಕಾವ್ಯ ಚರಿತ್ರೆಯಲ್ಲೇ ಒಂದು ಪದ್ಯ ಓದಿದವರಿಗೆ ಐದು ಸಾವಿರ ರೂಪಾಯಿ ಕೊಟ್ಟ ಉದಾಹರಣೆ ಇಲ್ಲ. ಇದೆಲ್ಲ ಯಾರಪ್ಪನ ಮನೆಯ ದುಡ್ಡೆಂದು ಬಿಜೆಪಿಗಳು ಹಂಚಿದರು? ಇಷ್ಟಕ್ಕೂ, ತಾವು ಓದಿದ ಪದ್ಯಕ್ಕೋ, ನೀಡಿದ ಉಪನ್ಯಾಸಕ್ಕೋ ಮೀರಿದ ಹಣ ಪಡೆಯುವಾಗ ಈ ಕಲಾವಿದರಿಗೆ ಅಳುಕಾಗಬೇಕಿತ್ತಲ್ಲವೇ?

ಅದರ ಬದಲಾಗಿ ತಮಗೆ ಕೊಟ್ಟ ಹಣ ಕಡಿಮೆಯೆಂದು ಹಾದಿರಂಪ-ಬೀದಿರಂಪಗಳೇ ಆಗಿಹೋದವು.

ಸುಗಮ ಸಂಗೀತಗಾರರ ಗುಂಪಿನ ರತ್ನಮಾಲ ಪ್ರಕಾಶ್, ಮಾಲತಿ ಶರ್ಮ ಮತ್ತಿತರರು ಹಾಡಿದ ನಾಲ್ಕೈದು ಹಾಡಿಗೆ ಮೊದಲು ತಲಾ ಹದಿನೈದು ಸಾವಿರ ಕೊಡಲಾಗಿತ್ತು. ಆದರೆ ಸಿಟ್ಟಿಗೆದ್ದ ಇವರು ಜಗಳ ಕಾದು ತಲಾ ಮೂವತ್ತೈದು ಸಾವಿರ ತೆಗೆದುಕೊಂಡರು. ಇವರ ಜಗಳಕ್ಕೆ ಕಾರಣ ಏನು ಗೊತ್ತೇ?

ಬೇರೆ ಭಾಷೆಯ, ಬೇರೆ ರಾಜ್ಯದ ಕಲಾವಿದರಿಗೆ ಜಾಸ್ತಿ ದುಡ್ಡುಕೊಟ್ಟು ಕನ್ನಡ ಕಲಾವಿದರಿಗೆ ಕಡಿಮೆ ಕೊಡುತ್ತಿದ್ದೀರೆಂಬುದೇ ಅವರ ಜಗಳವಾಗಿತ್ತು!

ಈ ಮಹನೀಯರು ಇದನ್ನೂ ಕೇವಲ ತಾರತಮ್ಯ ಎಂದು ನೋಡಿದರೆ ವಿನಃ ಜನರ ತೆರಿಗೆಯ ಹಣವನ್ನು ಜೇಬಿಗಿಳಿಸುತ್ತಿದ್ದೇವಲ್ಲವೇ ಎಂಬ ಅಳುಕೇ ಇರಲಿಲ್ಲ.

ಕನ್ನಡಪರ ಒಲವು-ನಿಲುವೆಂದರೆ

ಈ ಸಮ್ಮೇಳನದಲ್ಲಿ ಪಾಲ್ಗೊಂಡ ಬಹುಸಂಖ್ಯಾತ ಪ್ರಗತಿಪರರಿಗೆ ಬಿಜೆಪಿಗಳ ಅಸಲಿ ಬಣ್ಣ ಗೊತ್ತಿರಲಿಲ್ಲವೆಂದೇನೂ ಅಲ್ಲ. ವಿಶ್ವ ಕನ್ನಡ ಸಮ್ಮೇಳನಕ್ಕೆ ಬದಲಾಗಿ ಬಿಜೆಪಿಯು 'ಹಿಂದೂ ಸಮಾಜೋತ್ಸವ' ನಡೆಸಿದ್ದಿದ್ದರೆ ಇವರಲ್ಲಿ ಹೆಚ್ಚಿನವರು ಭಾಗವಹಿಸುತ್ತಿರಲಿಲ್ಲ ಎಂಬುದೂ ನಿಜ. ಆದರೆ ಸಾಂಸ್ಕೃತಿಕ ರಾಜಕಾರಣದ ನಿಲುವುಗಳು ಅಷ್ಟು ಸರಳವಾಗಿರುವುದಿಲ್ಲ. ಯಡಿಯೂರಪ್ಪನ ಸರ್ಕಾರ ಇವತ್ತು ಇಡೀ ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ ಎನಿಸಿಕೊಂಡಿದೆ. ಸರಿಯಾದ ತನಿಖೆಯಾಗಿ ಶಿಕ್ಷೆಯಾದರೆ ಈ ಯಡ್ಡಿ ತನ್ನ ಉಳಿದ ಜೀವನವನ್ನೆಲ್ಲಾ ಜೈಲಿನಲ್ಲೇ ಕಳೆಯಬೇಕಾಗುತ್ತದೆ. ಕಳೆದ ಹತ್ತು ವರ್ಷಗಳಿಂದಲೂ ನಿರಂತರವಾಗಿ ಕೋಮು ಬೆಂಕಿ ಹಬ್ಬಿಸುತ್ತಿರುವ ಸಂಘಪರಿವಾರವು ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ದಲಿತರು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರ ವಿರುದ್ಧ ನೇರ ದೈಹಿಕ ಆಕ್ರಮಣ ನಡೆಸುತ್ತಿದೆ. ಈ ದೊಂಬಿಗಳಲ್ಲಿ ಹತ್ತಾರು ಜನ ಹತ್ಯೆಗೊಳಗಾಗಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ. ಈ ಕೋಮುವಾದಿ ಉನ್ಮಾದವು ಪ್ರಜಾಪ್ರಭುತ್ವದ ವ್ಯಾಪ್ತಿಯನ್ನು ದಿನೇದಿನೇ ಕಿರಿದಾಗಿಸುತ್ತಿವೆ. ನಾಶವಾಗಬೇಕಿದ್ದ ಬ್ರಾಹ್ಮಣಶಾಹಿ ಮೌಲ್ಯಗಳನ್ನು ಇದೇ ಸರ್ಕಾರ ಇಡೀ ಸಮಾಜದ ಮೇಲೆ ಹೇರುತ್ತಿದೆ.

ಹೊಣೆಯರಿತ ಯಾರೇ ಆದರೂ ಇಂತಹ ಸರ್ಕಾರದೊಂದಿಗೆ ಗುರುತಿಸಿಕೊಳ್ಳಲು, ಸರ್ಕಾರಿ ಪ್ರಾಯೋಜಿತ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಮೊದಲು ಒಂದಲ್ಲ ಹತ್ತು ಬಾರಿ ಯೋಚಿಸಬೇಕಾಗುತ್ತದೆ.

ನೆರೆ ಸಂತ್ರಸ್ತರಿಗೆ ಪರಿಹಾರ, ನಿಸರ್ಗ ಸಂಪತ್ತಿನ ಲೂಟಿ, ರೈತರ ಆತ್ಮಹತ್ಯೆ ಇದ್ಯಾವುದರತ್ತಲೂ ಗಮನ ಹರಿಸದ, ಹಣ ಖರ್ಚು ಮಾಡದ ಯಡ್ಡಿ ಸರ್ಕಾರವು ಕನ್ನಡ ಸಮಾವೇಶಕ್ಕೊಂದು 60 ಕೋಟಿ ರೂ. ಸುರಿದಿದೆ.

ಈಗ 25 ಕೋಟಿ ರೂ. ಖರ್ಚು ಮಾಡಿ ಭುವನೇಶ್ವರಿ ಪ್ರತಿಮೆ ಮಾಡಿಸುವುದಾಗಿಯೂ ಯಡ್ಡಿ ಹೇಳಿದ್ದಾರೆ. ಇವೆಲ್ಲವೂ ಕನ್ನಡತನವನ್ನು, ಕನ್ನಡಾಭಿಮಾನವನ್ನು ಸಮಾವೇಶ, ಪ್ರತಿಮೆಗಳ ಮೂಲಕ ಸಾಂಕೇತೀಕರಿಸುವ, ಸೀಮಿತಗೊಳಿಸುವ ಹುನ್ನಾರ ಮಾತ್ರ.

ಈ ಹುನ್ನಾರ ಬೆಳಗಾವಿಯ ಸಮಾವೇಶದ ಮಟ್ಟಿಗೆ ಯಶಸ್ವಿಯಾಗಿದೆ. ಯಡ್ಡಿ ಸರ್ಕಾರದ ಕೊಲೆ, ಕಳ್ಳತನ, ಜನವಿರೋಧಿ ನೀತಿಗಳನ್ನು ಖಂಡಿಸುವವರು ಅದೇ ಕೋಮುವಾದಿ ಖದೀಮರು "ಕನ್ನಡ ಸಮಾವೇಶ ಮಾಡುತ್ತೇವೆ ಬನ್ನಿ" ಅಂದಾಕ್ಷಣ ಹೋಗಿ ಜೊತೆಗೆ ನಿಂತು ಬಿಟ್ಟರೆ ಖೇದವೆನಿಸುತ್ತದೆ.

ಅಧಿಕಾರಿಗಳು ದುಡ್ಡು ಕದ್ದರಾ?

ಹಾಗಂತ ಒಂದು ಬೀದಿ ಜಗಳ ಸಮ್ಮೇಳನ ಮುಕ್ತಾಯಗೊಂಡ ಬೆನ್ನಲ್ಲೇ ಸ್ಫೋಟಗೊಂಡಿದೆ. ಸಂಗೀತ ಕಾರ್ಯಕ್ರಮವೊಂದರಲ್ಲಿ ವಾದ್ಯಗಾರರಾಗಿ ಭಾಗವಹಿಸಿದ್ದ ಎನ್.ಎಸ್. ಪ್ರಸಾದ್, ಆರ್. ಲೋಕೇಶ್, ಸಿ.ಎನ್. ವಸಂತ ಕುಮಾರ್, ರಾಜೀವ ಜೋಯಿಸ್ ಹಾಗೂ ವಿ. ಯಶೋಧರಾ ಎಂಬುವರು ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ಒಂದು ಕಂಪ್ಲೇಂಟ್ ನೀಡಿ 'ತಾವು ಐದು ಜನರಿಗೆ ತಲಾ ಹತ್ತು ಸಾವಿರದಂತೆ ಒಟ್ಟು 50 ಸಾವಿರ ಕೊಡಬೇಕಿತ್ತಂತಲೂ ಆದರೆ 25 ಸಾವಿರ ಮಾತ್ರ ಕೊಟ್ಟಿದ್ದಾರೆಂತಲೂ' ದೂರಿದ್ದಾರೆ.


ಮುದ್ದುಕೃಷ್ಣ

ಅವರ ಕಾರ್ಯಕ್ರಮದ ಸಮನ್ವಯಕಾರರಾಗಿದ್ದ ವೈ.ಕೆ. ಮುದ್ದುಕೃಷ್ಣರೇ ಹಣ ಬಟವಾಡೆ ಮಾಡಿರುವ ವ್ಯಕ್ತಿ. ಇದೇ ರೀತಿ ಫಲ್ಗುಣ ಹಾಗೂ ಉಪಸನಾ ಮೋಹನ್ ಸಮನ್ವಯಕಾರರಾಗಿದ್ದ ಇತರ ಸಂಗೀತ ಕಾರ್ಯಕ್ರಮಗಳಲ್ಲಿ ವಾದ್ಯಗಾರರಿಗೆ ತಲಾ ಹತ್ತು ಸಾವಿರ ನೀಡಲಾಗಿತ್ತು. ಹಾಗೆಂದ ಮೇಲೆ ಮುದ್ದುಕೃಷ್ಣ ಕೂಡ ತಲಾ ಹತ್ತು ಸಾವಿರದಂತೆ ಹಣ ನೀಡಬೇಕಿತ್ತಲ್ಲವೆ? ಈಗ ಹಣ ಕೇಳಿದ್ದಕ್ಕೆ ಮುದ್ದುಕೃಷ್ಣ ವಾದ್ಯಗಾರರ ಮೇಲೇ ರೋಫ್ ಹಾಕಿದರಂತೆ!

ಮುದ್ದುಕೃಷ್ಣರನ್ನು ಬಲ್ಲವರ ಪ್ರಕಾರ ಆತ ಜುಜುಬಿ ಸಾವಿರ ಕದಿಯುವಂತಹವರಲ್ಲ.

ಹಾಗಾದರೆ ವಾದ್ಯಗಾರರ ಹಣ ಎಲ್ಲಿ ಮಾಯವಾಯಿತು! ಒಂದು ಸಣ್ಣ ಕಾರ್ಯಕ್ರಮದ ಬಾಬತ್ತಿನಲ್ಲೇ ಅಧಿಕಾರಿಗಳು 25 ಸಾವಿರ ಕದ್ದಿದ್ದಾರೆಂದರೆ ಇನ್ನು ಮೂರು ದಿನ, ಮೂರು ಸ್ಥಳಗಳಲ್ಲಿ ಗಂಟೆಗೊಂದರಂತೆ ನಡೆಯುತ್ತಿದ್ದ ಪ್ರೋಗ್ರಾಂಗಳಲ್ಲಿ ಅದಿನ್ನೆಷ್ಟು ಹಣ ಕಳುವಾಗಿರಬಹುದು?



ಐಶ್ವರ್ಯಾಗೆ 30 ಲಕ್ಷ! ಹೇಮಾಗೆ 20 ಲಕ್ಷ!! ಎಸ್‌ಪಿಗೆ 11 ಲಕ್ಷ!!!

ಇದನ್ನು ಸಾಂಸ್ಕೃತಿಕ ದರೋಡೆ ಎನ್ನಲಡ್ಡಿಯಿಲ್ಲ.

ಕರ್ನಾಟಕದವಳು ಎನ್ನುವ ಒಂದೇ ಕಾರಣಕ್ಕೆ ಸಿನಿಮಾ ನಟಿ ಐಶ್ವರ್ಯ ರೈಳನ್ನು ಬೆಳಗಾವಿಗೆ ಕರೆಸಲಾಗಿತ್ತು. ಹಾಗೆ ವಾಲಾಡಿಕೊಂಡು ವೇದಿಕೆಗೆ ಬಂದ ಈ ಸುಂದರಿಗೆ ಅಲ್ಲಿದ್ದವರ ಪೈಕಿ ರಾಜ್ಯದ ಮುಖ್ಯಮಂತ್ರಿ ಯಾವನು, ಇತರ ಅತಿಥಿಗಳ್ಯಾರು ಎಂಬುದೇ ಗೊತ್ತಿರಲಿಲ್ಲ. ಅಂತಾ ಹೆದ್ದು ಹೆಂಗುಸು ಮಾಡಿದ ಮೂರು ಮುಕ್ಕಾಲು ನಿಮಿಷದ ಭಾಷಣಕ್ಕೆ ಯಡ್ಡಿ ಸರ್ಕಾರ 30 ಲಕ್ಷ ರೂ. ಕೊಟ್ಟಿದೆ ಎಂಬ ರೂಮರ್‌ಗಳಿವೆ. ಹೇಮಾಮಾಲಿನಿಯನ್ನು ವಿಶೇಷ ಅತಿಥಿಯಾಗಿ ಆಹ್ವಾನಿಸಿ ಅವಳಿಗೂ 20 ಲಕ್ಷ ರೂ. ಕೊಡಲಾಗಿದೆ.



ಈ ಹಿಂದೆ ಹಂಪಿ ಉತ್ಸವಕ್ಕೆ ಬಂದು ಡ್ಯಾನ್ಸ್ ಮಾಡಿದ್ದ ಈ ರಾಜನರ್ತಕಿಗೆ ಆಗಲೂ 20 ಲಕ್ಷ ರೂಪಾಯಿ ಕೊಡಲಾಗಿತ್ತು. ಇದೇ ಸಮ್ಮೇಳನದಲ್ಲಿ ಹಾಡಿದ ಎಸ್‌ಪಿಬಾಲಸುಬ್ರಮಣ್ಯಂಗೆ ಅನಾಮತ್ತು 11 ಲಕ್ಷ, ಬಾಲಮುರುಳಿ ಕೃಷ್ಣಗೆ 3 ಲಕ್ಷ ರೂ. ಕೊಡಲಾಗಿದೆ. ನೃತ್ಯ ಸಂಯೋಜನೆ ಮಾಡಿದ ಮಾಯಾರಾವ್ ಎಂಬಾಕೆಗೆ ಒಂದೇ ಗಂಟನಲ್ಲಿ 20 ಲಕ್ಷ ಕೊಟ್ಟಿದ್ದಾರೆ. ಹಿಂದಿ ಗಾಯಕನೊಬ್ಬನಿಗೆ 9 ಲಕ್ಷ ಕೊಟ್ಟು ಕಳಿಸಿರುವ ವರ್ತಮಾನವಿದೆ.

ಇದನ್ನು ಹುಚ್ಚಾಟವೆನ್ನದೆ ವಿಧಿಯಿಲ್ಲ.

ನಾ.ಮೂ. ಉವಾಚ: ಬಂಡವಾಳವಾದದ ಕಪಟ ನಾಟಕ

ತಮ್ಮ ಬಾಲಿಶ ಹಾಗೂ ಬೂಟಾಟಿಕೆಯ ಮಾತು ದ ನಾರಾಯಣ ಮೂರ್ತಿಯವರೇನೋ 2 ನೇ ಕನ್ನಡ ಸಮ್ಮೇಳನದ ಉದ್ಘಾಟನೆಗೆ ತಮ್ಮ ಅನರ್ಹತೆ ತಾವೇ ಸಾಬೀತುಪಡಿಸಿದರು. ಆದರೆ ಕರ್ನಾಟಕದ ಮ ಜಗತ್ತು ಮಾತ್ರ ಅವರ ಭಾಷಣದಲ್ಲಿಯ ವಾಳವಾದದ ಕಪಟತನಗಳನ್ನು ಮರೆಮಾಚಿ ನಮ್ಮ ದ ಮಹಾದಾರ್ಶನಿಕನೊಬ್ಬನ ಶ್ರೇಷ್ಠ ಕಾಣ್ಕೆಗಳು ಂತೆ ವೈಭವೀಕರಿಸಿರುವುದು 'ಲದ್ದಿ ಆನೆಯದಾಗಿದ್ದ ಸುವಾಸಿತವಾಗಿದೆ' ಎಂಬಂತಾಗಿದೆ.

ನಾರಾಯಣ ಮೂರ್ತಿ, ಪ್ರೇಮ್‌ಜಿ, ಅಂಬಾನಿಯಂಥ ಐಕಾನ್‌ಗಳೆಂದು ನಂಬುವ ಮಧ್ಯಮವರ್ಗ, ಭಾಷೆಯ ಅಸ್ತಿತ್ವದ ವಿಷಯದಲ್ಲಿ ಭಾವುಕರಾಗಿದ್ದ ಡ ಕನ್ನಡಿಗರು ಹಾಗೂ ಆಳುವ ಪಕ್ಷದ ಕಾರ್ಯ ನನ್ನು ಒಳಗೊಂಡ ಲಕ್ಷಾಂತರ ಜನತೆ ಸಮೂಹ ಳಗಾದಂತೆ ನಾರಾಯಣ ಮೂರ್ತಿಗಳ ಭಾಷಣಕ್ಕೆ ಡಿಸಿದ ಭಾವನಾತ್ಮಕ ಪ್ರತಿಕ್ರಿಯೆಯನ್ನು ಇಡೀ ಟಕಕ್ಕೆ ರವಾನಿಸಿ ಅವರಿಗೆ ಸಾರ್ವಜನಿಕ ಮನ್ನಣೆ ತಂದುಕೊಡುವಲ್ಲಿ ಮಾಧ್ಯಮಗಳು ಶಕ್ತಿ ಮೀರಿ ತ್ನಿಸಿದವು. ಸಮ್ಮೇಳನದಲ್ಲಿ ಭಾಗವಹಿಸಿದ ದೊಡ್ಡ ಲೇಖಕರು, ಯುವಕ್ರಾಂತಿಕಾರಿಗಳು(?) ಬೇರೆ ವೇದಿಕೆಗಳಿಂದ ದೊಡ್ಡಪ್ರಮಾಣದ ಚರ್ಚೆಯನ್ನು ಹಾಕದೇ ಸಂಭ್ರಮದಲ್ಲಿ ಲೀನವಾಗಿ ಹೋಗಿದ್ದು ಭವೀಕರಣಕ್ಕೆ ಕೈಜೋಡಿಸಿದಂತೆ ಕಾಣುತ್ತಿತ್ತು.

ನಾರಾಯಣ ಮೂರ್ತಿಯವರ ಸರಳ ಸಜ್ಜನಿಕೆಯ ಗಳಲ್ಲಿ ಅಡಕವಾಗಿರುವ ಕಾರ್ಪೊರೇಟ್ ಚಿಂತನೆ, ನುಡಿ ಕುರಿತಾದ ಬೂಟಾಟಿಕೆಗಳನ್ನು ಒರೆಗೆ ಬೇಕಿದೆ.

"ಹಣದ ಹಿಂದೆ ಓಡಬೇಡಿ ಕೆಲಸವನ್ನು ಪ್ರೀತಿಸಿ" ನಾಡಿನ ಯುವ ಸಮುದಾಯಕ್ಕೆ ನಾರಾಯಣ ರ್ತಿಯವರು ನೀಡಿದ ಕರೆ. ಪತ್ರಿಕೆಗಳು ಈ ಮುಕಾರಿ ಹೇಳಿಕೆಯನ್ನು ಬುದ್ಧ ಬಸವ ಏಸು ಬರ ಸಂದೇಶಗಳಿಗಿಂತಲೂ ಮಹತ್ವದ್ದು ಎಂಬಂತೆ ದ ನೀಡಿದವು. "ಮಹತ್ವಾಕಾಂಕ್ಷೆ ಹಾಗೂ ಾಪೇಕ್ಷೆಗಳಿಲ್ಲದೇ ಯುವಜನಾಂಗ ಪ್ರೀತಿ ನಿಷ್ಠೆ ಂದ ದುಡಿಯಬೇಕೆಂದು ಅವರು ಬಡಬಡಿಸಿದ್ದಾರೆ. ಣ್ಯೆ ವಾದಿಕಾರಸ್ಯ ಮಾ ಫಲೇಶು ಕದಾಚನ' ಭಗವದ್ಗೀತೆಯ ಆಶಯವನ್ನು ಕಾರ್ಪೊರೇಟ್ ಭಾಷೆಯಲ್ಲಿ ನವೀಕರಿಸಿದ್ದಾರೆ" ಎಂದೆಲ್ಲ ಮಗಳು ವರದಿ ಮಾಡಿದವು.

ದರೆ ಸಾವಿರಾರು ವರುಷಗಳಿಂದ ಜಗತ್ತಿನ ಎಲ್ಲ ಶ್ರೇಣೀಕೃತ ವ್ಯವಸ್ಥೆಗಳ ಫ್ಯೂಡಲ್ ಲಾರ್ಡ್‌ಗಳು ದುಡಿಯುವ ವರ್ಗಕ್ಕೆ ನೀಡುತ್ತ ಬಂದ ಹಿತವಚನ ಇದೇ ತಾನೇ? ಹಣ ಅಥವಾ ಅರ್ಥವ್ಯವಸ್ಥೆಯ ಹಿಂದೆಯೂ ಮುಂದೆಯೂ ಪವಡಿಸಿ ಅದನ್ನು ನಿಯಂತ್ರಿಸಿ ನಿರ್ದೇಶಿಸುವ ಸಕಲ ಜವಾಬ್ದಾರಿಯನ್ನು ತಾವು ಹೊತ್ತು ಕೊಂಡಿದ್ದು ದುಡಿಯುವ ವರ್ಗವೇನಿದ್ದರೂ ಪ್ರಶ್ನಿಸದೇ ಪ್ರತಿಭಟಿಸದೇ ಹೆಚ್ಚಿನದನ್ನು ಬಯಸದೇ ಮಹತ್ವಾಕಾಂಕ್ಷೆಗಳಿಲ್ಲದೇ ಯಜಮಾನಿ ವ್ಯವಸ್ಥೆಯ ಸುಖ ನೆಮ್ಮದಿಸಮೃದ್ಧಿ ಗಳಿಗಾಗಿ ಬೆವರಿನ ಹೊಳೆಯನ್ನು ಮೌನವಾಗಿ ಪ್ರೀತಿಯಿಂದ ಹರಿಸಬೇಕೆಂಬುದು ಅವರ ಮಾತಿನ ಇಂಗಿತ. 'ಬಡವಾ ನೀ ಮಡಗಿದಂಗಿರು' ಎನ್ನುವುದು ಅವರ ಉವಾಚ. ಭಾರತದಲ್ಲಿ ಪ್ರಾಚೀನಕಾಲದಿಂದಲೂ ಧರ್ಮಗ್ರಂಥಗಳು ಶಾಸ್ತ್ರಗಳು ಪುರಾಣಗಳು ಧಾರ್ಮಿಕ ನಂಬಿಕೆಗಳ ಮೂಲಕ ಇಂಥ ಗುಲಾಮಗಿರಿಯನ್ನು ದುಡಿಯುವ ವರ್ಗದ ಜನಮಾನಸದಲ್ಲಿ ಪ್ರತಿಷ್ಠಾಪಿಸಲು ಯತ್ನಿಸಿವೆ. ಪ್ಲೇಟೋ, ಅರಿಸ್ಟಾಟಲ್ ಕೂಡ ಆದರ್ಶರಾಜ್ಯದ ಪ್ರತಿಷ್ಠಾಪನೆಗೆ ಅಡಿಪಾಯವಾಗಿ ಇಂಥ ಗುಲಾಮಗಿರಿಯನ್ನು ಪ್ರತಿಪಾದಿಸಿದವರೇ. ನಾರಾಯಣ ಮೂರ್ತಿಯವರು ಸನಾತನ ವ್ಯವಸ್ಥೆಯ ಸನಾತನ ಮೌಲ್ಯವನ್ನು ಆಧುನಿಕ ಬಂಡವಾಳಶಾಹಿ ವ್ಯವಸ್ಥೆಗೆ ಪೂರಕವಾಗುವ ರೀತಿಯಲ್ಲಿ ಭಾಷಾಂತರಿಸಿದ್ದಾರಷ್ಟೇ.

ಜಾಗತೀಕರಣದ ಆಕ್ರಮಣದ ಮೂಲಕ ಉಂಟಾಗಿರುವ ಭಯಂಕರ ಅಸಮತೋಲನ ಹಾಗೂ ಸಂಕಟದ ಪರಿಸ್ಥಿತಿಗಳನ್ನು ಕುರಿತಾಗಿ ಅರಿವನ್ನು ಪಡೆದು ಬಿಡುಗಡೆಯ ಹೋರಾಟಗಳಿಗೆ ಸ್ಫೂರ್ತಿ ನೀಡಬೇಕಾದ ಮಧ್ಯಮವರ್ಗವನ್ನು ಕಾರ್ಪೊರೇಟ್ ಮೌಲ್ಯಗಳು ಚೌಕಟ್ಟಿನಲ್ಲಿ ಬಂಧಿಸುವುದು ಸದ್ಯದ ನವಬಂಡವಾಳಶಾಹಿಯ ತುರ್ತಾಗಿದೆ. ನಾರಾಯಣ ಮೂರ್ತಿಯವರು ತಮ್ಮ ಮೊದಲ ಮಾತಿನಲ್ಲಿಯೇ ಬಂಡವಾಳವಾದದ ಅಗತ್ಯವನ್ನು ಪೂರೈಸಿದ್ದಾರೆ. ವಿಶ್ವ ಕನ್ನಡ ಸಮ್ಮೇಳನದ ವೇದಿಕೆಯು ಕರ್ನಾಟಕದ ದುಡಿಯುವ ಮತ್ತು ಮಧ್ಯಮವರ್ಗಗಳಿಗೆ ಬಂಡವಾಳವಾದದ ಪರವಾದ ಚಿಂತನೆಗಳನ್ನು ಭಾವನಾತ್ಮಕವಾಗಿ ತಲುಪಿಸಲು ಬಳಕೆಯಾಯಿತು. ಪ್ರಭುತ್ವ ನಿರ್ಮಿಸುವ ಸಾಂಸ್ಕೃತಿಕ ವೇದಿಕೆಗಳು ದುರ್ಬಳಕೆಗೊಳ್ಳುವ ಕ್ರಮವನ್ನು ವಿರೋಧಿಸಲೇ ಬೇಕು.

"ಹಣದ ಬೆನ್ನು ಹತ್ತಬೇಡಿ ಕೆಲಸವನ್ನು ಪ್ರೀತಿಸಿ" ಎಂದು ಹೇಳುವ ನೈತಿಕ ಹಕ್ಕು ನಾರಾಯಣ ಮೂರ್ತಿಯವರಿಗಿದೆಯೇ? ಅವರು ಹೋಗಿದ್ದು ಹಣವನ್ನು ಬೆನ್ನಟ್ಟಿಯೇ ಅಲ್ಲವೇ? ಎರಡು ದಶಕಗಳ ಹಿಂದೆ ಸುಧಾ ಮೂರ್ತಿ ಹಾಗೂ ನಾರಾಯಣ ಮೂರ್ತಿಗಳು ಏನಾಗಿ



ದ್ದರು? ಸಾವಿರಾರು ಕೋಟಿ ಅಸ್ತಿಯನ್ನು ಸಂಪಾದಿಸಲು ಹೇಗೆ ಸಾಧ್ಯವಾಯಿತು? ಇದೆಲ್ಲ ಸಾಧ್ಯವಾದದ್ದು ಹಣವೆಂಬ ಮಾಯಾಮೃಗವನ್ನು ಸಾಫ್ಟ್‌ವೇರ್ ಎಂಬ ಮಾಯಾವಿದ್ಯೆಯಿಂದ ಕೈವಶ ಮಾಡಿಕೊಂಡ ಕಾರಣಕ್ಕಾಗಿ ಅಲ್ಲವೇ? ಬಂಡವಾಳಶಾಹಿ ಆರ್ಥಿಕತೆ, ಚಿಂತನೆ, ಮೌಲ್ಯಗಳನ್ನು ಒಪ್ಪಿ ಅವರು ನಿಷ್ಠೆಯಿಂದ ದುಡಿದಿರುವುದನ್ನು ಕಡೆಗಣಿಸಲಾಗದು. ಅವರು ಹೆಚ್ಚೆಂದರೆ "ಕೆಲಸ ಮಾಡಿ ಕೋಟ್ಯಾಧೀಶರಾಗಿ" ಎಂದಾದರೂ ಹೇಳಬಹುದಿತ್ತು. ದುಡಿಯುವವರ್ಗ ಮತ್ತು ಮಧ್ಯಮ ವರ್ಗಗಳು ಬಂಡವಾಳ ಶಾಹಿ ವರ್ಗಗಳಾಗಲು ಚಿಂತಿಸಿದರೆ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾದರೆ ತನ್ನ ಹಿತವನ್ನು ಕಾಪಾಡುವುದು ಅಸಾಧ್ಯವೆಂಬ ಬಂಡವಾಳವಾದದ ಎಚ್ಚರ ಆತಂಕಗಳು ಅವರ ಮಾತಿನಲ್ಲಿವೆ.

ಉದ್ದಿಮೆಗಳ ಅಭಿವೃದ್ಧಿಗೆ ಅನುಕೂಲವಾಗುವುದರಿಂದ ಹಲವಾರು ಭಾಷೆಗಳು ಗೊತ್ತಿದ್ದರೂ ತಾವು ಹೃದಯದಲ್ಲಿ ಕನ್ನಡಿಗ ಎಂದು ನಾರಾಯಣ ಮೂರ್ತಿಯವರು ಹೇಳಿಕೊಂಡಿದ್ದಾರೆ. ಅವರಿಗೆ ಹಲವಾರು ಭಾಷೆಗಳು ಗೊತ್ತಿರುವುದು ಉದ್ದಿಮೆಗಳ ಲಾಭಕ್ಕಾಗಿ ಮಾತ್ರ. ಆ ಭಾಷೆಗಳ ಬಗೆಗಿನ ಇನ್ನಾವುದೇ ಬಗೆಯ ಪ್ರೀತಿಗಾಗಿ ಅಲ್ಲ. ತಮ್ಮ ಲಾಭಕ್ಕಾಗಿ ಅವರು ಮತ್ತು ಅವರಂಥವರು ಜಗತ್ತಿನ ಎಷ್ಟು ಭಾಷೆಗಳನ್ನು ಬೇಕಾದರೂ ಕಲಿಯಬಲ್ಲರು. ಅದೇ ಲಾಭಕ್ಕಾಗಿ ಹೃದಯದ ಭಾಷೆಯನ್ನು ನಿರ್ದಯವಾಗಿ ಕಿತ್ತು ಹಾಕಬಲ್ಲರು. ಹಣವೇ ಅವರ ಹೃದಯ. ಅವರ ಉದ್ದಿಮೆಗಳಿಗೆ ಇಂಗ್ಲಿಷ್ ಬಲ್ಲ ದುಡಿಯುವ ವರ್ಗದ ಅಗತ್ಯವಿರುವುದರಿಂದ ಕರ್ನಾಟಕದಲ್ಲಿ ಹತ್ತನೆಯ ತರಗತಿಯವರೆಗೂ ಇಂಗ್ಲಿಷ್ ಮಾಧ್ಯಮದಲ್ಲಿಯೇ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸುವ ಮನುಷ್ಯನ ಹೃದಯದಲ್ಲಿ ಕನ್ನಡ ಹೇಗೆ ಉಳಿದೀತು? ಕರ್ನಾಟಕದಿಂದ ಕನ್ನಡವನ್ನೇ ಹೊಡದೋಡಿಸುವ ಘಾತುಕ ಭಾಷಾನೀತಿಯನ್ನು ಅವರು ಬೆಂಬಲಿಸುತ್ತಿದ್ದರೇ? ಕಾರ್ಪೊರೇಟ್ ಧಣಿಗಳ ಹೃದಯದ ಏಕೈಕ ಭಾಷೆ ಎಂದರೆ ಬಂಡವಾಳ, ಉದ್ದಿಮೆ ಹಾಗೂ ಲಾಭಗಳ ಲೆಕ್ಕಾಚಾರದ ಭಾಷೆ. ಮುಂದೊಂದು ದಿನ ಇಂಗ್ಲಿಷ್‌ನಿಂದ ಲಾಭವಾಗದ ಸಂದರ್ಭ ಎದುರಾದರೆ ಅವರು ಇಂಗ್ಲಿಷನ್ನು ಇಷ್ಟೇ ಕೃತಘ್ನತೆಯಿಂದ ಕಿತ್ತೆಸೆಯಬಲ್ಲರು. ಕನ್ನಡ ಅವರ ಹೃದಯದ ಭಾಷೆಯಾಗಿದ್ದರೆ ಅದಕ್ಕೊಂದು ತಂತ್ರಾಂಶವನ್ನು ರೂಪಿಸದೇ ಇರುತ್ತಿದ್ದರೇ?

ನಾರಾಯಣ ಮೂರ್ತಿಯವರಿಗೆ ತಮ್ಮ ಸಾಧನೆಯ ಬಗ್ಗೆ ಹೆಮ್ಮೆ ಪಡುವಾಗ ನಾಡಿನ ಕಡುಬಡವರು ನೆನಪಾಗುತ್ತಾರಂತೆ. ಶೌಚಾಲಯ, ಕುಡಿಯುವ ನೀರು, ಆರೋಗ್ಯ ಕೇಂದ್ರ, ವಿದ್ಯುತ್ ಪೂರೈಕೆಗಳಿಲ್ಲದ ಹಳ್ಳಿಯ ಅಸಹಾಯಕ ಜನರ ಜೀವನ ಮಟ್ಟವನ್ನು ಎತ್ತರಿಸುವುದೇ ನಾಡಿನ ಪ್ರಗತಿಯಂತೆ. ಹೀಗಾಗಿ ಇನ್‌ಫೋಸಿಸ್ ಫೌಂಡೇಶನ್ನಿನಿಂದ ನೆರವು ನೀಡುತ್ತಾರಂತೆ. ಅದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ. ಬಡತನವೆಂಬ ರಾವಣನ ಹೊಟ್ಟೆಯನ್ನು ದೊಡ್ಡದುಮಾಡಿ ಅದಕ್ಕೆ ಅಗತ್ಯವಿರುವ ಕೂಳು ನೀರು ಸಿಗದಂತೆ ನೋಡಿ ಕರುಣೆಯಿಂದ ಅರೆಕಾಸಿನ ಮಜ್ಜಿಗೆಯನ್ನು ಸುರಿಯುವ ಕ್ರೌರ್ಯವನ್ನು ಮರೆಯುತ್ತಿರುವುದು ನಾರಾಯಣ ಮೂರ್ತಿಯವರು ಪ್ರತಿನಿಧಿಸುವ ಬಂಡವಾಳವಾದ. ಅವರ ಸಾಧನೆ ಹಾಗೂ ನಾಡಿನ ಬಡತನಗಳ ನಡುವೆ ಆಂತರಿಕ ಸಂಬಂಧ ಇರುವುದು ಅವರಿಗೆ ತಿಳಿಯದ್ದೇನಲ್ಲ.

ಸ್ವಾತಂತ್ರ್ಯೋತ್ತರ ಭಾರತದ ಸಂವಿಧಾನ ತನ್ನೆಲ್ಲ ಮಿತಿಗಳ ನಡುವೆಯೂ ಸಮಾಜವಾದಿ ಆಶಯಗಳನ್ನು ಒಳಗೊಂಡಿತ್ತು. ಪರಿಮಿತ ಭೂಹಿಡುವಳಿ ಹಾಗೂ ಖಾಸಗಿ ಆಸ್ತಿಯನ್ನು ಪರಿಕಲ್ಪನೆಗಳ ಮೂಲಕ ಶ್ರೀಮಂತ ಹಾಗೂ ಬಡವರ ನಡುವಿನ ಅಂತರವನ್ನು ತೊಡೆದುಹಾಕುವ ಆಶಯವನ್ನು ಒಂದು ಆದರ್ಶವಾಗಿಯಾದರೂ ಒಳಗೊಂಡಿತ್ತು. ಮೀಸಲಾತಿಯ ಮೂಲಕ ದುರ್ಬಲ ವರ್ಗಗಳನ್ನು ಸಬಲೀಕರಿಸುವ ಪ್ರಕ್ರಿಯೆಯನ್ನು ಆರಂಭಿಸಿತ್ತು. ಆದರೆ 80ರ ದಶಕದಲ್ಲಿಯೇ ಆರಂಭವಾಗಿ 90ರ ದಶಕದಲ್ಲಿ ಒಂದು ಮೂರ್ತರೂಪತಾಳಿದ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣಗಳು ಭಾರತದ ಸಂವಿಧಾನ ಆಶಯಗಳನ್ನೇ ಬುಡಮೇಲು ಮಾಡಿದವು.

ನವಬಂಡವಾಳವಾದವು ಮೀಸಲಾತಿಯನ್ನು ವಿರೋಧಿಸುತ್ತಾ ಆರ್ಥಿಕ ಸಮಾನತೆಯ ಪರವಾದ ಯೋಜನೆಗಳನ್ನು ನಿಲ್ಲಿಸುವಲ್ಲಿ, ಭೂಕಾನೂನುಗಳನ್ನು ಬದಲಾಯಿಸುವಲ್ಲಿ, ದುರ್ಬಲ ವರ್ಗಗಳಿಗಾಗಿ ರೂಪಿಸಿದ ಸಮಾಜಕಲ್ಯಾಣ ಯೋಜನೆಗಳನ್ನು ತಡೆಹಿಡಿಯುವಲ್ಲಿ ಪ್ರಭುತ್ವಗಳ ಮೇಲೆ ಒತ್ತಡ ಹೇರಿತು. ಹಳ್ಳಿಯ ಜನರಿಗೆ ತಲುಪಬೇಕಾದ ಕುಡಿಯುವ ನೀರು, ವಿದ್ಯುತ್, ಸೌಕರ್ಯಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಸರಕಾರಗಳಿಂದ ಪುಕ್ಕಟೆಯಾಗಿ ಪಡೆದು ಅವರ ದುಸ್ಥಿತಿಯನ್ನು ಹೆಚ್ಚಿಸಲು ಕಾರಣವಾಯಿತು. ನಾರಾಯಣ ಮೂರ್ತಿಯವರು ವ್ಯಕ್ತಪಡಿಸಿರುವ ಬಡವರ ಬಗೆಗಿನ ಕಳಕಳಿ ಹಾಗೂ ಸಮಾಜವಾದಿ ಅರ್ಥವ್ಯವಸ್ಥೆಯ ಬಗೆಗಿನ ಪ್ರೀತಿ ಕೇವಲ ಕಪಟ ನಾಟಕ. ಈ ನಾಟಕವನ್ನು ಅಂತಃಕರಣದ ನುಡಿಗಳೆಂಬಂತೆ ವೈಭವೀಕರಿಸಿದ ಮಾಧ್ಯಮಗಳು ಸಮ್ಮೇಳನದ ನಂತರದ ಏಕಾಂತದಲ್ಲಿ ವಸ್ತುನಿಷ್ಠವಾಗಿ ವಿಮರ್ಶೆಗೊಳಪಡಿಸುವ ಅಗತ್ಯವಿದೆ. ಇಲ್ಲವಾದರೆ ಆ ಕಪಟನಾಟಕದಲ್ಲಿ ತಾವೂ ಪಾತ್ರಧಾರಿಗಳೆಂದು ಸಾಬೀತುಪಡಿಸಿದಂತಾಗುತ್ತದೆ.

• ಎಂ. ಡಿ. ಒಕ್ಕುಂದ

ಮಾತು ತಲೆಯೆತ್ತದ ಬಗೆ

ಬಿ.ಎಂ.ಶ್ರೀ ಅವರು 1911ರಲ್ಲಿ ಮಾಡಿದ ಕ ಮಹತ್ವದ 'ಮಾತು ತಲೆಯೆತ್ತುವ ಬಗೆ' ಕ್ಕೆ ಶತಮಾನ ತುಂಬಿದೆ. ಇದೇ ಹೊತ್ತಲ್ಲಿ ವಿಯಲ್ಲಿ ವಿಶ್ವಕನ್ನಡ ಸಮ್ಮೇಳನ ನಡೆಯಿತು. ಳನದಲ್ಲಿ ತಲೆಯೆತ್ತಬೇಕಾಗಿದ್ದ ಮಾತುಗಳು ತ್ತದಾದವು. ಬಿ.ಎಂ.ಶ್ರೀಯವರು ಕನ್ನಡವೆಂದರೆ ರ ಸಿತ್ವದ ಬದುಕು ಮತ್ತು ಅದರ ಜತೆಗಿನ ಎರಡನ್ನು ಮೇಲೆತ್ತುವ ದೂರದೃಷ್ಟಿಯಲ್ಲಿ ಾಡಿದ್ದರು. ಆದರೆ ಇಂದು ಮಾತಿನ ಅಭಿಮಾನದ ಉಕ್ಕಿಸಿ, ಅದರಲ್ಲಿ ಕೊಚ್ಚಿ ಹೋಗುತ್ತಿರುವ ನ್ನು ನೋಡಿಯೂ ನೋಡದಂತಹ ಸಾಹಿತಿ ಸಜ್ಜನರ ಚಣೆಯ ಮಾತುಗಳನ್ನು ಈ ಸಮ್ಮೇಳನದಲ್ಲಿ ಕಾಯಿತು.

ಜಕ್ಕೂ ಈ ಸಮ್ಮೇಳನದಲ್ಲಿ ತಲೆಯೆತ್ತಬೇಕಾಗಿದ್ದ ಗಳು ಎಲ್ಲಿ ಹೋದವು? ಕನ್ನಡ ಸಾರಸ್ವತ ಲೋಕದ ರುಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಗಳಿಗೆ ಸದ್ಯದ ಕರ್ನಾಟಕದ ಸಾಮಾನ್ಯ ಸ್ಥೊಪ್ಪ ಎತ್ತಬೇಕಾದ ಪ್ರಶ್ನೆಗಳನ್ನು ಎತ್ತಲು ಸಾಧ್ಯವಾಗಲಿಲ್ಲ? ಇವರಿಗೆ ಕೊಡಬೇಕಾದ ಯಾದರೂ ಏನು? ಇದು ಏನನ್ನು ಸೂಚಿಸುತ್ತದೆ? ಗಳು ತಲೆಯೆತ್ತದ ಬಗೆಯುಳ್ಳದ್ದೆ? ಇಂತಹ ಪ್ರಶ್ನೆಗಳು ನನ್ನಂಥವರನ್ನು ಕಾಡಿದವು. ಲಕ್ಷೋಪಲಕ್ಷ ಜನ ಕನ್ನಡಾಭಿಮಾನದಿಂದ ಬೆಳಗಾವಿಗೆ ಬಂದಿದ್ದರು. ಸಹಜವಾಗಿ ಅದನ್ನು ಆಡಳಿತ ಪಕ್ಷದ ಜನಪ್ರಿಯತೆಯ ಜತೆ ತಳಕು ಹಾಕಿದರು.

ಇಂತಹ ಜನಸಾಗರದ ಎದುರು ಸದ್ಯದ ಕರ್ನಾಟಕದ ಕರಾಳ ಮುಖಗಳನ್ನು ತೆರೆದಿಡಬೇಕಿತ್ತು. ಆಗ ಕನ್ನಡಾಭಿಮಾನದ ಮಾತುಗಳಿಗೆ ಬಂದ ಪ್ರತಿಕ್ರಿಯೆಗಳಿಗಿಂತಲೂ ನೂರುಪಟ್ಟು ಹೆಚ್ಚಿನ ಪ್ರತಿಕ್ರಿಯೆ ಈ ಮಾತುಗಳಿಗೆ ಲಭಿಸುತ್ತಿತ್ತು. ಕಾರಣ ಯಾವ ಸಂಕಷ್ಟಗಳ ಬಗ್ಗೆ ಮಾತನಾಡಬೇಕಿತ್ತೋ, ಅದೇ ಸಂಕಷ್ಟದ ಸಂಕೋಲೆಯಲ್ಲಿ ಸಿಲುಕಿದ ಜನರೇ ಇಲ್ಲಿ ನೆರೆದಿದ್ದರು. ಭಾಷಾಭಿಮಾನವನ್ನು ಬಳಸಿ ಸರಕಾರ ತನ್ನ ಭ್ರಷ್ಟಾಚಾರ, ಕೊಳಕುತನವನ್ನು ಮುಚ್ಚಿಹಾಕಲು ಪ್ರಯತ್ನಿಸಿದ್ದ ಅದೇ ವೇದಿಕೆಯಲ್ಲಿ ಸದ್ಯದ ಸರಕಾರದ



ಕೊಳಕುತನಗಳನ್ನು ತೆರೆದಿಡುವ ಅವಕಾಶ ಕನ್ನಡದ ಹಿರಿಯ ಸಾಹಿತಿ ಸಜ್ಜನರಿಗೆ ಒದಗಿತ್ತು. ಆದರೆ ಅದನ್ನು ಬಳಸಿಕೊಳ್ಳಲಿಲ್ಲ. ಬದಲಾಗಿ ಭ್ರಷ್ಟಾತಿಭ್ರಷ್ಟ ಸರಕಾರವನ್ನು ಮೈದುಂಬಿ ಹೊಗಳಿದರು.


ಮೊದಲನೆಯದಾಗಿ ತಲೆಯೆತ್ತುವ ಮಾತುಗಳನ್ನು ಆಡದ ಸಾಹಿತಿಗಳನ್ನೇ ಸರಕಾರ ಆಹ್ವಾನಿಸಿದಂತಿತ್ತು. ಕನ್ನಡ ಮಾತು ತಲೆಯೆತ್ತುವ ಬದಲು ಇಂಗ್ಲಿಷ್ ಮಾತು ತಲೆಯೆತ್ತಿ ಕನ್ನಡ ನಾಡನ್ನಾಳಬೇಕೆನ್ನುವ ಮನೋಭಾವದ ನಾರಾಯಣ ಮೂರ್ತಿಗಳು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಇನ್ನು ಈ ವಿಷಯವಾಗಿ ಸರಕಾರ ಬಂಡವಾಳಶಾಹಿಗಳ ಪರ ವಾಲುತ್ತಿರುವ ಬಗ್ಗೆ ಪ್ರೊ.ಬರಗೂರರು ಎತ್ತಿದ ತಾತ್ವಿಕ ಪ್ರಶ್ನೆಯನ್ನು ವೈಯಕ್ತಿಕ ನೆಲೆಗೆ ಒಯ್ದು ಅವರ ಅಭಿಪ್ರಾಯವನ್ನು ದಮನಿಸುವ ಹುನ್ನಾರಗಳು ನಡೆದವು. 'ನಾರಾಯಣ ಮೂರ್ತಿಗಳು ಉದ್ಘಾಟಿಸುವುದರಿಂದ ಆಗುವ ನಷ್ಟವೇನು?' ಎನ್ನುವ ಕೆಲ ಹಿರಿಯ ಸಾಹಿತಿಗಳ ಮಾತುಗಳು ತಲೆ ಎತ್ತಿ ಮೆರೆದಾಡಿದವು. ಸಮ್ಮೇಳನದಲ್ಲಿ ಅನಂತಮೂರ್ತಿಗಳ ಮಾತು ತಲೆಯೆತ್ತಬಹುದೆಂದು ಕಾಯ್ದದ್ದೂ ನಿರಾಸೆ ಹುಟ್ಟಿಸಿತು. ಸಿದಿದೇಳದ ಪಾಪು, ನಿತ್ಯೋತ್ಸವ ಖುಷಿಯಲ್ಲಿದ್ದ ನಿಸಾರ್ ಅಹಮದ್, ಹೇಳತೇನ ಕೇಳಾ ಎನ್ನದ ಕಂಬಾರರು, ಸರಕಾರವನ್ನು ಎದೆದುಂಬಿ ಹೊಗಳಿದ ಜೆ.ಎಸ್.ಎಸ್, ನಿಘಂಟಿನಲ್ಲಿ 'ಭ್ರಷ್ಟಾಚಾರ' ಎಂಬ ಪದ ನೆನಪಿಸಿಕೊಳ್ಳದ ಜೀವಿ, ಕರ್ನಾಟಕ ಸರಕಾರಕ್ಕೆ ರತ್ನ ಕಿರೀಟವಿಟ್ಟ ದೇಜಗೌ, ಇಕ್ರಲಾ ಎನ್ನದ ಸಿದ್ದಲಿಂಗಯ್ಯ, ಹರ್ಷಚಿತ್ತರಾಗಿ ಸರಕಾರವನ್ನು ಮೊಗೆಮೊಗೆದು ಹೊಗಳಿ ಜೀವನ ಪಾವನವಾಯಿತು ಎನ್ನುವ ಹಂಪ ನಾಗರಾಜಯ್ಯ ಮುಂತಾದವರ ಮಾತುಗಳನ್ನು ಕೇಳುತ್ತಿದ್ದರೆ, ಇನ್ನು ಕರ್ನಾಟಕದಲ್ಲಿ ಮಾತು ತಲೆಯೆತ್ತದ ಬಗೆ ಎನ್ನುವ ಮತ್ತೊಂದು ಚಾರಿತ್ರಿಕ ಮಹತ್ವದ ಭಾಷಣವನ್ನು ಮಾಡಲು ಇದು ಸಕಾಲ ಅನ್ನಿಸುತ್ತಿದೆ.

ಮಾತು ತಲೆಯೆತ್ತುವ ಬಗೆ ಹೇಗೆ ಎಂದು ಚಿಂತಿಸಿದ ಕಾಲಘಟ್ಟದಿಂದ, ಮಾತು ತಲೆಯೆತ್ತದ ಬಗೆ ಹೇಗೆ ಎನ್ನುವ ಕಾಲಘಟ್ಟದವರೆಗೂ ಕನ್ನಡನಾಡು ಕ್ರಮಿಸಿದೆ ಅಥವಾ ತಲೆಯೆತ್ತುವ ಮಾತುಗಳಿಗೆ ಶಕ್ತಿಯನ್ನು ಕುಂದಿಸುವ ಔಷಧವೂ, ಆಮಿಷವೂ ಇದೇ ಕಾಲದಲ್ಲಿ ತಯಾರಾಗುತ್ತಿದೆ. ಕರ್ನಾಟಕ ಜನಶಕ್ತಿ ಸಂಘಟನೆಯ ಗೆಳೆಯರು ಬೆಂಗಳೂರಿನಲ್ಲಿ ಸ್ವಾಭಿಮಾನಿ ಕನ್ನಡಿಗರ ಸಮ್ಮೇಳನವನ್ನು ಮಾಡಿದರು. ಅಲ್ಲಿ ಸದ್ಯ ತಲೆಯೆತ್ತಬೇಕಾದ ಮಾತುಗಳು ಸಿಡಿದವು. ಅವುಗಳು ಅಷ್ಟಾಗಿ ಮಾಧ್ಯಮಗಳ ಕಿವಿಗೆ ಕೇಳಿಸಿದಂತೆ ಕಾಣಲಿಲ್ಲ. ಅಥವಾ ತಲೆಯೆತ್ತುವ ಮಾತುಗಳನ್ನು ಕೇಳಿಸಿಕೊಳ್ಳದ ಕಿವುಡುತನ ಈ ರಾಜ್ಯವನ್ನು ಆವರಿಸಿದಂತಿದೆ. ಈಗ ನಮ್ಮ ನಮ್ಮ ಕಿವಿಗಳನ್ನೂ ಕೂಡ ಪರೀಕ್ಷೆಗೆ ಒಡ್ಡಬೇಕಿದೆ.

• ಡಾ. ಅರುಣ್ ಜೋಳದಕೂಡ್ಲಿಗಿ

ಮೈಸೂರು: ಪಾಲಿಕೆ ಆಸ್ತಿಯನ್ನು ಕಾರ್ಪೊರೇಟರ್ ಚಲುವೇಗೌಡನಿಗೆ ಬರೆದುಕೊಟ್ಟವರು ಯಾರು?


ಮೈಸೂರು ಮಹಾನಗರಪಾಲಿಕೆ ಈ ಕಾಲಕ್ಕೆ ಉದ್ಧಾರವಾಗಲ್ಲ ಅನ್ನಿಸುತ್ತಿದೆ. ಪಾಲಿಕೆಯ ಆಸ್ತಿಯನ್ನು ರಕ್ಷಿಸಬೇಕಾಗಿದ್ದ ಪಾಲಿಕೆಯ ಅಧಿಕಾರಿಗಳು ಮತ್ತು ಕಾರ್ಪೊರೇಟರ್‌ಗಳು ಭೂಗಳ್ಳರ ಚೇಲಾಗಳಾಗಿದ್ದಾರೆ. ಇಲ್ಲವೇ ತಾವೇ ಪಾಲಿಕೆಯ ಆಸ್ತಿಯನ್ನು ಕಬಳಿಸುವ ಭೂಗಳ್ಳರಾಗಿದ್ದಾರೆ. ತಮ್ಮ ಮೂಗಿನಡಿಯೇ ಇಂತಹದ್ದೊಂದು ಭೂಕಬಳಿಕೆ ನಡೆಯುತ್ತಿದ್ದರೂ, ಇದರಲ್ಲಿ ಪಾಲಿಕೆಯ ಸಹಾಯಕ ಆಯುಕ್ತನಾಗಿದ್ದ ಬಿ.ಎಂ.ಹಿರಣ್ಯಕುಮಾರ್ ಭಾಗಿಯಾಗಿ ಕೆ.ಟಿ.ಚಲುವೇಗೌಡನೆಂಬ ಕಾರ್ಪೊರೇಟರ್‌ನ ಭೂಗಳ್ಳತನಕ್ಕೆ ಸಹಾಯ ಮಾಡಿದ್ದರೂ ಸಹ ಆಯುಕ್ತ ರಾಯ್ಕರ್ ಮಾತ್ರ ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳದೆ ಮುಗುಮ್ಮಾಗಿರುವುದು ಯಾಕೆ?



ಹೇಗಿದ್ದ ಚಲುವಾ ಹೇಗಾದ..!


ಮೈಸೂರಿನ ನಗರ ಜನತಾದಳದ ಮಾಜಿ ಅಧ್ಯಕ್ಷ ಹಾಗೂ ಜೆಡಿಎಸ್‌ನಿಂದ 27ನೇ ವಾರ್ಡ್‌ನ ಹಾಲಿ ಕಾರ್ಪೊರೇಟರ್ ಕೆ.ಟಿ.ಚಲುವೇಗೌಡನೇ ಮೈಸೂರು ಮಹಾನಗರ ಪಾಲಿಕೆಯ ಆಸ್ತಿಯ ಮೂಲೆ ಮುಡುಕನ್ನೂ ಬಿಡದೆ ಕಬಳಿಸಲು ನಿಂತಿರುವ ಭೂಗಳ್ಳ. ಈತನ ಹಿನ್ನೆಲೆಯನ್ನು ಕೆದಕುತ್ತಾ ಹೋದರೆ ಈತನ ಭೂಕಳ್ಳನ ವ್ಯಕ್ತಿತ್ವ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

20 ವರ್ಷಗಳ ಹಿಂದೆ ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿನ ಚಾಮುಂಡಿ ಕಾಫಿ ಕ್ಯೂರಿಂಗ್‌ನಲ್ಲಿ ಚಲುವೇಗೌಡ ಸಾಮಾನ್ಯ ನೌಕರನಾಗಿ ಕೆಲಸ ಮಾಡುತ್ತಿದ್ದ. ಅಲ್ಲಿ ಈತನ ಕೈಚಳಕವನ್ನು ಕಂಡ ಮಾಲೀಕ ಒದ್ದು ಹೊರಹಾಕಿದ. ಅಂತಹ ಚಲುವ ಈಗ ಕೋಟಿಕುಳ! ಕೂಲಿ ಕಾರ್ಮಿಕನೊಬ್ಬ ಕೋಟಿಕುಳ ಆಗಬಾರದು ಎಂದೇನು ನಿಯಮ ಇಲ್ಲ, ಆದರೆ ಈತನ ಸಂಪಾದನೆ, ಈತ ಅನುಭವಿಸುತ್ತಿರುವ ಶ್ರೀಮಂತಿಕೆ ಎಲವೂ ಅಕ್ರಮ ಭೂಗಳ್ಳತನ, ನಕಲಿ ದಾಖಲೆಗಳ ಸೃಷ್ಟಿ, ಸರ್ಕಾರಿ ಭೂಮಿಗಳ ಒತ್ತುವರಿ, ರಿಯಲ್ ಎಸ್ಟೇಟ್ ದಂಧೆಗಳ ಫಲ.



ರಾಯ್ಕರ್

ಒಂದು ಕಾಲದ ಕಾರ್ಮಿಕ ಚಲುವ ಈಗ ಹೆಬ್ಬಾಳದಲ್ಲಿರುವ ಕಾವೇರಿ ಬಾರ್‌ನ ಮಾಲೀಕ. ಹೆಬ್ಬಾಳದಲ್ಲಿರುವ ಚಲುವನ ಭವ್ಯ ಬಂಗಲೆಯ ರೇಟು ಕೋಟಿ ಮುಟ್ಟುತ್ತದೆ. ಇದೇ ಹೆಬ್ಬಾಳದಲ್ಲಿ ಎಸ್.ಬಿ.ಎಂ. ಮುಖ್ಯ ಶಾಖೆಗೆ ಬಾಡಿಗೆಗೆ ಬಿಟ್ಟಿರುವ ಮೂರು ಅಂತಸ್ತಿನ ಬೃಹತ್ ವಾಣಿಜ್ಯ ಸಂಕೀರ್ಣವಿದೆ. ಇದೂ ಸಹ ತಿಂಗಳಿಗೆ ಹತ್ತಿರತ್ತಿರ ಲಕ್ಷ ರೂ ಬಾಡಿಗೆ ತರುತ್ತದೆ. ಇದೂ ಸಹ ಅಕ್ರಮ ಎಂಬ ರೂಮರುಗಳಿವೆ. ಇವೆಲ್ಲಾ ಆಸ್ತಿಗಳನ್ನು ತನ್ನ ಬಾಮೈದ ಹಾಗೂ ಕುಮಾರಸ್ವಾಮಿ ಅಭಿಮಾನಿಗಳ ಸಂಘದ ನಗರ ದಂಡನಾಯಕ ಶ್ರೀನಿವಾಸ್ ಹೆಸರಿನಲ್ಲಿ ಮಾಡಿಟ್ಟಿದ್ದಾನೆ ಚೆಲುವ.



ವಿವಾದಗಳಿರುವ ಸೈಟ್‌ಗಳನ್ನು ಖಾಜೀ ನ್ಯಾಯ ಮಾಡಿಸಿ ತನ್ನ ಪಾಲಾಗಿ ಸೈಟುಗಳನ್ನೇ ತೆಗೆದುಕೊಳ್ಳುತ್ತಾನೆ. ಹೆಬ್ಬಾಳ ಮತ್ತು ಬೆಳಗೊಳ ಸುತ್ತಮುತ್ತ ಹತ್ತಾರು ರೈತರಿಗೆ ಚಿಲ್ಲರೆ ಹಣ ನೀಡಿ ಎಕರೆಗಟ್ಟಲೇ ಆಸ್ತಿಗಳಿಗೆ ಜಿಪಿಎ ಮಾಡಿಸಿಕೊಂಡಿದ್ದಾನೆ. ಸದ್ಯದಲ್ಲೇ ರೈತರಿಗೂ ಕೈ ಎತ್ತಲು ರೆಡಿಯಾಗಿದ್ದಾನೆ. ಬೆಳಗೊಳ ಬಳಿ ಮುಡಾದ 4 ಎಕರೆ ಬೆಲೆಬಾಳುವ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿದ್ದಾನೆ ಎಂಬ ಸುದ್ದಿ ಪಾಲಿಕೆಯ ಕಾರ್ಪೊರೇಟರ್‌ಗಳ ಬಾಯಲ್ಲಿ ಹರಿದಾಡತೊಡಗಿದೆ. ಹೆಬ್ಬಾಳದಲ್ಲಿ ಸರ್ಕಾರಿ ಭೂಮಿಯನ್ನು ತನ್ನಪ್ಪನ ಮನೆ ಆಸ್ತಿ ಎಂಬಂತೆ ತನ್ನ ಹಿಂದೆ ಓಡಾಡುವ ಚೇಲಾಗಳಿಗೆ ಬಳುವಳಿಯಾಗಿ ನೀಡಿ ತನ್ನ ಪಾಲನ್ನು ಪಡೆಯುತ್ತಿದ್ದಾನೆ. ಇದೇ ಹೆಬ್ಬಾಳದ ಆಚಾರರ ದೈವಮಾತೆ ಕಾಳಿಕಾಂಬ ದೇವಸ್ಥಾನಕ್ಕೆ ಉಚಿತ ಎನ್ನುತ್ತಲೇ ದೊಡ್ಡ ಸೈಟನ್ನು ಕೊಡಿಸಿ, ಲಕ್ಷಗಳ ಲೆಕ್ಕದಲ್ಲಿ ಹಣ ಪಡೆದಿದ್ದಾನೆಂಬ ಪುಕಾರುಗಳಿವೆ.

ಮೈಸೂರಿನ ಪ್ರಖ್ಯಾತ ಅಪಾರ್ಟ್‌ಮೆಂಟುಗಳಲ್ಲಿ ಒಂದಾದ ವನಜಾ ಅಪಾರ್ಟ್‌ಮೆಂಟ್‌ನ ಪಕ್ಕ ಮೂಡಾಗೆ ಸೇರಿದ ಜಾಗವನ್ನು ಕಬಳಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಲು ತಯಾರಾಗುತ್ತಿದ್ದಾನೆ. ಇವೆಲ್ಲಕ್ಕೂ ಗುತ್ತಿಗೆದಾರರಿಂದ ಮಾಡುತ್ತಿರುವ ವಸೂಲಿಯಿಂದ ಹಣ ಫೀಡ್ ಆಗುತ್ತಿದೆ. ಚಲುವನ ಇಬ್ಬರು ಹೆಂಡಿರ ಮುಂಡ ಮಕ್ಕಳಾದ ರಾಮಕೃಷ್ಣ ಅನಿ, ಮಹೇಶ್ ಎಂಬುವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಕ್ಷರಶಃ ಗೂಂಡಾಗಿರಿಗೆ ಇಳಿದಿದ್ದಾರೆ. ಇವರುಗಳಿಗೂ ಅನರ್ಹ ಬಿಜೆಪಿ ಶಾಸಕ ಎಚ್.ಎಸ್. ಶಂಕರಲಿಂಗೇಗೌಡರ ಸುಪುತ್ರ ಕಾರ್ಪೊರೇಟರ್ ನಂದೀಶ್ ಪ್ರೀತಂಗೂ ಬೀದಿ ಗಲಾಟೆಗಳಾಗಿವೆ. ಇಷ್ಟೇ ಅಲ್ಲದೆ ಮಂತ್ರಿ ಎತ್ತುವಳಿ ಸಂದರ್ಭದಲ್ಲಿ ಮೇಟಗಳ್ಳಿ ಪೊಲೀಸರಿಗೆ ಸಿಕ್ಕು ಬಿದ್ದು ಪೊಲೀಸರ ಮೇಲೆಯೇ ಗಲಾಟೆ ಮಾಡಿದ್ದರಿಂದ ಪಿಎಸ್‌ಐ ಮಹದೇವಪ್ಪ ಈ ಮುಂಡ ಮಕ್ಕಳನ್ನು ರೌಡಿ ಲಿಸ್ಟಿಗೆ ಸೇರಿಸಲು ರೆಡಿಯಾಗಿದ್ದಾರೆ.

ಪಾಲಿಕೆಯ ಆಸ್ತಿಗೂ ಕನ್ನ!

ಚಲುವೇಗೌಡನ ಮತ್ತೊಂದು ಮಹಾನ್ ಕೆಲಸವೆಂದರೆ ಕರೀಂಲಾಲ್ ತೆಲಗಿ ಛಾಪಾ ಕಾಗದವನ್ನು ಉಪಯೋಗಿಸಿಕೊಂಡು ಅಕ್ರಮ ಭೂಮಿಯನ್ನು ತನ್ನದಾಗಿಸಿಕೊಳ್ಳಲು ಬಳಸಿಕೊಂಡ. ಇದಲ್ಲದೇ ನಕಲಿ ಛಾಪಾ ಕಾಗದವನ್ನು ಲೆಕ್ಕವಿಲ್ಲದಷ್ಟು ತಂದು ಮಾರಾಟ ಮಾಡಿದ್ದರಿಂದ ಚಲುವನಿಂದ ಬಹಳಷ್ಟು ಜನ ಮಕ್ಮಲ್ ಟೋಪಿ ಹಾಕಿಸಿಕೊಂಡರು!

ಇದೀಗ ಹೊರಬಂದಿರುವ ಮತ್ತೊಂದು ಹಗರಣ ಹೆಬ್ಬಾಳದ ಪಾಲಿಕೆಯ ಆಸ್ತಿಯದ್ದು. ಇಂದು ಬಂಗಾರದಂತಹ ಬೆಲೆ ಹೊಂದಿರುವ ಹೆಬ್ಬಾಳದಲ್ಲಿ ಸಾರ್ವಜನಿಕ ಉದ್ದೇಶಗಳಿಗೆ ಬಳಕೆಯಾಗಬೇಕಾಗಿದ್ದ ಪಾಲಿಕೆಯ ನಗರಾಸ್ತಿಯ ಮೇಲೆ ಈತನ ಕಣ್ಣು ಬಿದ್ದಿದೆ! ಅದನ್ನು ಸ್ವಂತ ಮಾಡಿಕೊಳ್ಳಲು ಪಾಲಿಕೆಯ ಉನ್ನತ ಅಧಿಕಾರಿಗಳನ್ನೇ ಬಳಸಿಕೊಂಡಿದ್ದಾನೆ!

ಹೆಬ್ಬಾಳ ಬಸವನಗುಡಿ ಸರ್ಕಲ್ ಬಳಿ ಕಟ್ಟಿರುವ ಬೃಹತ್ ವಾಣಿಜ್ಯ ಸಂಕೀರ್ಣಕ್ಕೂ ಸಹ ಮೈಸೂರು ಮಹಾನಗರ ಪಾಲಿಕೆಯ ಆಸ್ತಿಯನ್ನೇ ಕಬ್ಜಾ ಮಾಡಿಕೊಂಡಿದ್ದಾನೆ. ಈ ಆಸ್ತಿಯು ಭೂಮಿತಿ ಕಾಯ್ದೆಯಡಿಯಲ್ಲಿ ಹೆಚ್ಚುವರಿ ನಗರಾಸ್ತಿ ಸರ್ಕಾರ ಸ್ವಾಧೀನಪಡಿಸಿಕೊಂಡಿದ್ದದ್ದು. ಇದೇ ಹೆಬ್ಬಾಳದ ಸರ್ವೆ ನಂ.152ರ ಜಮೀನಿನಲ್ಲಿ ಸುಮಾರು 20 ಗುಂಟೆಯನ್ನು ಒತ್ತುವರಿ ಮಾಡಿರುವುದಲ್ಲದೇ, ಇದನ್ನು ಅಕ್ರಮವಾಗಿ ಸೈಟುಗಳನ್ನಾಗಿ ಲಕ್ಷಾಂತರ ರೂ.ಗಳನ್ನು ವಸೂಲಿ ಮಾಡಿ ಹಂಚಿದ್ದಾನೆ ಎಂಬ ಸುದ್ದಿ ಎಲ್ಲೆಡೆ ಹಬ್ಬಿದೆ.

ಚಲುವನ ಭೂದಾಹ ಇಲ್ಲಿಗೆ ನಿಂತಿದ್ದರೆ ಬಹುಶಃ ಯಾರಿಗೂ ಗೊತ್ತಾಗುತ್ತಿರಲಿಲ್ಲವೇನೋ. ಆದರೆ ನರಿ ಕೇಡುಗಾಲಕ್ಕೆ ಮೊಟ್ಟೆ ಇಟ್ಟಂತೆ ಚಲುವ ಬಸವೇಶ್ವರ ರಸ್ತೆ ಬದಿಯಲ್ಲೊಂದು ಬೃಹತ್ ವಾಣಿಜ್ಯ ಸಂಕೀರ್ಣವನ್ನು ಮೆಲ್ಲಗೆ ಎಬ್ಬಿಸಿದ್ದಾನೆ. ಇದನ್ನು ಅಕ್ಕಪಕ್ಕದವರು ಗಮನಿಸಿದ್ದರೂ ಈತ ಮೊದಲೇ ರಿಯಲ್ ಎಸ್ಟೇಟ್ ದಂಧೆಯವ ಮತ್ತು ಪಾಲಿಕೆಯ ಕಾರ್ಪೊರೇಟರ್ ಆಗಿದ್ದರಿಂದ ಪ್ರಭಾವ ಬೀರಿ ಖಾತೆ ಮಾಡಿಸಿಕೊಂಡು ಈ ಕಟ್ಟಡ ಕಟ್ಟಿಸುತ್ತಿದ್ದಾನೆಂದು ಭಾವಿಸಿದ್ದರು. ಆದರೆ ಅಸಲಿಗೆ ಈ ಆಸ್ತಿ ಸರ್ಕಾರದ್ದು. ಜೊತೆಗೆ ಬೃಹತ್ ಕಟ್ಟಡ ಕಟ್ಟಲು ಪಾಲಿಕೆಯಿಂದ ಲೈಸನ್ಸ್ನೇ ಪಡೆದಿಲ್ಲ, ಇದನ್ನು ಗಮನಿಸಿದ ಈತನ ತರಹದ್ದೇ ದಂಧೆ ಮಾಡುವ ವಿರೋಧಿ ಟಿ.ಎಂ.ಟಿ ಚಲುವೇಗೌಡ ಎಂಬಾತ ನಗರಪಾಲಿಕೆಗೆ ಅರ್ಜಿ ಬರೆದು ಅಕ್ರಮ ಇಲ್ಲಿ ಚಲುವೇಗೌಡನ ಅಕ್ರಮ ಕಟ್ಟಡ ತಲೆ ಎತ್ತುತ್ತಿದೆ ಎಂಬ ಮಾಹಿತಿಯನ್ನು ತಿಳಿಸಿದ್ದಾಗ್ಯೂ ಆಯುಕ್ತ ರಾಯ್ಕರ್ ಇದರತ್ತ ತಿರುಗಿಯೂ ನೋಡಿಲ್ಲ.

ಹಾಗೆಯೇ ಮತ್ತೊಬ್ಬ ಸಹಾಯ ಆಯುಕ್ತನಾಗಿದ್ದ ಹಿರಣ್ಯಕುಮಾರ್ ಸಹ ಇದರ ಬಗ್ಗೆ ಏನೂ ಮಾಡಲಿಲ್ಲ, ಆತ ಹೇಳಿಕೇಳಿ ಲೋಕೋಪಯೋಗಿ ಇಲಾಖೆಯಲ್ಲಿ ಪಳಗಿದ್ದ ಅನುಭವಿ ಭ್ರಷ್ಟಾಚಾರಿ. ಚೆಲುವನಿಂದ ಸೈಟೊಂದನ್ನು ಪಡೆದು ಸುಮ್ಮನಾದ ಎಂಬ ವದಂತಿ ಪಾಲಿಕೆ ವಲಯಗಳಲ್ಲಿ ಕೇಳಿಬರುತ್ತಿದೆ.

ಈ ವಿಚಾರ ಹಿಂದಿನ ಡಿಸಿ ಮಣಿವಣ್ಣನ್ ಅವರಿಗೆ ತಿಳಿದು ಆರಂಭದಲ್ಲಿಯೇ ಕಟ್ಟಡ ಕಾಮಗಾರಿಯನ್ನು ನಿಲ್ಲಿಸಲು ಸೂಚಿದ್ದರು. ಈ ಬಗ್ಗೆ ತನಿಖೆ ಮಾಡಲು ಎಸಿ ಭಾರತೀದೇವಿಯವರನ್ನು ನೇಮಿಸಲಾಗಿತ್ತು, ಆಗ ಚೆಲುವನಂತೆಯೇ ರಿಯಲ್ ಎಸ್ಟೇಟ್ ಮಾಫಿಯಾದ ಡಾನ್‌ನಂತಿರುವ ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್ ತನ್ನ ಪ್ರಭಾವ ಬಳಸಿ ತನ್ನ ಸಂಬಂಧಿಯಾಗಿದ್ದ ಎಸಿ ಭಾರತೀದೇವಿಯನ್ನು ಕುಸಲಾಯಿಸಿ ತನಿಖೆಯನ್ನೇ ದಿಕ್ಕು ತಪ್ಪಿಸಿದ್ದರು.

ಡಿಸಿ ಮಣಿವಣ್ಣನ್ ಟ್ರಾನ್ಸ್‌ಫರ್ ಆದ ನಂತರ ಹರ್ಷಗುಪ್ತ ಬರುವುದರೊಳಗೆ ಕಟ್ಟಡವನ್ನು ಕಟ್ಟಿಸಿಯಾಗಿ... ಇದಕ್ಕಾಗಿ ಪಾಲಿಕೆಯ ಅಧಿಕಾರಿಗಳನ್ನೂ ದುರ್ಬ... ಮಾಡಿಕೊಳ್ಳಲಾಗಿತ್ತು. ಇದನ್ನು ವಿರೋಧಿಸುತ್ತಲೇ ಬಂದ... ಟಿ.ಎಂ.ಟಿ. ಚಲುವೇಗೌಡ ಪಟ್ಟು ಬಿಡದೆ ನ್ಯಾಯಾಲಯ... ಮೆಟ್ಟಲೇರಿ ಡಿಸಿ ಹರ್ಷಗುಪ್ತ ಗಮನಕ್ಕೆ ತಂದಿದ್ದರಿಂ... ತನಿಖೆ ನಡೆಸಿ ಕಟ್ಟಡ ಹಾಗೆಯೇ ನಿಲ್ಲಿಸಲಾಗಿದೆ. ಸಹಾಯ... ಆಯುಕ್ತ ಬಿ.ಎಂ.ಹಿರಣ್ಯಕುಮಾರ್ ಕರ್ತವ್ಯಲೋಪವೆಸಗಿ... ವುದು ನಿಜ ಎಂದು ನಗರ ಯೋಜನಾ ಜಂಟಿ ನಿರ್ದೇಶ... ವರದಿ ನೀಡಿದ್ದಾರೆ. ಆದರೆ ಶಿಕ್ಷೆಗೊಳಗಾಗಬೇ... ಹಿರಣ್ಯಕುಮಾರ್ ಸದ್ದಿಲ್ಲದೆ ತನ್ನ ಮಾತೃ ಇಲಾ... ಲೋಕೋಪಯೋಗಿ ಇಲಾಖೆಗೆ ತೂರಿಕೊಂಡಿದ್ದಾನೆ.


ಇಷ್ಟೆಲ್ಲಾ ಅವಾಂತರ ಮಾಡಿಕೊಂಡಿರುವ ಕಾರ್ಪೊ... ರೇಟರ್ ಚಲುವೇಗೌಡ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗ... ಎಂಬಂತಿದ್ದಾನೆ. ಕಳೆದ ತಿಂಗಳು ಸಾ.ರಾ.ಮಹೇ... ಮುಖಾಂತರ ಡಿಸಿ ಹರ್ಷಗುಪ್ತರನ್ನು ದಿಕ್ಕುತಪ್ಪಿಸಲು ಹೋ... ಇಬ್ಬರೂ ಮುಖಕ್ಕೆ ಮಂಗಳಾರತಿ ಎತ್ತಿಸಿಕೊಂಡು ಬಂದಿದ್ದಾ...

ಮೈಸೂರಿನ ತುಂಬ ಹರಡಿಕೊಂಡಿರುವ ಅಕ್ರ... ಕಟ್ಟಡಗಳನ್ನು ಉರುಳಿಸುವ ಕೆಲಸ ಈಗ ನಡೆಯುತ್ತಿ... ಬಡಬಗ್ಗರು ಕಟ್ಟಿಕೊಂಡಿರುವ ಮನೆಗಳನ್ನೂ ಬಿಡುತ್ತಿ... ಆದರೆ ಹರ್ಷಗುಪ್ತಾ ಈ ಕಟ್ಟಡವನ್ನು ಇನ್ನೂ ಉರುಳಿಸ... ಬಿಟ್ಟಿದ್ದಾರೇಕೆ ಎಂಬ ಪ್ರಶ್ನೆಗೆ ಸ್ವತಃ ಅವರೇ ಉತ್ತ... ಬೇಕಿದೆ.

• ಲಕ್ಷ್ಮಣ್ ಚೀರನಹ...



ಮೈಸೂರು ಪಾಲಿಕೆ ಕಚೇರಿ



ನಾಗರಿಕ ಸೇವಾ ಕೇಂದ್ರ -ವಲಯ ಕಚೇರಿ....



ಚಲುವೇಗೌಡನ ಬಂಗಲೆ....


ಮೇಯರ್ ಸಂದೇಶ್‌ಸ್ವಾಮಿ ಮೌನ ಯಾಕೆ?

ಇಷ್ಟೆಲ್ಲಾ ಭೂಕಬಳಿಕೆಯು ಪಾಲಿಕೆ ಸದಸ್ಯ ಚಲುವೇಗೌಡನಿಂದ ನಡೆಯುತ್ತಿದ್ದರೂ, ಪಾಲಿಕೆಯ ಅಧಿಕಾರಿಗಳು ಶಾಮೀಲಾಗಿದ್ದರೂ ಏನೂ ನಡೆದೇ ಇಲ್ಲವೆಂಬಂತೆ ಮೇಯರ್ ಸಂದೇಶ್‌ಸ್ವಾಮಿ ಇದ್ದಾರೆ.

ವಿರೋಧ ಪಕ್ಷದವರೂ ತೆಪ್ಪಗೆ ಕೂತಿರುವುದರಿಂದ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಲೂಟಿಯಲ್ಲಿ ಪರಸ್ಪರ ಮಿಲಾಖತ್ ಆಗಿದ್ದಾರೆಂದು ಸಾರ್ವಜನಿಕರು ಭಾವಿಸುವಂತಾಗಿದೆ. ತಮ್ಮ ನಾಯಕ ಯಡಿಯೂರಪ್ಪ, ಆರ್.ಅಶೋಕ್‌ಗಳು ರಾಜ್ಯಾದ್ಯಂತ ಮಾಡುತ್ತಿರುವುದೇ ಮೈಸೂರಿನಲ್ಲೂ ಮಾಡಲಾಗುತ್ತಿದೆ ಅಷ್ಟೇ ಎಂದು ಬಿಜೆಪಿಯ ಪುರಪಿತೃಗಳು ಭಾವಿಸಿರಬೇಕು. ಪಾಲಿಕೆಯ ಅನತಿ ದೂರದಲ್ಲೇ ಇರುವ ಗರುಡಾಮಾಲ್‌ನಂತಹ ಅಕ್ರಮ ಕಟ್ಟಡಗಳು, ನಿಯಮ ಮೀರಿ ಕಟ್ಟಲಾಗುತ್ತಿರುವ ಗಗನಚುಂಬಿ ಕಟ್ಟಡಗಳು ನಗರದ ತುಂಬೆಲ್ಲಾ ಕಾಣಿಸಿಕೊಳ್ಳುತ್ತಿವೆ. ಆಯುಕ್ತ ರಾಯ್ಕರ್ ಮಾತ್ರ ತಲೆಕೆಡಿಸಿಕೊಳ್ಳುತ್ತಿಲ್ಲ ಮತ್ತು ಕುಳಿತಿರುವ ಜಾಗದಿಂದಲೂ ಕದಲುತ್ತಿಲ್ಲ, ಸಾರ್ವಜನಿಕ ಆಸ್ತಿ ಉಳ್ಳವರ, ಭೂಗಳ್ಳರ ಪಾಲಾಗುತ್ತಿದೆ. ಇದಕ್ಕೆ ಏನನ್ನಬೇಕು?



ಪಾಲಿಕೆ ಸದಸ್ಯರಾಗುತ್ತಿರುವವರಲ್ಲಿ ಬಹುತೇಕರು ರಿಯಲ್ ಎಸ್ಟೇಟ್ ಕುಳಗಳಾದರೆ ಏನಾಗಬಹುದೋ ಅದೇ ಮೈಸೂರಲ್ಲಿ ನಡೆಯುತ್ತಿದೆ. ಚೆಲುವೇಗೌಡನ ಪುಂಗಾಟಕ್ಕೆ ಮೈಸೂರು ನಗರಪಾಲಿಕೆಯ ಸದಸ್ಯರಾದ ಎಂ.ವಿ.ಮಹಾದೇವಪ್ಪ, ಶಿವಣ್ಣ, ಜಯರಾಮು ಸಹಾ ಸಾಥ್ ನೀಡುತ್ತಿದ್ದಾರೆ. ಇವೆಲ್ಲಕ್ಕೂ ತಡೆ ಹಾಕುವುದು ಹೇಗೆ ಅನ್ನೋ ಪ್ರಶ್ನೆಗೆ ಕಾಲವೇ ಉತ್ತರ ನೀಡಬೇಕು.



ಹುಬ್ಬಳ್ಳಿ ಕ್ರಿಕೆಟ್ ಬೆಟ್ಟಿಂಗ್ ಚೀಟರ್‌ಗಳಿಗೆ ಪೊಲೀಸರೆ ಟೀಚರ್ಸ್!

ಇಲ್ಲಿಯ ಖಾಕಿ ವ್ಯವಸ್ಥೆ ಈ ದಂಧೆಯಿಂದಲೇ ದಿನವೊಂದಕ್ಕೆ 5 ಕೋಟಿ ರೂಪಾಯಿಯಷ್ಟು ಕಮಾಯಿಸುತ್ತಿದೆ.ಕ್ರಿಕೆಟ್ ಬೆಟ್ಟಿಂಗ್ ದಂಧೆ ಹುಬ್ಬಳ್ಳಿಗೇನು ಹೊಸದಲ್ಲ. ಏಳೆಂಟು ವರ್ಷಗಳ ಹಿಂದೆ ಸಣ್ಣ ಪ್ರಮಾಣದಲ್ಲಿ ಇಲ್ಲಿಗೆ ಕಾಲಿಟ್ಟು ಈಗ ಕೋಟಿ ಆಮದನಿ ತರುವ ದಂಧೆಯಾಗಿ ಬೆಳೆದುನಿಂತಿದೆ. ಇದನ್ನು ಮೊಳಕೆ ಇದ್ದಾಗಲೇ ಚೂಟಿ ಒಗೆಯಬೇಕಿದ್ದ ಖಾಕಿಗಳು ಬುಕ್ಕಿಗಳೊಂದಿಗೇ ಈಗ ಉಣ್ಣಹತ್ತಿದ್ದಾರೆ.

...ಪೊಲೀಸರು ...ರೆದು ಬೆಳೆಸುತ್ತಾ ...ಬಿರುವ ಹತ್ತಾರು ...ಮ ದಂಧೆಗಳು ಇದೀ ...ನ್ನೆಯನ್ನ ...ಗೆಡಿಸಿದೆ. ಇದೀಗ ... ಪೊಲೀಸ್ ಮಂದಿ ...ಟ್ ಬೆಟ್ಟಿಂಗ್ ದಂಧೆಗೆ ... ಹುಡುಗರನ್ನ ...ತಯಿಸುತ್ತಿದ್ದಾರೆ. ...ಕಪ್ ಕ್ರಿಕೆಟ್ ...ಂಗ್ ಸದ್ಯ ಹುಬ್ಬಳ್ಳಿ, ...ವಾಡದ ಪೊಲೀಸ್ ...ಮಾಗಳಿಗೆ ಕೂತಲ್ಲೆ ... ಹುಟ್ಟಿಸುತ್ತಿದೆ. ...ಟ್ಟಿ, ಜೂಜು, ...ಟು, ಮಾಂಸದಡ್ಡೆಗಳ ...ಗಳಿಗಿಂತ ಹೆಚ್ಚಿನ ...ೀರ್ಟ್ ಬುಕ್ಕಿಗಳಿಗೆ ದೊರೆಯುತ್ತಿದೆ. ಇಲ್ಲಿಯ ... ವ್ಯವಸ್ಥೆ ಈ ದಂಧೆಯಿಂದಲೇ ದಿನವೊಂದಕ್ಕೆ 5 ...ಟಿ ರೂಪಾಯಿಯಷ್ಟು ಕಮಾಯಿಸುತ್ತಿದೆ. ...ಕ್ರಿಕೆಟ್ ಬೆಟ್ಟಿಂಗ್ ದಂಧೆ ಹುಬ್ಬಳ್ಳಿಗೇನು ...ಸದಲ್ಲ. ಏಳೆಂಟು ವರ್ಷಗಳ ಹಿಂದೆ ಸಣ್ಣ ...ಣದಲ್ಲಿ ಇಲ್ಲಿಗೆ ಕಾಲಿಟ್ಟು ಈಗ ಕೋಟಿ ...ದನಿ ತರುವ ದಂಧೆಯಾಗಿ ಬೆಳೆದುನಿಂತಿದೆ. ...ನ್ನು ಮೊಳಕೆ ಇದ್ದಾಗಲೇ ಚೂಟಿ ಒಗೆಯಬೇಕಿದ್ದ ...ಗಳು ಬುಕ್ಕಿಗಳೊಂದಿಗೇ ಈಗ ಉಣ್ಣಹತ್ತಿದ್ದಾರೆ.

...ಹುಬ್ಬಳ್ಳಿಯ ಸ್ಟೇಷನ್ ರಸ್ತೆ, ಕಮರಿಪೇಟೆ, ಗಂಟಿಕೇರಿ, ...ಪೇಟೆಯಲ್ಲಿ ಬೆಟ್ಟಿಂಗ್ ದಂಧೆಯ ಕೇಂದ್ರ ಕಚೇರಿಗಳು ...ವ ಆತಂಕವಿಲ್ಲದೆ ಬಾಗಿಲು ತೆರೆದುಕೊಂಡಿವೆ. ಸ್ವತಃ ...ೀಸರೆ ಇವುಗಳ ವಿಳಾಸ, ಬುಕ್ಕಿಗಳ ಮೊಬೈಲ್ ...ರ್‌ಗಳನ್ನು ನಂಬಿಗಸ್ಥ ಜನರಿಗೆ ನೀಡುತ್ತಿದ್ದಾರೆ. ...ಿಂದಲೂ ಪರ್ಸೆಂಟೇಜ್ ಪೀಕುವ ಖಾಕಿಗಳು ...ಗಳೊಂದಿಗೆ ಏಜೆಂಟ್‌ಗಳಂತೆ ಕೆಲಸ ಮಾಡುತ್ತಿದ್ದಾರೆ. ...ಸದ್ಯ ಅವಳಿನಗರದಲ್ಲಿ ಹದಿನೈದು ಜನ ಹಿರಿಯ ...ಗಳಿದ್ದಾರೆ. ಅರ್ಜುನ್ ಶಿರಾಳಕರ್, ದೊಂದುಸಾ...ಬ್, ಶಂಬೂ ಹಬೀಬ ಬ್ರದರ್ಸ್, ಸೀನು ಪವಾರ, ...ೀಪ ಬಾಕಳೆ, ಮ್ಯಾದರ ಓಣಿಯ ಸಂಜು, ...ಸು, ಶಂಕರ ಮೆಹರ್ವಾಡೆ, ಗಂಗಾಧರ ಮಿಸ್ಕಿನ್, ...ೂ ಕಾಟ್ವೆ, ಸಂತೋಷ್ ದೇವಗನ್, ...ಹುಬ್ಬಳ್ಳಿಯ ಅಲ್ತಾಫ್, ರಫೀಕ್, ಧಾರವಾಡದ ...ಟ್ಟು ಮಾಂತ್ಯಾ, ಮತ್ತು ಇವರನ್ನೆಲ್ಲಾ ಮೇಂಟೇನ್ ...ಸುವ ಮೇನ್ ...ವೀರು ಕಠಾರೆಗಳಂಥ ಖದೀಮರು ನಿರಾತಂಕವಾಗಿ ...ಗ್ ದಂಧೆ ನಡೆಸಿದ್ದಾರೆ. ಪಕ್ಕದ ಹಾವೇರಿ, ಗದಗ, ...ವಾರ, ಬೆಳಗಾವಿ, ಬಾಗಲಕೋಟೆ ಜಿಲ್ಲೆಯವರೆಗೂ ಇವರ ನೆಟ್‌ವರ್ಕ್ ಕೆಲಸ ಮಾಡುತ್ತಿದೆ. ಹುಬ್ಬಳ್ಳಿ ನಗರವೊಂದರಲ್ಲೆ ಐವತ್ತಕ್ಕೂ ಹೆಚ್ಚು ಮಿಡಿಯೇಟರ್ ಬುಕ್ಕಿಗಳಿದ್ದರೆ ಇವರ ಕೆಳಗಿರುವ ಮರಿ ಪುಢಾರಿ ಬುಕ್ಕಿಗಳ ಸಂಖ್ಯೆ ಸದ್ಯ ಇನ್ನೂರರ ಗಡಿದಾಟಿದೆ. ಒಂದು ಕಾಲದಲ್ಲಿ ಮಟ್ಕಾ ಬರೆಯುತ್ತಿದ್ದವರೆ ಇಂದು ಇದಕ್ಕೆ ಇಳಿದಿದ್ದಾರೆ. ಕೆಲವರು ಇನ್ನೂ ಮಟ್ಕಾದಲ್ಲೇ ಇದ್ದಾರೆ. ಮಟ್ಕಾ ದೊರೆ ನೇತ್ರಾಣಿಯ ಅಂಗಳದಲ್ಲಿ ಪಳಗಿರುವ ಈ ಹದಿನೈದು ಹಿರಿ ಬುಕ್ಕಿಗಳು ಕೋಟಿಗಳ ಲೆಕ್ಕದಲ್ಲಿ ತೂಗ್ತಾರೆ. ತಮ್ಮಲ್ಲಿರುವ ಹಣದ ಬಲದಿಂದ ಬಹುತೇಕ ಎಲ್ಲ ಪಕ್ಷಗಳೊಂದಿಗೆ ಲಿಂಕು ಹೊಂದಿದ್ದಾರೆ. ಇವರಲ್ಲಿ ಚೆಡ್ಡಿ ಪಿಂಡಗಳೇ ಹೆಚ್ಚು ಬಿಜೆಪಿ ನಾಯಕರೊಂದಿಗೆ ನೇರಸಂಪರ್ಕ ಹೊಂದಿರುವ ಈ ದಂಧೆಕೋರರು ಯಾರಿಗೂ ಹೆದರದ ರೀತಿ ಬೆಳೆದು ನಿಂತಿದ್ದಾರೆ.

ಕಾಟಾಚಾರದ ರೇಡಿಗೂ ಲಕ್ಷದ ಡೀಲ್

ಹುಬ್ಬಳ್ಳಿಯ ಬೆಟ್ಟಿಂಗ್ ಮಾಫಿಯಾದ ಕರಾಮತ್ತುಗಳು ಮತ್ತು ವರ್ಲ್ಡ್‌ಕಪ್‌ನಿಂದ ಏರಿರುವ ಪೊಲೀಸರ ಮಾಮೂಲಿ ದರ ಕಂಡು ಖುದ್ದು ಪೊಲೀಸ್ ಮಹಾನಿರ್ದೇಶಕ ಎಸ್.ಟಿ. ರಮೇಶ ಅವರೇ ದಂಗಾಗಿ ಹೋದರು. ಕೂಡಲೇ ಬೆಟ್ಟಿಂಗ್ ಬುಕ್ಕಿಗಳನ್ನು ಬಂಧಿಸಿ ಈ ದಂಧೆಗೆ ಕಡಿವಾಣ ಹಾಕಿರಿ ಎಂದು ಅವರು ಆದೇಶ ಹೊರಡಿಸಿದರು. ಕಮೀಶನರ್ ರಾಮಚಂದ್ರರಾವ್ ಅವರೇ ಇದರ ನೇತೃತ್ವ ವಹಿಸಿಕೊಂಡರು. ಆದರೆ ರೇಡಿನಲ್ಲಿ ಸಿಕ್ಕಿ ಬಿದ್ದವರೆಲ್ಲಾ ಮಿಡಿಯೇಟರ್ ಬುಕ್ಕಿಗಳು ಹಾಗೂ ಪುಢಾರಿ ಬುಕ್ಕಿಗಳು. ಖಾಕಿ ಮಂದಿ ಇದನ್ನೇ ದೊಡ್ಡ ಸಾಧನೆಯಂತೆ ಫೋಜು ಕೊಟ್ಟಿದ್ದಾರೆ.

ವೀರು ಕಟಾರೆ ಎಂಬ ಬೆಟ್ಟಿಂಗ್ ದೊರೆ

ಹುಬ್ಬಳ್ಳಿ, ಧಾರವಾಡ ಅವಳಿನಗರ ಸೇರಿದಂತೆ ಏಳೆಂಟು ಜಿಲ್ಲೆಗಳಲ್ಲಿ ನಡೆಯುವ ಕ್ರಿಕೆಟ್ ಬೆಟ್ಟಿಂಗ್ ದಂಧೆಗೆ ಹುಬ್ಬಳ್ಳಿಯ ವೀರು ಕಟಾರೆ ಎಂಬಾತನೇ ಬಾಸ್. ಒಂದು ಕಾಲದಲ್ಲಿ ಸಾಮಾನ್ಯ ಮಟ್ಕಾ ಬುಕ್ಕಿಯಾಗಿದ್ದ ವೀರು ಇಂದು ಸರಿಸುಮಾರು 50 ಕೋಟಿಗೆ ತೂಗುತ್ತಾನೆ. ನಕಲಿ ಮದ್ಯಕ್ಕೆ ಸ್ಪಿರಿಟ್ ಸಪ್ಲಾಯ್ ಮಡುವುದು ಇವನ ಸೈಡ್ ಬಿಜಿನೆಸ್. ಕಮರಿಪೇಟೆಯ ನಕಲಿ ಸರಾಯಿ ದಂಧೆಗೆ ಬ್ರೇಕ್ ಬಿದ್ದು ಅದು ಹುಬ್ಬಳ್ಳಿಯ ಗ್ರಾಮೀಣ ಪ್ರದೇಶಕ್ಕೆ ಸ್ಥಳಾಂತರಗೊಂಡಾಗಿನಿಂದ ಈತ ಕಂಡುಕೊಂಡ ಹೊಸ ಅಕ್ರಮ ದಂಧೆಯೇ ಕ್ರಿಕೆಟ್ ಬೆಟ್ಟಿಂಗ್. ಹುಬ್ಬಳ್ಳಿ ಪ್ರಮುಖ ಏರಿಯಾದಲ್ಲಿರುವ ಸುಮಾರು ಎರಡೂವರೆ ಕೋಟಿ ಬೆಲೆಬಾಳುವ ಇವನ ಮನೆಯ ಲ್ಲಿಂದಲೇ ಬೆಟ್ಟಿಂಗ್ ದಂಧೆ ನಡೆಯುತ್ತಿದೆ. ಹೈಟೆಕ್ ಕಾರಿನಲ್ಲಿ ಜುಮ್ ಅಂತಾ ಬಿಂದಾ ಸಾಗಿ ಓಡಾಡಿಕೊಂಡಿರುವ ವೀರು ಕಟಾರೆಗೆ ಪೊಲೀಸರ ಯಾವ ಭಯವೂ ಇಲ್ಲಾ. ಯಾಕೆಂದರೆ ಸ್ವತಃ ಹಿರಿಯ ಅಧಿಕಾರಿಗಳೇ ರಾತ್ರಿ ಇವನೊಂದಿಗೆ ಗುಂಡು ಹಾಕುತ್ತಾ ಹರಟುತ್ತಾರೆ.

ವೀರು ಕಟಾರೇಗೆ ಭೂಗತದ ಲಿಂಕ್ ಇದೆ. ಈ ದಂಧೆಗೆ ಹಣ ಹಸ್ತಾಂತರವಾಗುವುದು ಹವಾಲಾ ದಂಧೆಯಿಂದ. ಮುಂಬೈನಿಂದ ಬರುವ ಮಾಹಿತಿ ಆಧಾರದ ಮೇಲೆ ರನ್, ಬಾಲ್, ವಿಕೆಟ್‌ಗಳ ಮೇಲೆ ರೇಟ್ ಫಿಕ್ಸ್ ಮಾಡುವ ವೀರು ಅದನ್ನು ಎಸ್‌ಎಮ್‌ಎಸ್ ಮೂಲಕ ತನ್ನ ಚೇಲಾ ಬುಕ್ಕಿಗಳಿಗೆ ಕಳುಹಿಸಿ ನೆಟ್‌ವರ್ಕ್ ಮಾಡಿಕೊಳ್ಳುತ್ತಾನೆ. ಬುಕ್ಕಿಗಳಿಂದ ಬೆಟ್ಟಿಂಗ್ ಹಣ ಗಂಟೆಗೊಮ್ಮೆ ಇವನಿಗೆ ಬಂದು ಸೇರುತ್ತೆ, ಅದನ್ನು ಈ ದಂಧೆಯಲ್ಲಿ ಲೋಡ್ ಅಂತ ಕರೆಯುತ್ತಾರೆ. ಮೊಬೈಲ್ ಮೂಲಕ ಮುಂಬೈ, ಸೊಲ್ಲಾಪುರದ ಹವಾಲಾ ದಂಧೆಯ ಪ್ರಮುಖರಿಗೆ ಆಗಿಂದಾಗ್ಗೆ ವಿಷಯ ಹೋಗುತ್ತೆ. ಇದನ್ನೆಲ್ಲಾ ನಿಯಂತ್ರಿಸುವುದು ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಸಹಚರರೊಂದಿಗೆ ಲಿಂಕ್ ಹೊಂದಿರುವ ಹುಬ್ಬಳ್ಳಿಯ ಎಮ್.ಜಿ. ಮಾರ್ಕೆಟಿನ ರಾಜು ಬುಲೆಟ್ ಹಾಗೂ ಘಂಟಿಕೇರಿಯ ಸುಂದರ ಸಿಂಗ್. ವೀರು ಕಟಾರೆಗೂ ಪೇಮೆಂಟ್ ಆಗುವುದು ಅವರಿಂದಲೇ. ಇಂತಹ ಹೈಟೆಕ್ ಕ್ರಿಕೆಟ್ ಬುಕ್ಕಿಯನ್ನು ಅವಳಿನಗರದ ಖಾಕಿಗಳು ಬಗಲಲ್ಲಿಟ್ಟುಕೊಂಡು ಓಡಾಡುತ್ತಿದ್ದಾರೆ.

ಯಾರಿಗೆ ಎಷ್ಟು ಪಾಲು

ಕ್ರಿಕೆಟ್ ಬೆಟ್ಟಿಂಗ್ ದಂಧೆಯೊಂದರಿಂದಲೇ ಹುಬ್ಬಳ್ಳಿ ಖಾಕಿ ಅಧಿಕಾರಿಗಳು ಪ್ರತಿ ತಿಂಗಳು 15-20 ಲಕ್ಷ ಎಣಿಸಿಕೊಳ್ಳುತ್ತಾರೆ. ಇದೂ ಸೀಜನ್ ಮೇಲೆ ಬದಲಾಗುತ್ತೆ. ಈಗ ವರ್ಲ್ಡ್‌ಕಪ್ ಇರುವುದರಿಂದ 25 ಲಕ್ಷಕ್ಕೆ ಏರಿದೆ. ಕೇಸ್, ರೇಡು ಮಾಡಿದಾಗ ಬೇರೆ ಲೆಕ್ಕ ನಡೆಯುತ್ತೆ. ಹೀಗಾಗೆ ಇಲ್ಲಿಗೆ ಬಂದ ಖಾಕಿ ಅಧಿಕಾರಿಗಳು ಇಲ್ಲೆ ತಳವೂರುತ್ತಾರೆ.

ಬೆಟ್ಟಿಂಗ್‌ನ 15-18 ಜನ ಮೇನ್ ಬುಕ್ಕಿಗಳಿಂದ ನಾನ್ ಸೀಜನ್‌ನಲ್ಲಿ ತಲಾ ಒಬ್ಬರಿಂದ 60 ಸಾವಿರ ವಸೂಲಿ ಆಗುತ್ತಿತ್ತು, ಅದೀಗ 90 ಸಾವಿರ, ಲಕ್ಷಕ್ಕೆ ಬಂದು ನಿಂತಿದೆ. ಬುಕ್ಕಿಗಳ ಬಾಸ್ ವೀರು ಕಟಾರೆ ತಿಂಗಳಿಗೆ 2 ಲಕ್ಷ ಕೊಡುತ್ತಿದ್ದವರು ಈಗ 4-5 ಲಕ್ಷ ಮಾಮೂಲಿಯನ್ನು ಪೊಲೀಸರಿಗೆ ಕೊಡುತ್ತಿದ್ದಾನೆ. ಚೆಡ್ಡಿ ಸರ್ಕಾರ ಅವಳಿನಗರಕ್ಕೆ ಮಾಡಿದ ಮಹದುಪಕಾರ ಎಂದರೆ ಅಕ್ರಮ ಕುಳಗಳನ್ನು ಸಾಕಿ ಬೆಳೆಸುವ ರಣ ಹಸಿವಿನ ಪೊಲೀಸ್ ಅಧಿಕಾರಿಗಳನ್ನು ತಂದು ಕೂರಿಸಿದ್ದು ಎಂದರೆ ತಪ್ಪಾಗಲಿಕ್ಕಿಲ್ಲ. ಇನ್ನೂ ಒಂದು ತಿಂಗಳ ಕಾಲ ನಡೆಯಲಿರುವ ಕ್ರಿಕೆಟ್ ಆಟ ಇಲ್ಲಿಯ ಖಾಕಿಗಳಿಗೆ ದಿನನಿತ್ಯ ಬಾಡೂಟ ಬಡಿಸುವುದು ಖರೆ.

• ಹುರಳಿಕುಪ್ಪಿ ವಿನಯ್

ಮೂಡಿಗೆರೆ: ಶಿಕ್ಷಣಾಧಿಕಾರಿ ಶರತ್ಚಂದ್ರನನ್ನು ಮನೆಗಟ್ಟದಿದ್ದರೆ ಬರಖತ್ತಿಲ್ಲ!


ಮೂಡಿಗೆರೆಯ ಕ್ಷೇತ್ರ ಶಿಕ್ಷಣಾಧಿಕಾರಿ ಶರತ್ಚಂದ್ರನ ಪಾಪದ ಕೊಡ ...ಬಿದೆ. ಈ ಮನುಷ್ಯ ನಡೆಸುತ್ತಿರುವ ದಂಧೆ ಒಂದೆರಡಲ್ಲ, ತಾಲ್ಲೂಕಿನ ...ದಿಷ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಗಮನಿಸಿದರೆ ಸಾಕು, ಶಿಕ್ಷಣ ...ಕಾರಿಯ ಗೆಟಪ್ಪಿನಲ್ಲಿರುವ ಶರತ್ಚಂದ್ರನ ಜಾತಕ ಬಹಿರಂಗವಾಗುತ್ತದೆ.

ಶರತ್ಚಂದ್ರನ ತಿನ್ನಾಟದ ಝಲಕುಗಳು ಇಲ್ಲಿವೆ...

...ಇತ್ತೀಚೆಗಷ್ಟೆ ಸರ್ವಶಿಕ್ಷಾ ಅಭಿಯಾನ ಯೋಜನೆಯಿಂದ ವಿವಿಧ ಶಾಲೆಗಳಿಗೆ ...ವಿರುವ ಮೇಜು, ಬೆಂಚು, ಕುರ್ಚಿ ಕಳಪೆ ಗುಣಮಟ್ಟದಿಂದ ...ಡಿವೆ. ಬೆಂಗಳೂರಿನ ಕಂಪೆನಿಯೊಂದು ಇವುಗಳನ್ನು ಸರಬರಾಜು ...ಡಿದ್ದು ಅನೇಕ ಶಾಲೆಗಳು ಇಂತಹ ಪರಿಕರಗಳಿಗೆ ಹಣ ಕೊಟ್ಟಿಲ್ಲ. ...ವು ಶಾಲೆಗಳು ಅಗತ್ಯವಿಲ್ಲದಿದ್ದರೂ ಕಮೀಷನ್‌ಗಾಗಿ ಈ ಕಳಪೆ ...ಕರಗಳನ್ನು ಇಳಿಸಿ ಸಂಪೂರ್ಣ ಹಣ ನೀಡಿವೆ. ಈ ಕುರಿತು ...ಗ್ರ ತನಿಖೆ ನಡೆದರೆ ಬಹಳಷ್ಟು ಶಾಲೆಗಳ ಮುಖ್ಯ ಶಿಕ್ಷಕರು ... ಸೇರುವುದರಲ್ಲಿ ಅನುಮಾನವೇ ಇಲ್ಲ.

...ಅದರಲ್ಲೂ ಆಲೂರೂ ಎಚ್‌ಪಿಎಸ್ ಶಾಲೆಯ ಅಧ್ವಾನ ...ಸಿರದಲ್ಲ, ಇಲ್ಲಿ ಶೌಚಾಲಯದಿಂದ ಹಿಡಿದು ವಿದ್ಯಾರ್ಥಿ ವೇತನವನ್ನು ...ದೆ ಮುಳುಗಿಸಲಾಗಿದೆ. ಗೋಣಿಬೀಡು ಶಾಲೆಯಲ್ಲಿ ಇಂತಹದ್ದೆ ...ಪಟ್ಟುಗಳು ಸರದಿಯಂತೆ ನಡೆದಿವೆ. ಹಿರೇಬೈಲು ಶಾಲೆಯ ...ಕ ಶಿಕ್ಷಕ ಡಿ.ಎಚ್.ಸುರೇಶ್ ಎಂಬಾತ ಅನಿಲ ಸಿಲಿಂಡರುಗಳನ್ನು ...ರುವ ಉದ್ದೇಶದಿಂದ ಶಾಲೆಯಿಂದ ಒಂಬತ್ತು ಅಡುಗೆ ...ಡರುಗಳು ಕಳ್ಳತನವಾಗಿದೆ ಎಂದು ಕಳಸ ಪೊಲೀಸ್ ಠಾಣೆಗೆ ...ದು ನೀಡಿದ್ದ. ತನಿಖೆ ನಡೆಸಿದ ಪೊಲೀಸರಿಗೆ ಅಚ್ಚರಿ ಕಾದಿತ್ತು, ...ಶನ ಮನೆಯಲ್ಲೇ ಆ ಒಂಬತ್ತು ಸಿಲಿಂಡರುಗಳು ಪತ್ತೆಯಾಗಿದ್ದವು!

...ಕಳೆದ ವರ್ಷ ಸಾರ್ವತ್ರಿಕ ವರ್ಗಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ...ಳ್ಳಳ ತಾಲ್ಲೂಕಿನಿಂದ ಕಾಶಿನಾಥ್ ಎಂಬ ಶಿಕ್ಷಕ ರಾಜ್ಯ ಕೌನ್ಸೆಲಿಂಗ್‌ನಲ್ಲಿ ...ಲ್ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದ. ಕಾಶಿನಾಥ್ ಈ ಶಾಲೆಗೆ ...ಾಗಲು ಬಂದಾಗ ಅಚ್ಚರಿ ಕಾದಿತ್ತು. ಶಿಕ್ಷಣಾಧಿಕಾರಿ ಶರತ್ಚಂದ್ರ ಅಲ್ಲಿಗೆ ... ಶಿಕ್ಷಕರನ್ನು ನಿಯೋಜಿಸಿಯಾಗಿತ್ತು. ಮೂಡಿಗೆರೆ ಶಾಲೆಗೆ ಗೋಣಿಬೀಡು ...ಯಿಂದ ಶ್ರೀಲಕ್ಷ್ಮಾ ಎಂಬ ಪಿಪಿಸಿ ಶಿಕ್ಷಕಿಯನ್ನು ಸ್ಥಳಾಂತರಿಸಲಾಗಿದೆ. ... ನಿಯಮಗಳ ಪ್ರಕಾರ ಪಿಪಿಸಿ ಶಿಕ್ಷಕಿಯನ್ನು ಸ್ಥಳಾಂತರಿಸುವಂತಿಲ್ಲ. ತಮಾಷೆಯ ಸಂಗತಿ ಎಂದರೆ ಈ ಶಾಲೆಯಲ್ಲಿ ಅದಕ್ಕೂ ಮುನ್ನವೇ ಪಿಪಿಸಿ ಹುದ್ದೆಯಿತ್ತು. ಶರತ್ಚಂದ್ರನ ವಕ್ರ ಬುದ್ಧಿ ಏನನ್ನಾದರೂ ಮಾಡಬಲ್ಲದೆಂಬುದಕ್ಕೆ ಇದು ಸ್ಪಷ್ಟ ಸಾಕ್ಷಿ.



ಶರತ್ಚಂದ್ರ ಬಿಳಗುಳ ಶಾಲೆಯ ಬಡ್ತಿ ಶಿಕ್ಷಕರ ಹುದ್ದೆಯನ್ನು ರದ್ದುಪಡಿಸಿದ್ದಾನೆ. ಅಲ್ಲಿದ್ದ ಜಾನಪ್ಪ ಎಂಬ ಶಿಕ್ಷಕನಿಗೆ ಮುಂಬಡ್ತಿ ನೀಡಿ ಸಿಆರ್‌ಪಿಗೆ ನೇಮಿಸಿದ್ದಾನೆ. ಶಿಕ್ಷಕರ ಕ್ಷೇಮಾಭಿವೃದ್ಧಿ ಬ್ಯಾಂಕ್‌ನಲ್ಲಿ ಶಿಕ್ಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರೋಗ್ಯ ವಿಮೆ, ಮದುವೆ, ಮನೆ ಕಟ್ಟಲು ಉಳಿತಾಯ, ಅಪಘಾತ ವಿಮೆ ಸಾಲಸೌಲಭ್ಯವಿದೆ. ಈ ಬ್ಯಾಂಕ್ ಸದಸ್ಯರಾಗಲು ಶಿಕ್ಷಕರಿಗೆ ಅನುಮತಿ ನೀಡದೆ ಸತಾಯಿಸುವುದಿದೆ. ಇನ್ನು ಗುರುಭವನ ವಿಚಾರದಲ್ಲಿ ನಡೆದಿರುವ ಅಪರಾ ತಪರಾಗಳ ಕುರಿತು ತನಿಖೆ ನಡೆದರೆ ಅಲ್ಲಿನ ಅಧ್ವಾನಗಳು ಬಯಲಾಗುತ್ತವೆ.

ಹಿಂದೆ ಬಗ್ಗಸಗೋಡು ಶಾಲೆಯ ಶಿಕ್ಷಕಿ ಬಡ ವಿದ್ಯಾರ್ಥಿಗಳ ಬಿಸಿಯೂಟದಿಂದ ಹಿಡಿದು ವಿವಿಧ ಸೌಕರ್ಯಗಳಿಂದ ವಂಚಿಸಿ ಸಿಕ್ಕಿಬಿದ್ದರೂ ಆಕೆಯ ವಿರುದ್ಧ ಕ್ರಮ ಕೈಗೊಳ್ಳದಿರುವುದರ ಹಿಂದಿನ ರಹಸ್ಯವನ್ನು ಕಂಡುಹಿಡಿಯಬೇಕಿದೆ. 2008ರ ಏಪ್ರಿಲ್‌ನಲ್ಲಿ ಬಾಲಕರ ಪದವಿ ಪೂರ್ವ ಕಾಲೇಜಿನ ಹೈಸ್ಕೂಲು ವಿಭಾಗದ ಹಿಂದಿ ಶಿಕ್ಷಕ ಕಂ ಕ್ಲಸ್ಟರ್ ಶಿಕ್ಷಣಾಧಿಕಾರಿ ರಮೇಶಪ್ಪ ಮಾಹಿತಿಯಿಲ್ಲದೆ ಇಪ್ಪತ್ತೈದು ದಿನಗಳ ಕಾಲ ಗೈರುಹಾಜರಿಯಾಗಿದ್ದ. ಈತನ ವಿರುದ್ಧ ಹತ್ತು ಗಂಭೀರ ಆರೋಪಗಳನ್ನು ಶಾಲೆಯ ಪ್ರಾಂಶುಪಾಲ ಶ್ರೀನಿವಾಸ್ ಮಾಡಿದ್ದರು. ಈ ಆರೋಪಗಳನ್ನು ಆತನ ಎಸ್‌ಆರ್ ದಾಖಲೆಗಳ ಮೇಲೂ ನಮೂದಿಸಲಾಗಿದೆ.

ರಮೇಶಪ್ಪನ ಮೇಲೆ ಆರೋಪಗಳಿರುವಾಗ ಗೈರುಹಾಜರಿಯ ಕಾರಣವನ್ನು ಕೇಳದೆ ಆತನಿಗೆ ವೇತನ ದಯಪಾಲಿಸಿದ್ದಾನೆ ಶರತ್ಚಂದ್ರ. ರಮೇಶಪ್ಪನ ಆರೋಪಗಳೆಲ್ಲ ಜರೂರಾಗಿದ್ದರೂ ವರದಿ ಕೇಳಿದ ಜಿಲ್ಲಾ ಶಿಕ್ಷಣಾಧಿಕಾರಿಗೆ ನಿರಾಧಾರವೆಂದು ಪುಂಗಿ ಊದಿದ್ದಾನೆ. ವಿಶೇಷವೆಂದರೆ ರಮೇಶಪ್ಪ ಆತನ ಮೇಲಿನ ಯಾವುದೇ ಆರೋಪಗಳಿಗೂ ಉತ್ತರ ನೀಡದಿರುವುದು. ಇವತ್ತಿಗೆ ಆತನನ್ನು ಕಡೂರು ತಾಲ್ಲೂಕಿಗೆ ವರ್ಗಾವಣೆ ಮಾಡಿ ಶಿಕ್ಷಣ ಸಂಯೋಜಕನಾಗಿ ಬದಲಾಯಿಸಲಾಗಿದೆ. ನಿಮಗೆ ತಿಳಿದಿರಲಿ, ಮೂಡಿಗೆರೆ ತಾಲ್ಲೂಕಿನ ಅನೇಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿಗೊಳಿಸಿಲ್ಲ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶಿಕ್ಷಕರ ಕೊರತೆಗಳಿದ್ದು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೀವ್ರ ತೊಂದರೆ ಎದುರಾಗಿದೆ. ಇವುಗಳ ಅರಿವಿದ್ದರೂ ಡಿಡಿಪಿಐ ಮತ್ತು ಶಿಕ್ಷಣಾಧಿಕಾರಿ ಇಬ್ಬರೂ ಸೇರಿಕೊಂಡು ಹಲವರನ್ನು ಹುದ್ದೆಯೊಂದಿಗೆ ಸ್ಥಳಾಂತರಿಸಿದ್ದಾರೆಂದರೆ ಏನನ್ನಬೇಕು ಹೇಳಿ. ಇನ್ನು ಕೊಪ್ಪ ಶಾಲೆಗೆ ವರ್ಗಾವಣೆಯಾಗಿದ್ದ ಕುಮಾರಯ್ಯನೆಂಬ ಶಿಕ್ಷಕರನ್ನು ಎರಡು ತಿಂಗಳ ಕಾಲ ರಾಜಕೀಯ ಕಸರತ್ತಿನ ಬಳಿಕ ಬಣಕಲ್ ಶಾಲೆಗೆ ನಿಯೋಜಿಸಿದ್ದ. ಅಲ್ಲದೇ ತಾಲ್ಲೂಕಿನಲ್ಲಿ ಶಾಲೆಗಳ ಎಸ್‌ಡಿಎಂಸಿಯಿಂದ ನಿಯಮಗಳನ್ನು ಉಲ್ಲಂಘಿಸಿ ಹಣ ಪಡೆದು ಬೇರೆ ಶಾಲೆಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಬಳಸಲಾಗುತ್ತಿದೆ. ಪ್ರತಿಭಾ ಕಾರಂಜಿ, ಕ್ರೀಡಾಕೂಟಗಳ ಹೆಸರಿನಲ್ಲಿ ಬಹಳಷ್ಟು ಕಡೆ ಮುಂಡಾಮೋಚಲಾಗಿದೆ.

ಸರಕಾರ ಹೆಣ್ಣುಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕೊಡುವ ಭರವಸೆ ಕೊಡುತ್ತಿದ್ದರೆ ಮೂಡಿಗೆರೆ ಪಟ್ಟಣದ ಬಾಲಿಕಾ ಪ್ರೌಢಶಾಲೆಯಲ್ಲಿ ಮಾತ್ರ ಅಭಿವೃದ್ಧಿ ಹೆಸರಿನಲ್ಲಿ ಪ್ರವೇಶ ಶುಲ್ಕ ಪಡೆಯಲಾಗುತ್ತಿದೆ. 2009ರಲ್ಲಿ ರುದ್ರಪ್ಪನೆಂಬ ಪ್ರಾಂಶುಪಾಲ ಪರಿಶಿಷ್ಟ ವಿದ್ಯಾರ್ಥಿನಿಯರಿಗೆ ಪುಸ್ತಕ ಕೊಡಲು ಎಸ್‌ಡಿಎಂಸಿಯಿಂದ ಮೂವತ್ತೈದು ಸಾವಿರ ಹಣವನ್ನು ತೆಗೆದಿದ್ದು ಜಗಜ್ಜಾಹಿರಾಗಿದೆ. ಅಲ್ಲದೇ ಎಲ್ಲಾ ನೀತಿ, ನಿಯಮ, ಸೂಚನೆಗಳನ್ನು ಗಾಳಿಗೆ ತೂರಿ ಈ ಶಾಲೆಯಲ್ಲಿ ತಿಂದುಣ್ಣಲಾಗಿದೆ. ಚಿನ್ನಿಗಾ ಪ್ರೌಢಶಾಲೆಯಲ್ಲಿ ಇಂಥದ್ದೇ ಅಧ್ವಾನ ನಡೆಯುತ್ತಿರುವುದನ್ನು ಪೋಷಕರು ಪ್ರತಿಭಟಿಸಿದ್ದರಿಂದ ಅಭಿವೃದ್ಧಿ ಹೆಸರಲ್ಲಿ ಪಡೆದಿದ್ದ ಹಣವನ್ನು ಹಿಂತಿರುಗಿಸಲಾಗಿದೆ.

ಒಂದೆಡೆ ಇಂತಹ ಅನೇಕ ಘಟವಟ್ಟುಗಳು ಎಗ್ಗಿಲ್ಲದಂತೆ ನಡೆಯುತ್ತಿದ್ದರೆ ಶಿಕ್ಷಣಾಧಿಕಾರಿ ಶರತ್ಚಂದ್ರ ಮಾತ್ರ ಬಾಚುವ ಕೆಲಸದಿಂದ ಹೊರಬರುತ್ತಿಲ್ಲ. ಈತನನ್ನು ಮನೆಗಟ್ಟದಿದ್ದರೆ ಘಟವಟ್ಟು ತಪ್ಪಿದ್ದಲ್ಲ. ಡಿಡಿಪಿಐ ರಂಗಪ್ಪ ಇತ್ತ ತಲೆ ಹಾಕುತ್ತಿಲ್ಲ. ಈತನ ಕಚೇರಿಯೂ ಘಟವಟ್ಟುಗಳ ಗುದಾಣವಾಗಿದೆ. ರಂಗಪ್ಪ ಮೊನ್ನೆ ತಾನೆ ಸಸ್ಪೆಂಡಾಗಿ ತಡೆಯಾಜ್ಞೆ ತಂದು ಅದೇ ಸ್ಥಾನದಲ್ಲಿ ಕುಳಿತಿದ್ದಾನೆ. ಮೂಡಿಗೆರೆ ಶಾಸಕ ಕುಮಾರಸ್ವಾಮಿ ತೆಪ್ಪಗಿದ್ದಾರೆ. ಶರತ್ಚಂದ್ರ ಕೊಬ್ಬಿ ಬಡ ವಿದ್ಯಾರ್ಥಿಗಳು ಬಸವಳಿಯಲು ಇನ್ನೇನು ಬೇಕು ಹೇಳಿ?

• ಅಜೀಜ್ ಕಿರುಗುಂದ

ರಾಜಪ್ಪ ದಳವಾಯಿ ಲೇಖನಕ್ಕೆ ಪ್ರತಿಕ್ರಿಯೆ

ಸಗಟುಮಾತಲ್ಲ ಬೇಕಾದ್ದು; ಮಾತುಕತೆ, ಮದ್ದಿನಂಥ ಟೀಕೆ

ಮಾರ್ಚ್ 16, 2011ರಂದು ಹೊರಬಂದ ತಮ್ಮ ಪತ್ರಿಕೆಯ ವಿಶೇಷಾಂಕದಲ್ಲಿ ರಾಜಪ್ಪ ದಳವಾಯಿಯವರು ಬರೆದ ಕನ್ನಡ ರಂಗಭೂಮಿ: ಸಮಕಾಲೀನ ಸ್ಪಂದನ ಲೇಖನಕ್ಕಿದು ಪ್ರತಿಕ್ರಿಯೆ.

ವೃತ್ತಿನಿರತನಾದ ಒಬ್ಬ ರಂಗನಿರ್ದೇಶಕನಾಗಿ, ರಂಗಕಲೆಯ ಮೇಷ್ಟರಾಗಿ, ದಳವಾಯಿಯವರ ಲೇಖನದ ಕೆಲವು ಭಾಗಗಳನ್ನು ಒಪ್ಪುತ್ತೇನೆ ನಾನು. ಆದರೆ ಲೇಖನದ ಹಲವು ಭಾಗಗಳನ್ನು ಕುರಿತು ನನಗೆ ದೊಡ್ಡ ಆಕ್ಷೇಪಗಳಿವೆ. ಅವುಗಳಲ್ಲಿ ಒಂದು ಭಾಗವನ್ನು ಕುರಿತ ಆಕ್ಷೇಪವನ್ನು ಮಾತ್ರ ಈಗ ಹೇಳುತ್ತೇನೆ. ದಳವಾಯಿಯವರು ಕೆ.ವಿ.ಅಕ್ಷರ ಅವರನ್ನು ಕುರಿತು, ನೀನಾಸಮ್ ಸಂಸ್ಥೆ ಮತ್ತು ನೀನಾಸಮ್ ತಿರುಗಾಟದ ಶೂದ್ರ ತಪಸ್ವಿ ರಂಗಪ್ರಯೋಗವನ್ನು ಕುರಿತು ಆಡಿರುವುದೆಲ್ಲ ತೀರ ಆಕ್ಷೇಪಾರ್ಹವಾದ ಮಾತು. ನನಗಿರುವ ಎಲ್ಲ ಆಕ್ಷೇಪಗಳಲ್ಲಿ ಇದೊಂದು ಆಕ್ಷೇಪವು ತುಂಬ ಮುನ್ನೆಲೆಯದ್ದು ಎಂದು ನಂಬಿದ್ದೇನೆ. ಆದ್ದರಿಂದ ಅದನ್ನು ಹೇಳಿಕೊಳ್ಳುವುದು ನನಗೆ ಅನಿವಾರ್ಯವಾಗಿದೆ; ನನ್ನ ಕರ್ತವ್ಯವೆನ್ನಿಸಿದೆ.


ಆದರೆ, ಮೊದಲು ಕೆಲವು ಮಾತು ಹೇಳಬೇಕು.

ಅಕ್ಷರ ಅವರು ಈಚೆಗೆ ಬರೆದ ಯಾವುದು ಸಹಜ? ಯಾವುದು ಅವಮಾನ?: ಪರಕೆ, ಹರಾಜು ಲೇಖನದಲ್ಲಿನ ವಿಚಾರಗಳನ್ನು ಹಲವರಂತೆ ನಾನೂ ಟೀಕಿಸಿದ್ದೇನೆ. ಆದರೆ, ಹಾಗೆ ಅಕ್ಷರ ಅವರ ವಿಚಾರಗಳನ್ನು ಟೀಕಿಸಿ ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ನಾನು ಬರೆದ ಲೇಖನದಲ್ಲಿನ ಒಂದೆರಡು ಮಾತುಗಳು ಅನ್ಯಾಯವಾದುವು, ವಾದದ ಭರದಲ್ಲಿ ಒಗೆದುಬಿಟ್ಟ ಬೀಸುಮಾತುಗಳು ಎಂದು ಆಮೇಲೆ ಸ್ವತಃ ನನಗೇ ಅನ್ನಿಸಿ, ನನ್ನ ಕುರಿತು ನಾನೇ ಬೇಸರಗೊಂಡದ್ದಿದೆ. ಆದರೆ ಅದನ್ನು ಕುರಿತು ಎಲ್ಲ ಹೇಳಿಕೊಳ್ಳಲು ಇದು ತಕ್ಕ ಜಾಗವೂ ಅಲ್ಲ, ಸಮಯವೂ ಅಲ್ಲ.

ಇಷ್ಟು ಹೇಳಿ ಇಲ್ಲಿ ಮತ್ತೊಂದು ಮಾತನ್ನು ಒತ್ತಿಹೇಳುತ್ತಿದ್ದೇನೆ. ತಮ್ಮ ಆ ಲೇಖನದಲ್ಲಿ ಅಕ್ಷರ ಅವರು ಮಂಡಿಸಿದ ವಿಚಾರಗಳನ್ನು - ಬಹಳ ವಿಶೇಷವಾಗಿ, ಅವರು ಕೊಟ್ಟ ರೂಪಕ ಮತ್ತು ಆ ರೂಪಕಕ್ಕೆ ಅವರು ಒದಗಿಸಿದ ಟೀಕು, ಇವುಗಳನ್ನು - ಇವತ್ತಿಗೂ ನಾನು ಒಪ್ಪುವುದಿಲ್ಲ, ಮೇಲಾಗಿ, ಇವತ್ತಿಗೂ ಅಕ್ಷರ ಅವರು ಕೊಟ್ಟ ಆ ರೂಪಕವು, ಅಕ್ಷರರ ಲೇಖನದ ಕಾಳಜಿಯಾಗಿರುವಂಥ ವಸ್ತು-ವಿಷಯಗಳು ಬಂದಾಗಲೆಲ್ಲ, ಎಸ್. ಎನ್. ಬಾಲಗಂಗಾಧರರು ಮತ್ತು ಅವರ ಶಿಷ್ಯಂದಿರು ಕೊಡುವ ರೂಪಕಗಳನ್ನೇ ಹೋಲುತ್ತದೆ ಎನ್ನುವುದು ನನ್ನ ನಿಲುವಾಗಿದೆ. ತಮ್ಮ ಲೇಖನದ ಸುತ್ತ ಪ್ರಜಾವಾಣಿಯಲ್ಲಿ ಬೆಳೆದ ವಾಗ್ವಾದಕ್ಕೆ ಜವಾಬುಕೊಡುತ್ತ, ಅಕ್ಷರ ಅವರು ನನ್ನದು ಅಂದಾಜಿನ ಗುರಿ ಆಗಿತ್ತು ಎಂದು ಆಕ್ಷೇಪಿಸಿದ್ದಾರೆ. ಆದರೆ ಅದು ಹಾಗಲ್ಲ, ನಾನು ಸಾಕಷ್ಟು ಆಧಾರವನ್ನಿಟ್ಟುಕೊಂಡೇ ಆ ಹೋಲಿಕೆಯನ್ನು ಮಾಡಿದ್ದೇನೆ ಎಂಬಷ್ಟನ್ನು ಇಲ್ಲಿ ಹೇಳಿಕೊಳ್ಳುತ್ತಿದ್ದೇನೆ. ಆದರೆ, ಮತ್ತೆ ಆ ವಾಗ್ವಾದವನ್ನು ಬೆಳೆಸಲು ಇದು ಜಾಗವೂ ಅಲ್ಲ ವೇಳೆಯೂ ಅಲ್ಲ ಅಂಥದಕ್ಕಾಗಿ ಬೇರೆ ಜಾಗ ಮತ್ತು ವೇಳೆ ಒದಗಿಬರಲಿ ಎನ್ನುತ್ತ ಆ ಮಾತನ್ನಿಲ್ಲಿಗೆ ಬಿಟ್ಟು ಈ ಲೇಖನದ ಮುಖ್ಯವಾದ ಉದ್ದೇಶಕ್ಕೆ ಬರುತ್ತೇನೆ.

ಏನೆಂದರೆ, ಇಷ್ಟೆಲ್ಲ ಹೇಳಿಯೂ, ಅಕ್ಷರ ಅವರು ಕರ್ಮಠರಲ್ಲ, ಜಾತೀಯತಾವಾದಿಯಲ್ಲ, ಅವರು ನಿಜಕ್ಕೂ ಜಾತ್ಯತೀತರು ಎನ್ನುವುದು ನನಗೆ ತಿಳಿದಿದೆ; ಮತ್ತು ಇದು ನನಗೆ ಮಾತ್ರವಲ್ಲ, ಅಕ್ಷರ ಅವರ ಒಟ್ಟು ಕೆಲಸವನ್ನು ಮತ್ತು ವ್ಯಕ್ತಿತ್ವವನ್ನು ಹಾಗೂ ಒಟ್ಟಂದದಲ್ಲಿ ನೀನಾಸಮ್ ಸಂಸ್ಥೆಯ ಕೆಲಸಗಳನ್ನು ತೆರೆದಮನಸ್ಸಿನಿಂದ ಕಾಣುವ ಎಲ್ಲರಿಗೂ ತಿಳಿದಿರುತ್ತದೆ. ತಮ್ಮ ಲೇಖನವು ಪ್ರಜಾವಾಣಿಯಲ್ಲಿ ಹುಟ್ಟುಹಾಕಿದ ವಾಗ್ವಾದದ ಕೊನೆಯಲ್ಲಿ ಅಕ್ಷರ ಅವರು ಕೊಟ್ಟ ಉತ್ತರವನ್ನು ಕಂಡವರಿಗೆ ಈ ವಿಷಯದಲ್ಲಿದ್ದ ಮೂಲಭೂತಸಂಶಯವು ಬಗೆಹರಿದಿರಬೇಕು. ಅಕ್ಷರ ಅವರ ಆ ಉತ್ತರವು, ಕೊನೆಯ ಪಕ್ಷ, ಅವರು ಜಾತೀಯತಾವಾದಿಯಲ್ಲ ಎನ್ನುವುದನ್ನು ತಿಳಿಸಿಕೊಟ್ಟಿದೆ ಎಂದೇ ನಂಬಿದ್ದೇನೆ. ಆದ್ದರಿಂದಲೇ, ರಾಜಪ್ಪ ದಳವಾಯಿಯವರು ಅಕ್ಷರ ಅವರನ್ನು ಮತ್ತು ನೀನಾಸಮ್ ಸಂಸ್ಥೆಯನ್ನು ಕುರಿತು ಮಾಡಿರುವ ಆರೋಪದಲ್ಲಿ ಹುರುಳಿಲ್ಲ ಎಂದು ಹೇಳಬೇಕಿದೆ. ಅಕ್ಷರ ಈ ಉತ್ತರದ ಜೊತೆಗೂ ನಮ್ಮಂಥವರಿಗೆ ಹಲವು ತಗಾದೆಗಳಿರಬಹುದು, ಆದರೆ, ಆದರಿಂದ ಅಕ್ಷರ ಅವರು ಕದ್ದುಮುಚ್ಚಿಯೋ ರಾಜಾರೋಷವಾಗಿಯೋ ಜಾತೀಯತೆಯ ವಾದವನ್ನು ಎತ್ತಿಹಿಡಿಯುತ್ತಿದ್ದಾರೆ ಎಂದಾಗಲಿ, ಮತ್ತು ಯಾವುದೋ ಪ್ರತಿಗಾಮಿ ದುರುದ್ದೇಶದಿಂದ ಕೂಡಿದವರಾಗಿದ್ದಾರೆಂದಾಗಲಿ ಹೇಳಲುಬಾರದು. ಆದರೆ ತಮ್ಮ ಲೇಖನದಲ್ಲಿ ದಳವಾಯಿಯವರು ಅಕ್ಷರಶಃ ಇಂಥ ಹುರುಳಿಲ್ಲದ ಆರೋಪವನ್ನು ಮಾಡಿದ್ದಾರೆ. ಇಷ್ಟಲ್ಲದೆ, ಕನ್ನಡ ರಂಗಭೂಮಿ: ಸಮಕಾಲೀನ ಸ್ಪಂದನ ಎನ್ನುವುದು ಅವರ ಲೇಖನದ ವಿಷಯವಾಗಿರುವಾಗ, ಅಕ್ಷರ ಅವರನ್ನು ಕುರಿತು ಮತ್ತು ನೀನಾಸಮ್ ಸಂಸ್ಥೆಯನ್ನು ಕುರಿತು ದಳವಾಯಿಯವರು ಆಡಿರುವ ಮಾತುಗಳು ಅಪ್ರಸ್ತುತ ಪ್ರಸಂಗವಲ್ಲದೆ ಬೇರೆಯಲ್ಲ ಎಂದೇ ಹೇಳಬೇಕಾಗುತ್ತದೆ.

ಇನ್ನು, ನೀನಾಸಮ್ ತಿರುಗಾಟದ ಶೂದ್ರ ತಪಸ್ವಿ ಪ್ರಯೋಗದ ಮಾತು. ದಳವಾಯಿಯವರು, ಅದರಲ್ಲಿ ಜನಿವಾರವು ಪ್ರಧಾನವಾಗುವುದರ ಮಾತೆತ್ತಿ ಆ ಕ್ರಿಯೆಯನ್ನು ಟೀಕಿಸಿದ್ದಾರೆ. ನಾನೂ ಆ ಪ್ರಯೋಗವನ್ನು ನೋಡಿದ್ದೇನೆ; ಆದರೆ ದಳವಾಯಿಯವರ ಲೇಖನವನ್ನು ಓದುವ ಹೊತ್ತಿಗೆ ಪ್ರಯೋಗದ ಕೊನೆಯಭಾಗದ ಈ ವಿವರಗಳನ್ನು ಮರೆತಿದ್ದೆ. ಅಷ್ಟು ಮಾತ್ರವಲ್ಲ, ರಂಗಶಂಕರದಲ್ಲಿ ಈ ಪ್ರಯೋಗದ ಆಟವನ್ನು ನೋಡುವಾಗ ಜನಿವಾರಪ್ರಧಾನವಾಗುವ ಆ ಕ್ಷಣದಲ್ಲಿ ನನ್ನಲ್ಲಿ ಎಂಥ ಭಾವನೆ ಹುಟ್ಟಿತು ಎನ್ನುವುದನ್ನೂ ಮರೆತಿದ್ದೆ. ಪ್ರಯೋಗದ ಆ ಭಾಗದ ಒಟ್ಟು ದೃಶ್ಯೀಕರಣ ಮತ್ತು ನಾಟ್ಯೀಕರಣವೇ ತುಸು ತಾಳ್ಮೆಗೆಡಿಸುವಂತಿದೆ, ಆ ಭಾಗದಲ್ಲಿ ವ್ಯಾಖ್ಯಾನಪೂರ್ವಕತೆಯು ತುಸು ಹೆಚ್ಚಾಯಿತು ಎಂದು ಆಗ ನನಗನ್ನಿಸಿದ್ದು, ಹಾಗೆಂದು ನನ್ನ ಕೆಲವು ಸ್ನೇಹಿತರಿಗೂ ಅನ್ನಿಸಿದ್ದು ಮತ್ತು ಆ ಕುರಿತು ನಾವು ಪ್ರಯೋಗದ ನಿರ್ದೇಶಕರಾದ ಮಂಜುನಾಥ ಬಡಿಗೇರರ ಬಗೆಗೆ ಸ್ನೇಹ-ಪ್ರೀತಿಗಳನ್ನಿಟ್ಟುಕೊಂಡೇ ಗೊಣಗಿಕೊಂಡದ್ದು, ಇದೆಲ್ಲ ಅಸ್ಪಷ್ಟವಾಗಿ ನೆನಪಿತ್ತೇ ಹೊರತು ವಿವರವೊಂದೂ ನೆನಪಿರಲಿಲ್ಲ, ದಳವಾಯಿಯವರ ಲೇಖನವನ್ನು ಓದಿದಮೇಲೆ ಬಡಿಗೇರ ಅವರಿಗೆ ಫೋನುಮಾಡಿ, ಆ ದೃಶ್ಯದ ವಿವರಗಳನ್ನು ಕುರಿತು ಕೇಳಿದೆ ನಾನು. ಅವರು ತಿಳಿಸಿದಂತೆ, ಪ್ರಯೋಗದ ಕಡೆಯ ಭಾಗದಲ್ಲಿ ಬ್ರಾಹ್ಮಣನಿಗೆ ಬುದ್ಧಿಬಂದಾಗ, ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪಪಡುತ್ತ ತನ್ನ ಜನಿವಾರವನ್ನು ಕಿತ್ತೆಸೆದು ಶೂದ್ರತಪಸ್ವಿಯ ಕಾಲಿಗೆ ಬೀಳುತ್ತಾನೆ ಆತ. ಆಗ, ತಪಸ್ವಿಯು ನಗುತ್ತ ಆತನ ಹಿಡಿದೆಬ್ಬಿಸಿ, ಆತನಿಗೆ ಬಹಳ ನಾಟಕೀಯವಾಗಿ ಹೊಸದೇ ಒಂದು ಜನಿವಾರವನ್ನು ತೊಡಿಸುತ್ತಾನೆ. ಇಂಥದೊಂದು ಕ್ರಿಯೆಗೆ ಹಲವು ಅರ್ಥಗಳಿರುವುದು ಸಾಧ್ಯ, ಅವುಗಳಲ್ಲಿ ಒಂದನ್ನು ಹೇಳುತ್ತೇನೆ. ಅದು ಪ್ರಾಯಶಃ ಹೆಚ್ಚಿನವರಿಗೆ ಹೊಳೆಯುವಂಥದಲ್ಲದ್ದೆ. ಈಗ ನೆನಪು ಮಾಡಿಕೊಂಡರೆ, ನನಗೂ ಹೊಳೆದದ್ದು, ಆಟವನ್ನು ನೋಡುವ ಹೊತ್ತಿಗೆ ತಿಳಿದುಬಂದದ್ದು; ಅಲ್ಲದೆ, ಬಡಿಗೇರರ ಮನಸ್ಸಿನಲ್ಲಿದ್ದದ್ದು ಕೂಡ ಹೌದು. ಅದೇನೆಂದರೆ, ಹಾಗೆ ಅವನಿಗೆ ಜನಿವಾರವನ್ನು ತೊಡಿಸುವುದರಿಂದ ತಪಸ್ವಿಯು ಅವನಿಗೆ "ಅಪ್ಪಾ, ಈಗ ನೀನು ನಿಜವಾದ ಬ್ರಾಹ್ಮಣನಾದೆ" ಎಂದು ಹೇಳುತ್ತಿದ್ದಾನೆ.



ಹೀಗೆಂದ ಕೂಡಲೇ ಹಲವು ಪ್ರಶ್ನೆಗಳೇಳುತ್ತವೆ, ನಿಜ. ನಿಜವಾದ ಬ್ರಾಹ್ಮಣ್ಯ ಎಂದರೇನು? ಅದು ನಿಜವಾದದ್ದಾಗಿರಲಿ, ಅಲ್ಲದಿರಲಿ ಬ್ರಾಹ್ಮಣ್ಯ ಎನ್ನುವುದನ್ನು ಎತ್ತಿಹಿಡಿಯಬೇಕು ಯಾಕೆ? ಜಾತಿಯಲ್ಲಿ ಬ್ರಾಹ್ಮಣರು ಎನಿಸಿಕೊಳ್ಳುವ ತಂದೆ-ತಾಯಂದಿರಿಗೆ ಹುಟ್ಟುವವನು ಮಾತ್ರ ತಾನು ಕೆಟ್ಟಬ್ರಾಹ್ಮಣನೋ ಒಳ್ಳೆಯಬ್ರಾಹ್ಮಣನೋ ಒಟ್ಟಿನಲ್ಲಿ ಯಾವುದೋ ಒಂದು ಬಗೆಯ ಬ್ರಾಹ್ಮಣ ಎಂದು ಕರೆಯಿಸಿಕೊಳ್ಳಲು ಲಾಯಕ್ಕಾದವನು ಯಾಕಾಗಬೇಕು? ಅಸಲಿಗೆ, ಈ ಬ್ರಾಹ್ಮಣ್ಯ ಎಂದರೇನು? ಅದು ಇರಬೇಕೇಕೆ? ಉಳಿದ ಜಾತಿಗಳಲ್ಲಿರುವವರಿಗೆ ಬ್ರಾಹ್ಮಣರಾಗುವ ಹಕ್ಕಿಲ್ಲವೇ? ಅಸಲಿಗೆ, ಉಳಿದವರು ಬ್ರಾಹ್ಮಣರಾಗಲು, ಬ್ರಾಹ್ಮಣ್ಯದ ಸ್ಥಿತಿಯನ್ನು ಪಡೆಯಲು ಹವಣಿಸಬೇಕಾದರೂ ಯಾಕೆ? ಎಲ್ಲ ಜಾತಿಗಳೂ ಸಮಾನವಾದುದೇಕಾಗಬಾರದು? ಅಸಲಿಗೆ, ಜಾತಿ ಎಂದರೇನು? ಈ ಜಾತಿ ಅನ್ನುವುದು ಬೇಕು ಯಾಕೆ? ಅದರ ವಿನಾಶ ಬೇಡವೇ; ಬೇಕಲ್ಲವೇ? ಇದಲ್ಲದೆ ಬ್ರಾಹ್ಮಣರಲ್ಲಿಯೇ ಗಂಡಸರಿಗೆ ಜನಿವಾರ ಧಾರಣೆಯ ಹಕ್ಕಿದೆ, ಹೆಂಗುಸರಿಗೇಕಿಲ್ಲ ಮುಂತಾಗಿ ಅನೇಕ ಪ್ರಶ್ನೆಗಳೇಳುತ್ತವೆ. ಈ ಪ್ರಶ್ನೆಗಳು ಹೊಸದಾದುವಲ್ಲ ಮತ್ತು ಆ ಕಾರಣಕ್ಕೆ ಇವುಗಳನ್ನು ಮತ್ತೆಮತ್ತೆ ಕೇಳಿಕೊಳ್ಳಬಾರದು, ಇವುಗಳನ್ನು ಮುಂದಿಟ್ಟುಕೊಂಡು ವಾಗ್ವಾದ ನಡೆಸಬಾರದು, ಕ್ರಿಯಾಶೀಲರಾಗಬಾರದು ಎಂದೂ ಅಲ್ಲ, ಖಂಡಿತವಾಗಿಯೂ ಇಂಥ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಲೇ, ಕ್ರಿಯಾಶೀಲರಾಗುತ್ತಲೇ ಇರಬೇಕು ನಾವು.

ಆದರೆ ಕಲೆಯ ಕಾಯಕದಲ್ಲಿ ಮೈದಾಳುವ ಪ್ರತಿಮೆಗಳ, ರೂಪಕಗಳ ಪರೀಕ್ಷೆಮಾಡಲು, ಅವುಗಳನ್ನು ಕೊಯ್ದು ಬಗೆದು ನೋಡಲು ಈ ಪ್ರಶ್ನೆಗಳನ್ನು ಚಾಕುಚೂರಿಗಳಂತೆ, ಹರಿತವಾದ ಪಾಟೀಸವಾಲಿನಂತೆ ಬಳಸಿನೋಡುವುದು ತರವಲ್ಲ, ಯಾಕೆಂದರೆ ಯಾವುದೇ ಕಲಾಕೃತಿಯಲ್ಲಿ ಕಾಣಿಸಿಕೊಳ್ಳುವ ಒಳ್ಳೆಯ ಪ್ರತಿಮೆಗಳು ಯಾವಾಗಲೂ ಅರ್ಥಸ್ನಿಗ್ಧತೆಯುಳ್ಳವಾಗಿರುತ್ತವೆ, ಒಂದಕ್ಕಿಂತ ಹೆಚ್ಚು ಮೋರೆಗಳುಳ್ಳವಾಗಿರುತ್ತವೆ. ಅವುಗಳು ಅರ್ಥಸಂದಿಗ್ಧತೆಯುಳ್ಳವಾಗದಿರಬಹುದು, ಆದರೆ ಎಷ್ಟೋ ವೇಳೆ ಅನಿಶ್ಚಿತ ಅರ್ಥವುಳ್ಳವಾಗಿರುತ್ತವೆ; ಸರಳ ತರ್ಕಕ್ಕೆ ನಿಲುಕದವಾಗಿರುತ್ತವೆ ಮಾತ್ರವಲ್ಲ ಎಷ್ಟೋ ವೇಳೆ ತರ್ಕವನ್ನು ಮೀರಿದುವೇ ಆಗಿರುತ್ತವೆ; ಆದರೂ ನಮಗೆ ಆಪ್ಯಾಯಮಾನವಾಗಿರುತ್ತವೆ, ಬೋಧಪ್ರದವಾಗಿರುತ್ತವೆ, ಚೇತೋಹಾರಿಯಾಗಿರುತ್ತವೆ. ಇಂಥಲ್ಲಿ ಒಂದು ಪ್ರತಿಮೆ ಇಲ್ಲವೆ ರೂಪಕವು ಉಚಿತವಾಗಿಲ್ಲ ಎಂದು ಹೇಳಬಹುದೇ ಹೊರತು ನಾವು ಅದನ್ನು ರೂಪಿಸುವಲ್ಲಿ ಆ ಕವಿ-ಕಲಾವಿದ ಅದೇನೋ ದುರುದ್ದೇಶವನ್ನು ಹೊಂದಿದ್ದಾನೆ, ತನ್ನ ಉಪಮಾನವನ್ನೋ ಉಪಮೇಯವನ್ನೋ ಅವಮಾನಿಸುವ ಉದ್ದೇಶವನ್ನು ಹೊಂದಿದ್ದಾನೆ ಎಂದು ಹೇಳುವುದು ತುಂಬ ತಪ್ಪಾಗುತ್ತದೆ.

ಇಡಿಯ ಜಗತ್ತನ್ನೇ ತೆಗೆದುಕೊಂಡರೆ, ನಾನು ಕಂಡಂತೆ, ಎಲ್ಲಿಯೋ ಕೆಲವೇ ಕೆಲವು ಕಲಾವಿದರು, ಲೇಖಕರು (ಅಥವಾ ಹಾಗೆನಿಸಿಕೊಂಡವರು) ಮಾತ್ರ ನಿಜಕ್ಕೂ ಜಾತ್ಯಂಧರು, ಮತಾಂಧರು, ವರ್ಣಾಂಧರು ಆಗಿರುತ್ತಾರೆ. ಹೆಚ್ಚಿನ ಜನ ಕಲಾವಿದರು, ಕವಿಗಳು - ಕನಿಷ್ಠಪಕ್ಷ ತಮ್ಮ ಕಲೆಯ ನೆಲೆಯಲ್ಲಾದರೂ- ವಿಶ್ವಪ್ರೇಮವನ್ನೇ ಎತ್ತಿಹಿಡಿಯುವವರು. ಅವರ ಕಲಾಕೃತಿಗಳು ಕರಾಳವಾದ ನಿರಾಶವಾದವನ್ನು ಇಲ್ಲವೆ ದುಃಖವಾದವನ್ನು ಮುಂದಿಡುವಾಗಲೂ ಅಲ್ಲಿನ ತಲ್ಲಣದ ಹಿಂದಿನ ದ್ರವ್ಯವು ಈ ವಿಶ್ವಪ್ರೇಮವೇ ಆಗಿರುತ್ತದೆ.. ಕಲೆ ಕಾಯಕವೇ ಅಂಥದು. ಅಲ್ಲಿ ದ್ವೇಷಕ್ಕೆ ಎಡೆಯಿರುವುದಿಲ್ಲ.

ಮತ್ತೆ ಹೀಗೆಂದ ಕೂಡಲೇ, ವಿಶ್ವಪ್ರೇಮದ ದರ್ಶನ ನೀಡುವ ಕವಿಕಲಾವಿದರೆಲ್ಲರೂ ಎಲ್ಲರ ದೃಷ್ಟಿಯಲ್ಲಿಯೂ ಒಳ್ಳೆಯ ಕವಿಕಲಾವಿದರಾಗಿರುತ್ತಾರೆ ಎಂದಂತಾಗುವುದಿಲ್ಲ. ಅವರಲ್ಲಿ ನಾವು ನಮನಮಗೆ ತೋರಿದಂತೆ, ಯುಗಯುಗಕ್ಕೆ, ಕಾಲಕಾಲಕ್ಕೆ ತಕ್ಕಂತೆ, ತಾರತಮ್ಯವನ್ನು ಮಾಡುತ್ತಲೇ ಇರುತ್ತೇವೆ; ಆದರೆ, ಅವರ ಸದುದ್ದೇಶವನ್ನು ಆತ್ಯಂತಿಕವಾಗಿ ಅಲ್ಲಗಳೆಯುವಂಥ ಗೂಬೆಯನ್ನು ಅವರ ಮೇಲೆ ಕೂರಿಸುವುದಿಲ್ಲ, ಹಾಗೆ ಮಾಡಿದರೆ, ಏಟ್ಸ್, ಎಲಿಯಟ್, ಪೌಂಡ್, ದೋಸ್ತೋಯ್‌ವೆಸ್ಕಿ, ನಬಕೋವ್, ಬೆಕೆಟ್ ಅಂಥವರನ್ನಾಗಲೀ, ಪಂಪ, ರನ್ನ, ರಾಘವಾಂಕ, ಅಡಿಗ, ಮಾಸ್ತಿ ಅಂಥವರನ್ನಾಗಲೀ, ಅಷ್ಟೇಕೆ ಕುವೆಂಪು ಅವರನ್ನೇ ಆಗಲಿ, ನಾವು ಓದಲು, ಮೆಚ್ಚಲು ಆಗುವುದೇ ಇಲ್ಲ.

ಇಲ್ಲಿ ಉದಾಹರಣೆಗೆ ಸಿದ್ಧಲಿಂಗಯ್ಯನವರ ಹೆಸರಾಂತ ಪದ್ಯವೊಂದಿದೆ ನೋಡಿ, ಇಕ್ರಲಾ ವದೀರ್ಲಾ ಈ ನನ್ ಮಕ್ಕಳ ಚರ್ಮ ಎಬ್ರಲಾ ಎಂದು ಸುರುವಾಗುವಂಥದು, ಆ ಪದ್ಯವನ್ನೇ ತೊಗೊಳ್ಳಿ, ಆ ಕವಿತೆ - ವಿಶೇಷವಾಗಿ ಆದರ ಈ ಮೊದಲ ಸಾಲು - ಹೇಳುತ್ತಿರುವುದೇನನ್ನು? ಶೋಷಕರಿಗೆ ನಿಜವಾಗಿಯೂ ಇಕ್ಕಬೇಕು, ಅವರನ್ನು ಒದೆಯಬೇಕು, ಅವರ ಚರ್ಮವನ್ನು ನಿಜವಾಗಿಯೂ ಸುಲಿಯಬೇಕು ಎನ್ನುತ್ತಿದೆಯೇ ಅದು? ಹಾಗೆ ಅಕ್ಷರಶಃ ಪದ ಮತ್ತು ಅರ್ಥದ ಸಮೀಕರಣಮಾಡಿ ಪುಕ್ಕ ಪುಕ್ಕ ಮಾಡಿ ನೋಡಿದರೆ, ನಾವು ಇಲ್ಲಿ ಕಾಣುವುದು ದ್ವೇಷವನ್ನು ಮಾತ್ರ. ಆದರೆ ನಾವೆಲ್ಲರೂ ಬಲ್ಲಂತೆ ಇಲ್ಲಿರುವುದು ದ್ವೇಷವಲ್ಲ; ಬದಲಾಗಿ ಒತ್ತರಿಸಿಕೊಂಡು ಬರುತ್ತಿರುವ ಸಿಟ್ಟು. ಮತ್ತು ಆ ಸಿಟ್ಟಿನ ಹಿಂದೆ ಇರುವುದು ಎಷ್ಟೋ ಯುಗಗಳಿಂದ ನುಂಗುತ್ತ ಹತ್ತಿಕ್ಕಿಕೊಳ್ಳುತ್ತ ಬಂದಿರುವ ನೋವು, ದುಃಖ, ಸಂಕಟ. ಹೀಗೆ ಆ ಪದ್ಯದ ಸತ್ವವಾದ ನೋವು-ದುಃಖ-ಸಂಕಟಗಳೆಂಬ ಸ್ಥಾಯೀಭಾವ ಮತ್ತು ಅವುಗಳ ಸಂಚಾರೀಭಾವವಾದ ಕರುಳನೆಲೆಯ ಸಿಟ್ಟು ಹಾಗೂ ಇವೆರಡರಿಂದಾಗಿ ರೂಪುಗೊಳ್ಳುವ ನೈಜರಾಜಕೀಯ ನೆಲೆಯ ನೈತಿಕ ಆಕ್ರೋಶ, ಇವುಗಳನ್ನು ನಾವು ಕಾಣದೇಹೋದರೆ ಆ ಪದ್ಯಕ್ಕೂ, ಲೋಕಕ್ಕೂ ಅನ್ಯಾಯ ಮಾಡಿದಹಾಗೆ; ನಮಗೆ ನಾವೇ ಅನ್ಯಾಯಮಾಡಿಕೊಂಡ ಹಾಗೆ.

ಒಬ್ಬ ಬರಹಗಾರನಾಗಿ, ವೃತ್ತಿನಿರತ ರಂಗನಿರ್ದೇಶಕನಾಗಿ, ರಂಗಕಲೆಗಳ ಮೇಷ್ಟರಾಗಿ ಈ ಮಾತುಗಳನ್ನು ಆಡಿದ್ದೇನೆ ನಾನು. ಸ್ವತಃ ಬರಹಗಾರರೂ, ನಾಟಕಕಾರರೂ ಆಗಿರುವ, ಸಾಹಿತ್ಯದ ಮೇಷ್ಟರೂ, ರಂಗಭೂಮಿಯ ಅನುಭವವಿರುವವರೂ ಆಗಿರುವ ದಳವಾಯಿಯವರು ನನ್ನ ಮಾತನ್ನು ಒಪ್ಪುತ್ತಾರೆಂದು ಆಶಿಸುತ್ತೇನೆ.

ಯಾಕೆಂದರೆ, ಈಗ ಸದ್ಯ ಚರ್ಚೆಗೊಳಪಡುತ್ತಿರುವ ಶೂದ್ರತಪಸ್ವಿ ಪ್ರಯೋಗಕ್ಕೆ ನ್ಯಾಯ ಸಲ್ಲಿಸಬೇಕೆಂದಾದರೆ, ಜನಿವಾರಪ್ರದಾನದ ಕ್ರಿಯೆಯನ್ನು ಒಳಗೊಂಡಂತೆ ಅದರಲ್ಲಿನ ಪ್ರತಿಮಾವಳಿಯನ್ನು ಏಕಾರ್ಥದ ಕಡೆಗೆ ಎಳೆಯಬಾರದು ನಾವು. ಅಥವಾ ಒಂದೊಮ್ಮೆ ಬಡಿಗೇರ ಅವರಿಗೋ ನೀನಾಸಮ್ ತಿರುಗಾಟದವರಿಗೋ (ಅಥವಾ ಇಬ್ಬರಿಗೂ) ಈ ನಾಟಕದ ತಿರುಳನ್ನು ಹಿಡಿಯಲಾಗಿಲ್ಲ ಎಂದೇ ನಮಗೆ ನಿಜಕ್ಕೂ ಅನ್ನಿಸಿದೆ ಎಂದಿಟ್ಟುಕೊಳ್ಳಿ, ಆಗಲೂ ಅದನ್ನೆಲ್ಲ ಅದು ದುರುದ್ದೇಶಪೂರಿತವಾದ ಕೆಲಸ, ಒಂದು ಪಿತೂರಿ, ಹುನ್ನಾರ ಎಂದು ಬಣ್ಣಿಸಹೊರಡುವುದು ಖಂಡಿತ ತೂಕದ ವಿಮರ್ಶೆಯಾಗಲಾರದು.

ಇಷ್ಟಾಗಿ, ಪ್ರಯೋಗವೊಂದನ್ನು ಪ್ರಶ್ನಿಸುವುದಿದ್ದರೆ ದಳವಾಯಿಯವರು ಅದರ ನಿರ್ದೇಶಕರನ್ನು ಉದ್ದೇಶಿಸಿ ಮಾತನಾಡಬೇಕು. ಬದಲಾಗಿ ಅವರು ಇದೆಲ್ಲ ನೀನಾಸಮ್ ಸಂಸ್ಥೆಯ ಮತ್ತು ಅಕ್ಷರ ಅವರ ಪಿತೂರಿ ಎಂಬ ಧ್ವನಿಬರುವಂತೆ ಬರೆಯುವುದು ಸರಿಯಲ್ಲ. ನಾನು ನೀನಾಸಮ್ಮಿಗೆ ಕಳೆದ ಮೂವತ್ತು ವರ್ಷಗಳಿಂದ ಹೋಗಿಬರುತ್ತಿದ್ದೇನೆ; ಅಲ್ಲಿನ ನಾಟಕಶಾಲೆಯಲ್ಲಿಯೂ ತಿರುಗಾಟಕ್ಕೂ ನಾಟಕ ನಿರ್ದೇಶನ ಮಾಡಿದ್ದೇನೆ; ಹತ್ತುಹಲವು ರಂಗಕಮ್ಮಟ ನಡೆಸಿಕೊಟ್ಟಿದ್ದೇನೆ.. ಆದರೆ, ಒಮ್ಮೆಯೂ ನನಗೆ ಅಲ್ಲಿಯ ಯಾರೇ ಆಗಲಿ 'ನೀನು ಇಂಥ ನಾಟಕ ತೆಗೆದುಕೊಳ್ಳಬೇಕು: ಅದನ್ನು ಹೀಗೆ ಆಡಿಸಬೇಕು; ಇಂಥ ಸಂದೇಶ, ಇಂಥ ಮತ-ಅಭಿಮತ ಅದರಿಂದ ಹೊಮ್ಮುವಂತೆ ಮಾಡಬೇಕು; ಈ ತರಗತಿ, ಈ ಕಮ್ಮಟವನ್ನು ಹೀಗೆಹೀಗೆ ನಡೆಸಿಕೊಡಬೇಕು' ಎಂದು ಸಂಸ್ಥೆಯ ವತಿಯಿಂದ ಹೇಳಿದುದಿಲ್ಲ.

ಮೇಲಾಗಿ, ನಾನು ರಂಗಭೂಮಿಗೆ ಕಾಲಿಟ್ಟಾಗಿನಿಂದ - ಅಂದರೆ ಸುಮಾರು ಮೂವತ್ತೈದು ವರ್ಷಗಳಿಂದ - ನೀನಾಸಮ್ ಸಂಸ್ಥೆಯ ಯಾವುದೇ ಚಟುವಟಿಕೆಯಾಗಲಿ ಅದು ಆಡುವ ಯಾವುದೇ ನಾಟಕವಾಗಲಿ, ನನ್ನಂಥವರು 'ಜನವಿರೋಧೀ' ಎಂದು ಕರೆಯಬಹುದಾದಂತೆ ಆದುದು ನನಗೆ ಗೊತ್ತಿಲ್ಲ. ಅಲ್ಲಿನ ಇಂಥ ಮುಕ್ತತೆ ಮತ್ತು ಋಜುತ್ವದ ಅನುಭವವಾಗುತ್ತ ಬಂದಿರುವುದು ನನಗೆ ಮಾತ್ರವಲ್ಲ; ಅಲ್ಲಿ ನಾಟಕಮಾಡಿರುವ, ಪಾಠಮಾಡಿರುವ ಎಲ್ಲರ ಮಟ್ಟಿಗೂ ಈ ಮಾತು ನಿಜ ಎಂಬುದನ್ನು ಬಲ್ಲೆ. ಋಜುವಾದ ಒಂದು ಸಂಸ್ಥೆಯ ಮೇಲೆ ದಳವಾಯಿಯವರು ಹೊರಿಸಿರುವಂಥ ಸಲ್ಲದ ಆರೋಪಬಂದಾಗ ಅಲ್ಲಿ ಕೆಲಸ ಮಾಡಿರುವ ನನ್ನಂಥವರು - ಸಿ. ಬಸವಲಿಂಗಯ್ಯನವರು, ನಟರಾಜ ಹೊನ್ನವಳ್ಳಿಯವರು ಮತ್ತು ನನ್ನ-ಅವರಂಥ ಇತರರು - ನಿಜಸ್ಥಿತಿ ಏನೆಂದು ಹೇಳಬೇಕು; ಹಾಗೆ ಮಾಡುವುದು ನಮ್ಮ ಕರ್ತವ್ಯವಾಗುತ್ತದೆ.


ಕಡೆಯದಾಗಿ ಒಂದು ಮಾತು. ಕನ್ನಡದ ಕೆಲವು ವಲಯಗಳಲ್ಲಿ ಇಂದು ನಡೆಯುತ್ತಿರುವ ಚರ್ಚೆಗಳ ರೀತಿಯನ್ನು ನೋಡಿದರೆ ದಿಗಿಲಾಗುತ್ತದೆ. ಯಾರೊಡನೆ ನಮಗೆ ಭಿನ್ನಾಭಿಪ್ರಾಯವಿದೆಯೋ (ಅಥವಾ ಇದೆಯೆಂದು ನಾವೆಂದುಕೊಂಡಿದ್ದೇವೋ) ಅವರ ಮೇಲೆ ಸಗಟುಮಾತಿನಲ್ಲಿ ತಪ್ಪುಹೊರಿಸುವುದು, ಹುನ್ನಾರಿಗರೆಂದು ಅವರನ್ನು ಬೈಯುವುದು, ಇದೇ ಚರ್ಚೆ ಎಂದು ನಾವು ಭ್ರಮಿಸಿಕೊಳ್ಳುತ್ತಿರುವಂತಿದೆ. ಒಬ್ಬರು ಆಡುತ್ತಿರುವ ಮಾತನ್ನು ಸಾವಧಾನವಾಗಿ ಕೇಳಿಸಿಕೊಂಡು, ಮಾಡುತ್ತಿರುವ ಕೆಲಸವನ್ನು ಸಾವಧಾನವಾಗಿ ನೋಡಿ, ಅದರಲ್ಲಿ ಒಪ್ಪಿಕೊಳ್ಳಬಹುದಾದನ್ನು ಒಪ್ಪಿಕೊಂಡು, ಟೀಕಿಸಬೇಕಾದ್ದನ್ನು ಟೀಕಿಸುವ ತೂಕದ ವಿಮರ್ಶೆಯ ರೀತಿನೀತಿಗಳನ್ನೇ ನಾವು ಮರೆತುಬಿಟ್ಟಂತಿದೆ. ಹಾಗಾಗಿ ಈ ಲೇಖನವನ್ನು ನಾನು ಸುರುಮಾಡಿದ್ದೇ ಅಂಥ ಒಂದು ಆತ್ಮವಿಮರ್ಶೆಯಿಂದ. ನಮಗೆ ಬೇಕಾದ್ದು ಸಗಟುಮಾತಲ್ಲ; ಮಾತುಕತೆ, ಮದ್ದಿನಂಥ ಟೀಕೆ.

• ರಘುನಂದನ

...ಯಜ್ಞೋಪವೀತ ಹಾಕಿದ ...ಶೂದ್ರ ತಪಸ್ವಿ ಹೇಗೆ ಕಾಣಬಹುದು?

...ತೆ ತಪ್ಪು ನಿರ್ದೇಶಕರೇ ಮಾಡಿದರೂ ತಪ್ಪೆ. ಇದರಿಂದ ಯಾವ ...ರಂಗ ರೂಪಕ ನಿರ್ಮಾಣವಾಗಬಹುದು? ಕುವೆಂಪು ಅವರ ಆಶಯಕ್ಕೆ ...ವಿರುದ್ಧವಾದುದಲ್ಲವೇ? ಒಳ್ಳೆಯ ಫಲಿತ ಒಂದು ಸಂಸ್ಥೆಗೆ ಬಂದಂತೆ ...ಅಪಾರ್ಥ ವಿಚಾರಗಳೂ ಒಂದು ಸಂಸ್ಥೆಗೆ ಸಹಜವಾಗಿಯೇ ...ಒದಗುತ್ತವೆ. ಈ ರಂಗಚರ್ಚೆ ನಡೆಯುವುದು ಕುವೆಂಪು ...ನ್ನು ಪುನಾರಚಿಸಿಕೊಳ್ಳಲು ಅಗತ್ಯವಾದುದು. ನಾನು ...ರ್ಶಿಸುವ ನನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡೂ ರಂಗಪಠ್ಯ ...ಮು ಅಪಾರ್ಥ ಆಗದಿರಲೆಂಬ ಕಾರಣಕ್ಕೆ ಹೇಳಿದ್ದೇನೆ. ಶೂದ್ರ ...ಯಂಥ ನಾಟಕವೇ ಒಂದು ಸಾಮಾಜಿಕ ಆಕೃತಿಯ ವಿಮರ್ಶೆ. ...ನ್ನ ಅಭಿನಯಿಸಿದರೇ ಸಾಕು. ಅದಕ್ಕೆ ಹೊಸದಾಗಿ ಏನನ್ನೂ ...ುವ ಅಗತ್ಯವಿಲ್ಲ ಎನಿಸುತ್ತದೆ. ಇದು ನನ್ನ ಸ್ಪಷ್ಟ ನಿಲುವು. ...ನ್ನು ತಾವು ಕಡೆಯ ಭಾಗದಲ್ಲಿ ನಾನು ಬರೆದುಕೊಳ್ಳದೇ ...ವಿಷಯಗಳನ್ನೆಲ್ಲ ಆರೋಪಿಸಿದ್ದೀರಿ. ಹಾಗೆಲ್ಲಿ ಬರೆದಿದ್ದೇನೆ? ...ಲೇಖನದ ವಿಷಯಗಳನ್ನೇ ತಾವು ಇಷ್ಟೊಂದು ಚೆನ್ನಾಗಿ ತಿರುಚಿರುವುದಕ್ಕೆ ...ದಗಳು. ಈ ಬಗೆಯ ತಿರುಚುವಿಕೆಯಿಂದ ಏನೂ ಸಾಧನೆ ಸಾಧ್ಯವಿಲ್ಲ. ...ದೇ ತಿರುಚುವಿಕೆ ಹರಾಜು-ಹರಕೆಯಿಂದ ನೀವು ಸಪೋರ್ಟ್ ಮಾಡಿ ...ರುವ ಇಬ್ಬರ ಪ್ರತಿಕ್ರಿಯೆಗಳಲ್ಲೂ ಇವೆ. ನಿಮಗೆ ಹರಕೆ ಒಂದು ರೀತಿ ...ತ್ತೆ. ನನಗೆ ಒಂದು ರೀತಿ ಕಾಣುತ್ತೆ. ನೀವು ಎಷ್ಟೇ ತೌಡು ಕುಟ್ಟಿದರೂ ...ಒಂದು ಸಾಮಾಜಿಕ ಅನಿಷ್ಟ ಎಂಬ ...ಸಿಂಕೆ ಸ್ಪಷ್ಟ. ಇಂಥ ಮಾತು ಕೇಳಿದ ...ನಿಮ್ಮಂಥ ಬುದ್ಧಿವಂತರು ಏನೇನೋ ...ಡುತ್ತೀರಿ. ಯಾರ್ಯಾರದೊ ವಿಚಾರ ...ಅಳಿದು ಸುರಿದು ಒಟ್ಟಾರೆ ದಿಕ್ಕು ...ತ್ತೀರಿ. ತುಂಬಾ ಸಂತೋಷ. ನೀವೂ ...ತ್ತಲೇ ಚಲಿಸಲು ಯತ್ನಿಸುತ್ತಿದ್ದೀರಿ. ... ಅತ್ತಲೇ ಹೋಗುತ್ತಿದ್ದೇವೆಂದು ...ವೆ.

...ಬ್ರಹ್ಮಣ್ಯ ನಾಗಲಮಡಿಕೆಗಳು ಬದ ...ಯೋಗ್ಯವಾದ ಜೀವನ ಬರಲಿ ಅಂತ ...ಸೊ ನಮ್ಮಂಥವರ ಬಯಕೆಗಳನ್ನೇ ತಾವು ಅಕ್ಷರಾಸ್ತ್ರಗಳಿಂದ ಹತ್ತಿಕ್ಕಲು ...ತುತ್ತಿದ್ದೀರಿ ಎಂದರೆ ನಾವು ಒಂದು ರೀತಿ ನಿಮ್ಮಂಥವರ ಬಗ್ಗೆ ಹೆಚ್ಚು ...ಗಳನ್ನಿಟ್ಟುಕೊಳ್ಳುವುದು ಒಳ್ಳೆಯದು. ಹರಕೆಯಲ್ಲಿರುವ ಸಮಸ್ಯೆಯನ್ನು ...ಯೇ ಅಲ್ಲ ಎನ್ನುವ ತಮ್ಮ ಆಶಯಗಳು ದಿಗ್ಭ್ರಮೆ ಉಂಟುಮಾಡುತ್ತವೆ. ...ಪಠ್ಯದ ಸಾಂಸ್ಕೃತಿಕ ಆಕೃತಿಗೂ ಹರಕೆಯಂಥ ಸಾಮಾಜಿಕ ಆಕೃತಿಗೂ ...ಸಗಳಿರಬಹುದು. ಆದರೆ ಅವು ಒಂದಕ್ಕೊಂದು ಪೂರಕ. ಚರ್ಚೆ ...ನೆ ಹುಟ್ಟುವುದಿಲ್ಲ. ಅಕ್ಷರ ಅವರು ಹರಕೆ-ಹರಾಜಿನಲ್ಲಿ ಮಾಧ್ಯಮಗಳ ಹರಿಹಾಯಲು ತೊಡಗಿದ ಆಶಯವಾದರೂ ಯಾಕೆ? ಅದರ ...ಇಲ್ಲ ಇದರ ಪರವೂ ಇಲ್ಲ ಎಂದರೆ ಚರ್ಚೆಯ ಅಗತ್ಯವಾದರೂ ಏನಿತ್ತು? ಖಚಿತತೆಯ ನಡೆಯೋ? ಕನ್‌ಪ್ಯೂಷನ್ನೊ? ಎಂಬ ಅನುಮಾನಗಳು ಎದುರಾಗುತ್ತವೆ. ಅವರೇನೂ ಸವಣೂರಿನ ಮಲ ಸುರಿದುಕೊಂಡದ್ದರ ಬಗ್ಗೆ ಚರ್ಚಿಸುತ್ತಿಲ್ಲ. ವೈದೇಹಿ ಅವರ ಚರ್ಚೆಯಲ್ಲಿ ಮುಂದುವರೆದು ಅನೇಕ ವಿಷಯಗಳನ್ನು ಚರ್ಚಿಸಿದ್ದಾರೆ.



ರಂಗಪ್ರಯೋಗದ ಪರಿಣಾಮಗಳಿಗೂ ಅಕ್ಷರ ಅವರಿಗೂ ಸಂಬಂಧ ಇಲ್ಲವೇ? ತಾವು ಹೇಳಿರುವಂತೆ ಬೇರ್ಪಡಿಸಿ ನೋಡಲಾಗುತ್ತದೆಯೇ? ನೀನಾಸಂ, ಅಕ್ಷರ ಪ್ರಕಾಶನ, ಸಾಕ್ಷಿ, ಸುಬ್ಬಣ್ಣ ಅಲ್ಲಿನ ರಂಗಪ್ರಯೋಗಗಳ ಬಗ್ಗೆ ನಿಮ್ಮಷ್ಟು ಗೊತ್ತಿಲ್ಲದಿದ್ದರೂ ನನಗೂ ಅಷ್ಟಿಷ್ಟು ಗೊತ್ತು. ಆದರೆ ತಮ್ಮ ಅಲ್ಲಿನ ಪ್ರತಿಭೆಗಳ ಬಗ್ಗೆ ಪ್ರತಿಕ್ರಿಯೆಯ ಧ್ವನಿ ಅಕ್ಷರ ಅವರು ಪ್ರಶ್ನಾತೀತವಾದ ಚಿಂತಕರು ಎಂಬುದನ್ನು ನನಗೆ ಬೋಧನೆ ಮಾಡಲು ತೊಡಗಿದಂತಿದೆ. ಒಂದು ಆಚರಣೆ ಮತ್ತು ಅದಕ್ಕೆ ಅಕ್ಷರ ಅವರ ಪ್ರತಿಕ್ರಿಯೆ ಪರ-ವಿರೋಧಗಳ ಆಚೆ ಅನೇಕ ಪ್ರಶ್ನೆಗಳನ್ನು, ಸ್ಪಷ್ಟನೆಗಳನ್ನು, ಅನುಮಾನಗಳು, ಅವಮಾನಗಳನ್ನು ಬಿಂಬಿಸುತ್ತದೆ. ತಾವೇ ನಿರೂಪಿಸಿರುವಂತೆ ನೀನಾಸಂನಲ್ಲಿ ಪ್ರಜಾಪ್ರಭುತ್ವ ಇದೆ ಎಂದು ತಿಳಿಸಿದ್ದೀರಿ. ಚರ್ಚೆ ಮತ್ತು ಅದರ ಪರ ವಿರೋಧದ ನಿಲುವುಗಳೆಲ್ಲವೂ ಪ್ರಜಾಪ್ರಭುತ್ವದ ವ್ಯಾಪ್ತಿಗೆ ಬರುತ್ತದೆ ಎಂದು ನಾನು ಭಾವಿಸಿರುವೆ. ಹರಕೆಯ ವಿರೋಧಾತ್ಮಕ ನೆಲೆಗಳಿಗೆ ತಾವಿಬ್ಬರೂ ವಿರೋಧಿಗಳಾಗಿರುವುದು ಪ್ರತಿಭಟನಾಕಾರರ ನಿಲುವುಗಳನ್ನೇ ಜೀವವಿರೋಧಿ ನಿಲುವು, ಸಮಾಜ ಘಾತುಕ ನಿಲುವುಗಳು ಎಂಬಂಥೆ ಗ್ರಹಿಸಿದ್ದು ಮಾತ್ರ ನನಗೆ ಆತಂಕವನ್ನುಂಟು ಮಾಡಿತು.

ಜಿ.ರಾಜಶೇಖರ್ ಮತ್ತು ಫಣಿರಾಜ್ ಪ್ರತಿಕ್ರಿಯೆ

ಎಂಜಲು ಬಿಟ್ಟವರ ನೆಲೆ, ಅದರ ಮೇಲೆ ಉರುಳುತ್ತಿರುವವರ ನೆಲೆ ನೀವು ವ್ಯಾಖ್ಯಾನಿಸುತ್ತಿರುವಷ್ಟು ಸುಲಭ, ಸರಳ ಅಲ್ಲ. ಸಂರಕ್ಷಿತ ನೆಲೆಯಲ್ಲಿ ತಾವು ಸಂಸ್ಕೃತಿಯನ್ನು ವ್ಯಾಖ್ಯಾನಿಸಲು ತೊಡಗಿದ್ದೀರಿ. ಆದರೆ ಸಂಸ್ಕೃತಿ ಮ್ಯೂಸಿಯಂ ಅಲ್ಲ. ಉರುಳುವ ದಾಸ್ಯ ಉರುಳುವವನಿಗೇ ಅಸಹ್ಯವೆನಿಸದ ಮಾತ್ರಕ್ಕೆ ಅದು ಶ್ರೇಷ್ಠ ಎಂದು ಭಾವಿಸುವುದು ವ್ಯಾಖ್ಯಾನಕ್ಕೆ ಸಿಗದ ಮೂರ್ಖತನ. ಹಾಗೆಂದ ತಕ್ಷಣವೇ ಪಾಶ್ಚಾತ್ಯ ಚಿಂತನೆಯೇ? ಯಥಾಸ್ಥಿತಿಗಾದರೆ ಪಾಶ್ಚಾತ್ಯ ಚಿಂತನೆ ಬೇಡ. ಉಳಿದದ್ದಕ್ಕೆ ಪಶ್ಚಿಮವೇ ಗತಿಯೇ? ಕುಂತವ, ನಿಂತವ, ನೋಡುವವರ ಬಗ್ಗೆ ತಾವು ಚಿಂತಿಸುತ್ತಿದ್ದೀರಿ. ನಾವು ಜೀವಂತವಾಗಿದ್ದೂ ಮಲಗಿರುವವರ ಬಗ್ಗೆ ಯೋಚಿಸುತ್ತಿದ್ದೇವೆ. ಈಗ ಹೇಳಿ ಯಜ್ಞೋಪವೀತ ಧರಿಸಿದ ಶೂದ್ರ ತಪಸ್ವಿ ನನ್ನಂಥವರಿಗೆ ಕಾಣುವುದೇ ಬೇರೆ. ನಿಮ್ಮಂಥವರಿಗೆ ಕಾಣುವುದೇ ಬೇರೆ. ಸಾಂಸ್ಕೃತಿಕ ವಿವೇಕ ಇರುವ ಕಾರಣಕ್ಕೆ ಇಂತಹ ಆಕೃತಿಗಳನ್ನು ವಿಕೃತಿಗಳಾಗದಂತೆ ಮುನ್ನಡೆಸಬೇಕಾಗಿದೆ ಎಂದೆನಿಸುತ್ತದೆ. ತಾವು ಈ ಚರ್ಚೆಯಲ್ಲಿ ಶ್ರದ್ಧೆಯಿಂದ ಭಾಗವಹಿಸಿದ್ದಕ್ಕೆ ಧನ್ಯವಾದಗಳು.

• ರಾಜಪ್ಪ ದಳವಾಯಿ

ಮಾರ್ಚ್ 16, 2011 ರ ಸಂಚಿಕೆಯಲ್ಲಿ ಪ್ರಕಟವಾಗಿರುವ ರಾಜಪ್ಪ ದಳವಾಯಿಯವರ 'ರಂಗಭೂಮಿ ಸಮಕಾಲೀನ ಸ್ಪಂದನ' ಲೇಖನವನ್ನು ಓದಿ ನನಗೆ ಖೇದವಾಗಿದೆ. ನಾನು ಇಡೀ ಲೇಖನದ ಕುರಿತಾಗಿ ಮಾತನಾಡುತ್ತಿಲ್ಲ, ಅದರಲ್ಲಿ ನೀನಾಸಂ, ಅದರ ವ್ಯವಸ್ಥೆ ಮತ್ತು ಅದು ಕೊಡುತ್ತಿರುವ ರಂಗಶಿಕ್ಷಣದ ಬಗ್ಗೆ ಅವರಿಗಿರುವ ಅನುಮಾನಗಳ ಕುರಿತಷ್ಟೇ ಮಾತನಾಡುತ್ತಿದ್ದೇನೆ.

ಯಾಕೆಂದರೆ, ನೀನಾಸಂ ತಿರುಗಾಟದ ಈ ಸಾಲಿನ ನಾಟಕಗಳಲ್ಲಿ ಶೂದ್ರ ತಪಸ್ವಿ ನಾಟಕವನ್ನು ನಾನೇ ನಿರ್ದೇಶನ ಮಾಡಿರುವುದರಿಂದ, ಮತ್ತು ಅದರ ಬಗ್ಗೆ ಪ್ರಸ್ತುತ ಅವರ ಲೇಖನದಲ್ಲಿ ಈ ವಿಷಯ ಪ್ರಸ್ತಾಪವಾಗಿರುವುದರಿಂದ ಇದನ್ನು ಬರೆಯಲೇಬೇಕಾಗಿದೆ.

ಅಕ್ಷರರವರ ವೈಯಕ್ತಿಕ ಅಭಿಪ್ರಾಯಗಳಿಗೂ ಒಟ್ಟಾರೆ ನೀನಾಸಂ ರಂಗ ಶಿಕ್ಷಣದ ವ್ಯವಸ್ಥೆಗೂ ಯಾವ ಸಂಬಂಧವೂ ಇರುವುದಿಲ್ಲ. ಅಲ್ಲಿ ಎಲ್ಲವೂ, ಎಲ್ಲರೂ ಸರಿಸಮಾನವಾದದ್ದು. ಇನ್ನು ಹೊರನಿಂತು ನೋಡುವವರಿಗೆ ಅದೊಂದು ಅಗ್ರಹಾರ, ಬ್ರಾಹ್ಮಣರ ಕೇರಿ ಎಂಬ ಸಂಕುಚಿತ ದೃಷ್ಟಿಯನ್ನೇ ಹೊಂದಿದ್ದಾರೆ. ಬಹುಶಃ ರಾಜಪ್ಪ ದಳವಾಯಿಯವರಿಗೂ ಆ ಪೂರ್ವಗ್ರಹದಿಂದ ಬರೆದಿರಬಹುದು.



ಹೀಗೆ ಹೇಳಿದ್ದರ ಕಾರಣ ಇಷ್ಟೆ. ಇಡೀ ಶೂದ್ರ ತಪಸ್ವಿ ನಾಟಕವನ್ನು ಅಕ್ಷರವರೇ ನನಗೆ ಹೇಳಿಮಾಡಿಸಿದ್ದಾರೆ ಎಂದು ಅವರು ತಿಳಿದುಕೊಂಡಿರುವಹಾಗಿದೆ. ರಾಜಪ್ಪ ದಳವಾಯಿಯವರೇ ಶೂದ್ರತಪಸ್ವಿ ರಂಗಕೃತಿ ಸಂಪೂರ್ಣವಾಗಿ, ಸ್ವಸಂಪೂರ್ಣವಾಗಿ ನನ್ನ ಕೃತಿಯಾಗಿದೆ. ಅದಕ್ಕೆ ನಾನೇ ಹೊಣೆ. ನಿಮಗೇನೇ ಅನುಮಾನಗಳಿದ್ದರೂ ನೀವು ನೇರವಾಗಿ ನನ್ನನ್ನು ಕೇಳಬಹುದು. ಈ ಮೂಲಕವಾಗಿ ನೀವು ಅಕ್ಷರರವರನ್ನು ಮತ್ತು ನೀನಾಸಂ ರಂಗ ಶಿಕ್ಷಣವನ್ನು ಪ್ರಶ್ನಿಸುವ ಅಗತ್ಯವಿಲ್ಲ.

ಶೂದ್ರತಪಸ್ವಿ ನಾಟಕವನ್ನು ಪ್ರಾಮಾಣಿಕ ಪ್ರೀತಿಯಿಂದ ಮತ್ತು ಆ ರಸಋಷಿ, ಲೋಕಕವಿ, ಕುವೆಂಪುರವರ ಮೇಲಿನ ಅಪಾರವಾದ ಗೌರವದಿಂದಲೇ ಮಾಡಿದ್ದೇನೆ ಮತ್ತು ಅದರ ಒಟ್ಟಾರೆ ಮಾನವತಾವಾದವನ್ನು, ವಿಶ್ವಮಾನವ ತತ್ವಗಳನ್ನು ಆಧ್ಯಾತ್ಮಿಕ ಚಿಂತನೆಯನ್ನು ಇನ್ನೂ ಎಷ್ಟೋ ವಿಷಯಗಳನ್ನು ಅದರಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಶೂದ್ರತಪಸ್ವಿ ರಂಗಕೃತಿ ಕುವೆಂಪುರವರ ರಾಮಾಯಣದರ್ಶನಂ ಮಹಾಕಾವ್ಯದ ಮುಂದುವರೆದ ಭಾಗವಾಗಿ ಚಿತ್ರಿಸಿದ್ದೇನೆ. ನನ್ನ ಕೃತಿ, ವಿಕೃತಿಯೋ, ಸುಕೃತಿಯೋ ನನಗೆ ತಿಳಿದಿಲ್ಲ. ಅದು ನೋಡುಗನ ವಿಶಾಲ ಅಥವಾ ಸಂಕುಚಿತ ದೃಷ್ಟಿಯನ್ನು ಅವಲಂಬಿಸಿದೆ. ಈಗಾಗಲೇ ಶೂದ್ರತಪಸ್ವಿ ರಂಗಕೃತಿ ಕರ್ನಾಟಕದಾದ್ಯಂತ 56 ಪ್ರದರ್ಶನಗಳನ್ನು ಕಂಡಿದೆ ಎಂದು ಹೇಳಲಿಚ್ಛಿಸುತ್ತೇನೆ.

ಕಡೆಯದಾಗಿ ಇನ್ನೊಂದು ವಿಷಯ, ಯಾವುದೋ ಒಂದು ರಂಗ ಪ್ರಯೋಗವನ್ನು ಆಧಾರವಾಗಿಟ್ಟುಕೊಂಡು ಆ ಪ್ರಯೋಗವನ್ನು ಮಾಡಿಸಿದಂತಹ ಸಂಸ್ಥೆಯ ಆದರ್ಶ, ತತ್ವಗಳನ್ನು ಅಳೆಯುವುದು ಸರಿಯಲ್ಲ.


• ಮಂಜುನಾಥ ಎಲ್. ಬಡಿಗೇರ

ಬೆಂಗಳೂರು

12

...ಂಡಿದೆ. ಸಾಮಾನ್ಯವಾಗಿ ಅವನ್ನು ಸೀಸ, ಕಾಂಕ್ರೀಟ್ ಹಲವು ಪದರಗಳಲ್ಲಿ ತುಂಬಿಸಿ ಸಮುದ್ರದ ... ಹೂಳಲಾಗುತ್ತದೆ. ಆದರೆ ಫುಕುಶಿಮಾದ ...ರುಗಳಿಗೆ ಡಿಸೈನ್ ಮತ್ತು ಯಂತ್ರೋಪಕರಣ ಸರಬರಾಜು ಮಾಡಿದ ಅಮೆರಿಕದ ಜೀ... ಈ ತ್ಯಾಜ್ಯಗಳನ್ನು ಸ್ಥಾವರದ ಸಮೀಪವೇ ...ಮೇಲ್ಭಾಗದಲ್ಲಿ "ವೇಸ್ಟ್‌ಪಾಂಡ್" ನಲ್ಲಿ ಹೂತಿ ...ಡಿಸೈನ್ ಕೊಟ್ಟಿದೆ. ಒಂದು ವೇಳೆ ಈ ವೇಸ್ಟ್ ...ಗೆ ಬೆಂಕಿ ಹತ್ತಿಕೊಂಡರೆ ಆಗುವ ಸ್ಫೋಟದಿಂದ ...ಬಿಲ್‌ಗಿಂತ ಹತ್ತು ಪಟ್ಟು ಹೆಚ್ಚಿನ ಅನಾಹುತ ...ೆ. ಅಲ್ಲಿಂದ 188 ಕಿಮಿ ಸುತ್ತಲಿರುವ ಜನರನ್ನೆಲ್ಲಾ ...ಮಾಡಿಸಬೇಕಾಗುತ್ತದೆ. ಈಗಾಗಲೇ ಅಲ್ಲಿಗೂ ... ಕೆನ್ನಾಲಗೆಗಳು ಚಾಚುತ್ತಿವೆ ಎಂಬ ವರದಿಗಳು ...ವೆ.

...ಗೆ ಅಣುಸ್ಥಾವರಗಳಿಂದಾಗಿ ಇಡೀ ಜಪಾನ್ ಈಗ ...ಯ ಮೇಲೆ ಕೂತಂತಾಗಿದೆ. ಇವೆಲ್ಲವೂ ...ತ್ರವೇನಾಗಿರಲಿಲ್ಲ. ಅಣುಸ್ಥಾವರದಲ್ಲಿ ಅಪಾಯಗಳು ...ದುರಂತದ ಎಚ್ಚರಿಕೆಯನ್ನು ಸಣ್ಣಪುಟ್ಟ ಅವಘಡದ ...ಕ ಕೊಡುತ್ತಲೇ ಬರುತ್ತಿದ್ದವು. ಆದರೆ ಅಗೆಲ್ಲಾ ...ಳೇ ಸುಳ್ಳುಗಳನ್ನು ಹೇಳಿ ಜನರ ಬಾಯಿ ಮುಚ್ಚಿಸಿತು. ... ಈ ಅಣುಸ್ಥಾವರಗಳ ಮಾರುಕಟ್ಟೆ ಹಲವು ಲಕ್ಷ ...ಡಾಲರ್‌ಗಳದ್ದು. ಇದಕ್ಕಾಗಿ ತಮ್ಮ ತಮ್ಮ ದೇಶಗಳ ...ಗಳನ್ನೇ ತಮ್ಮ ಕೈಯಲ್ಲಿಟ್ಟುಕೊಂಡಿರುವ ಬೃಹತ್ ...ಪ್ರೀಯ ಕಂಪನಿಗಳು ಹೊಂಚುಹಾಕುತ್ತಿವೆ. ಇಂದು ...ಲ್ಲಿ ಸ್ಫೋಟಕ್ಕೊಳಗಾದ ನಾಲ್ಕೂ ಸ್ಥಾವರಗಳನ್ನು ...ಯೋ ಎಲೆಕ್ಟ್ರಿಕ್ ಪವರ್ ಕಂಪನಿ ಎಂಬ (TEPCO) ...ವಹಿಸ್ಕೆ ನಿರ್ವಹಿಸುತ್ತಿತ್ತು. ಜಪಾನಿನ ಒಟ್ಟಾರೆ ವಿದ್ಯುತ್ ... ಶೇ.30ರಷ್ಟು ಅಣು ವಿದ್ಯುತ್ತಿನಿಂದ ಉತ್ಪಾದಿತವಾಗು...ದರಲ್ಲಿ ಶೇ.18ರಷ್ಟನ್ನು TEPCO ಕಂಪನಿಯ ...ವಾದ ಸ್ಥಾವರಗಳೇ ಉತ್ಪಾದಿಸುತ್ತಿದ್ದವು. ಅದಕ್ಕೆ ...ತಕರಣ ಮತ್ತು ಡಿಸೈನ್‌ಗಳನ್ನು ಸರಬರಾಜು ... ಅಮೆರಿಕದ General Electric (GE) ...ಕೊಂಡಿದೆ, ಅಮೆರಿಕದಲ್ಲಿ ಟೆಕ್ಸಾಸ್ ಪ್ರಾಂತ್ಯದಲ್ಲಿ ...ಸ್ತಿರುವ ಅಣುಸ್ಥಾವರವನ್ನು ನಿರ್ಮಿಸುತ್ತಿರುವುದು



ಧರೆಗೆ ಬೆಂಕಿ ಹಚ್ಚಿರುವ ಅಣುಶಕ್ತಿ ಕಂಪನಿಗಳು

ಜಪಾನಿನ ಈ TEPCO ಕಂಪನಿ!! ಇವೆಲ್ಲಕ್ಕೂ ಇತರ ಉಪಕರಣಗಳನ್ನು ಸರಬರಾಜು ಮಾಡುತ್ತಿರುವುದು ತೋಶಿಬಾ, ಶಾ, ಸ್ಟೋನ್ ಮತ್ತು ವೆಬ್‌ಸ್ಟರ್ ನಂಥಾ ಕಂಪನಿಗಳೇ. ಈ ಎಲ್ಲಾ ಕಂಪನಿಗಳು ಹುಟ್ಟುಹಾಕಿದ ನ್ಯೂಕ್ಲಿಯರ್ ಎನರ್ಜಿ ಇನ್‌ಸ್ಟಿಟ್ಯೂಟ್ (NEI) ಸಂಸ್ಥೆಯು ಕೊಡುವ ವರದಿಗಳನ್ನೇ ಅಧಿಕೃತವೆಂದು ಸರ್ಕಾರಗಳು ಒಪ್ಪಿಕೊಳ್ಳುತ್ತವೆ. ಈ ಸಂಸ್ಥೆಯ ಮಾಜಿ ಕಾರ್ಯದರ್ಶಿಯೇ ಅಮೆರಿಕ ಸರ್ಕಾರದ ಇಂಧನ ಸಲಹೆಗಾರನಾಗುತ್ತಾನೆ. ಈ ಎಲ್ಲಾ ಕಂಪನಿಗಳ ಮಾರುಕಟ್ಟೆಯನ್ನು ಹೆಚ್ಚಿಸಲೆಂದೇ ದುರಂತಗಳ ಗುಟ್ಟನ್ನು ಮುಚ್ಚಿಡುತ್ತಾ ಎಲ್ಲಾ ದೇಶಗಳ ಸರ್ಕಾರಗಳು ಅಣುವಿದ್ಯುತ್ತೇ ಅತ್ಯಂತ ಸುರಕ್ಷಿತ ಮತ್ತು ಇಂಗಾಲ ತ್ಯಾಜ್ಯ ಮುಕ್ತ ವಿದ್ಯುತ್ತೆಂದು ಭಾಷಾ ಬಚಾಯಿಸುತ್ತವೆ. ಹೀಗೆ ನಾಗರಿಕ ಅಣುಶಕ್ತಿಯ ಸೌಧವನ್ನು ಕಟ್ಟಿರುವುದೇ ಸುಳ್ಳುಗಳ ಮತ್ತು ಅಂತರ್ಗತ ಅವಘಡಗಳ ಹಾಗೂ ರಹಸ್ಯಗಳ ಅಡಿಪಾಯದ ಮೇಲೆ.

ಈಗ ಜಪಾನಿನಲ್ಲಿ ಸಂಭವಿಸಿರುವ ಅಣು ಸ್ಫೋಟದ ವಿಕಿರಣದ ಅಲೆಗಳು ಗಾಳಿ, ನೀರು, ಮೀನು, ಆಹಾರದ ಜೊತೆ ಸೇರಿ ಜಗತ್ತನ್ನೆಲ್ಲಾ ಆವರಿಸುವ ಅಪಾಯ ಹಿಂದೆಂದಿಗಿಂತಲೂ ತೀವ್ರವಾಗಿದೆ. ಭಾರತವೂ ಆ ಅಪಾಯದಿಂದ ಬಹಳ ದೂರವೇನಿಲ್ಲ. ಆದರೆ ಭಾರತ ಮತ್ತೊಂದು ಅಪಾಯವನ್ನು ಎದುರಿಸುತ್ತಿದೆ. ನಮ್ಮ ದಲ್ಲಾಳಿ ಸರ್ಕಾರಗಳು ಇರುಳು ಕಂಡ ಬಾವಿಯಲ್ಲಿ ಹಗಲಿನಲ್ಲೇ ಭಾರತವನ್ನು ಮುಳುಗಿಸುವ ತಯಾರಿಯನ್ನು ಮಾಡಿಕೊಂಡಿವೆ. 2005ರಲ್ಲಿ ಆದ ನಾಗರಿಕ ಅಣುಶಕ್ತಿ ಒಪ್ಪಂದದ ಪ್ರಕಾರ ಭಾರತವು ಇದೇ General Electric (GE), TEPCO, ತೋಶಿಬಾ, ಶಾ-ಸ್ಟೋನ್ ಮತ್ತು ವೆಬ್‌ಸ್ಟರ್‌ನಂಥಾ ಅಣು ಅವಘಡಗಳಿಗೆ ಕಾರಣವಾದ ಕಂಪನಿಗಳಿಗೇ ಭಾರತದಲ್ಲಿ 150ಕ್ಕೂ ಹೆಚ್ಚು ಅಣುಸ್ಥಾವರಗಳನ್ನು ಸ್ಥಾಪಿಸುವ ಸುಮಾರು 1,50,000 ಲಕ್ಷ ಕೋಟಿ ರೂಪಾಯಿಗಳ ಮಾರುಕಟ್ಟೆಯನ್ನು ಒದಗಿಸಿಕೊಡುತ್ತಿದೆ. ಅಷ್ಟು ಮಾತ್ರವಲ್ಲ, ಒಂದು ವೇಳೆ ಈ ಕಂಪನಿಗಳು ಕಟ್ಟಿದ ಸ್ಥಾವರಗಳಲ್ಲಿ ಅವಘಡ ಸಂಭವಿಸಿದರೆ ಈ ಕಂಪನಿಗಳನ್ನು ಜವಾಬುದಾರರನ್ನಾಗಿ ಮಾಡದ ಮಸೂದೆಯೊಂದನ್ನು ನಮ್ಮ ಘನ "ಸಾರ್ವಭೌಮಿ" ಸಂಸತ್ತು ಪಾಸುಮಾಡಿದೆ.

"Civil Liability Of Nuclear Damage Bill" ಎಂಬ ಈ ಕಾಯಿದೆಯ ಪ್ರಕಾರ ಅವಘಡ ಸಂಭವಿಸಿದ ಅಣುಸ್ಥಾವರವನ್ನು ನಿರ್ಮಾಣ ಮಾಡಿದ ಅಥವಾ ಸರಬರಾಜು ಮಾಡಿದ ಅಮೆರಿಕನ್ ಕಂಪನಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವಂತಿಲ್ಲ. ಕೇವಲ ಸಿವಿಲ್ ಮೊಕದ್ದಮೆಯನ್ನು ಹೂಡಿ ಪರಿಹಾರವನ್ನಷ್ಟೇ ಕೇಳಬಹುದು. ಆದರೆ ಈ ಕಂಪನಿ ಉತ್ಪಾದನೆ ಮಾಡಿದ ವಿದ್ಯುತ್ತನ್ನು "ಅಣು ವಿದ್ಯುತ್ ನಿಗಮ" ಕೊಂಡುಕೊಳ್ಳುವುದರಿಂದ ಪರಿಹಾರವನ್ನು ನೀಡುವ ಪ್ರಧಾನ ಜವಾಬ್ದಾರಿ ಈ ಸರ್ಕಾರಿ ನಿಗಮದ್ದೇ ಹೊರತು ಅಮೆರಿಕದ ಖಾಸಗಿ ಕಂಪನಿಗಳದ್ದಲ್ಲ ಎಂದು ಈ ಕಾಯಿದೆ ರಕ್ಷಣೆಯನ್ನು ಒದಗಿಸುತ್ತದೆ. ಒಂದು ವೇಳೆ ಅವಘಡ ಸಂಭವಿಸಿದ್ದೇ ಆದರೆ ಅಮೆರಿಕನ್ ಕಂಪನಿಗಳು ಹೆಚ್ಚೆಂದರೆ 300 ಕೋಟಿ ರೂ.ಗಳನ್ನೂ ಮತ್ತು ಸರ್ಕಾರಿ ಅಣು ವಿದ್ಯುತ್ ನಿಗಮ 2300 ಕೋಟಿ ರೂ.ಗಳನ್ನೂ ಭರಿಸಬೇಕೆಂದೂ ಸಹ ಮಸೂದೆಯಲ್ಲಿ ಸೇರಿಸಲಾಗಿದೆ. ಅಂದರೆ ಲಾಭ ಅಮೆರಿಕದ ಕಂಪನಿಗಳಿಗೆ. ಆದರೆ ಅಪಾಯ ಮತ್ತು ಅದಕ್ಕೆ ಭರಿಸುವ ಹಣ ಎಲ್ಲಾ ಜನರದ್ದೇ.

ಮೊನ್ನೆ ಜಪಾನಿನಲ್ಲಿ ಈ ಅವಘಡ ಸಂಭವಿಸಿದ ಮೇಲೂ ಭಾರತದಲ್ಲಿ ಸ್ಥಾಪಿಸಲಿರುವ ಅಣುಸ್ಥಾವರಗಳ ಯೋಜನೆಯ ಬಗ್ಗೆ ಯಾವುದೇ ಪುನರ್‌ವಿಮರ್ಶೆ ಮಾಡುವುದಿಲ್ಲವೆಂದು ಭಾರತ ಸರ್ಕಾರ ಅಮೆರಿಕಕ್ಕೆ ಭರವಸೆ ನೀಡಿದೆ. ಇಂಥಾ ದುರಂತ ಸಂಭವಿಸಿದ ಮೇಲೂ ಯಾವ ಪಕ್ಷಗಳು ಸಹ ಈವರೆಗೆ ಭಾರತದ ನಾಗರಿಕ ಅಣುಶಕ್ತಿ ಯೋಜನೆಯನ್ನು ಪುನರ್ ವಿಮರ್ಶೆ ಮಾಡಬೇಕೆಂದೂ ಆಗ್ರಹಿಸಿಲ್ಲ. ಇದಿಷ್ಟೇ ಈ ಸರ್ಕಾರ ಮತ್ತು ಪಕ್ಷಗಳು ಎಂಥಾ ದಲ್ಲಾಳಿಗಳೆಂಬುದನ್ನು, ವಿದೇಶೀ ಕಂಪನಿಗಳ ಜೀತಕ್ಕಿವೆಯೆಂಬುದನ್ನೂ ಸಾಬೀತುಪಡಿಸುತ್ತದೆ.

ಜಪಾನಿನಲ್ಲಿ ಆಗಿರುವ ಅಣುಸ್ಥಾವರ ಸ್ಫೋಟಗಳಿಂದ ಈಗಲಾದರೂ ಭಾರತ ಪಾಠ ಕಲಿಯಲೇಬೇಕು. ಜಾರಿಯಲ್ಲಿರುವ ಎಲ್ಲಾ ಅಣುಸ್ಥಾವರಗಳ ಮುನ್ನೆಚ್ಚರಿಕಾ ವ್ಯವಸ್ಥೆಯನ್ನು ಪುನರ್ ವಿಮರ್ಶೆಗೊಳಪಡಿಸಿ ಅಲ್ಲಿನ ಉತ್ಪಾದನೆಯನ್ನು ಈ ಕೂಡಲೇ ನಿಲ್ಲಿಸಬೇಕು. ಹೊಸದಾಗಿ ಸ್ಥಾಪನೆಗೊಳ್ಳಲಿರುವ ಎಲ್ಲಾ ಅಣುಸ್ಥಾವರದ ಯೋಜನೆಗಳನ್ನು ಈ ಕೂಡಲೇ ರದ್ದುಪಡಿಸಬೇಕು. ಅಮೆರಿಕದೊಂದಿಗೆ ಮಾಡಿಕೊಂಡಿರುವ Civil Liability Of Nuclear Damage Bill ಒಪ್ಪಂದವನ್ನೂ ಹಾಗೂ ನಾಗರಿಕ ಅಣುಶಕ್ತಿ ಯೋಜನೆಯ ಕ್ರಮಗಳನ್ನು ರದ್ದುಗೊಳಿಸಿ ಪರ್ಯಾಯ ಇಂಧನ ಮೂಲದ ಉತ್ತೇಜನಕ್ಕೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಇಷ್ಟು ಕನಿಷ್ಠ ಪಕ್ಷ ಆಗಲೇ ಬೇಕು. ಹಾಗಾದಾಗ ಮಾತ್ರ ಈ ದೇಶ, ಈ ಜಗತ್ತು, ಮನುಕುಲ ಎಂಬುದು ಇರುತ್ತದೆ. ಇಲ್ಲದಿದ್ದರೆ ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ಯಶಾಹಿಗಳ ಈ ಉತ್ಪಾದನಾ ಕ್ರಮಕ್ಕೆ ಸಿಲುಕಿ ಜನ ಮತ್ತು ಭೂಮಂಡಲವೇ ನಾಶವಾಗಿ ಹೋಗುತ್ತದೆ. ಇರುವುದೊಂದೇ ಭೂಮಿಯನ್ನು ಉಳಿಸಿಕೊಳ್ಳಲು ಈ ಶಕ್ತಿಗಳ ವಿರುದ್ಧ ಜನಸಂಗ್ರಾಮವನ್ನೇ ಹುಟ್ಟುಹಾಕಬೇಕಿದೆ. ●

ಕಾಟ್-ಕ-ನಾಲಾದಲ್ಲೊಂದು ಗುಡಿಸಲು

ನೈನಿತಾಲ್ ಮತ್ತು ಕಾಲಧುಂಗಿಯ ಆಚೆಯ ಜನರಿಗೆ ಜಿಮ್ ಕಾರ್ಬೆಟ್ ಬಗ್ಗೆ ಹೆಚ್ಚು ಗೊತ್ತಿಲ್ಲ. ಕಾರ್ಬೆಟ್ ಹೆಸರು ಹೇಳಿದ ಕೂಡಲೆ ಇಲ್ಲಿನ ಜನ ಅವನ ಹೆಸರಿಟ್ಟಿರುವ ರಾಷ್ಟ್ರೀಯ ಅರಣ್ಯಧಾಮದ ಬಗ್ಗೆಯೇ ಮಾತಾಡುತ್ತಿದ್ದೇವೆ ಅಂತ ಅಂದುಕೊಂಡುಬಿಡುತ್ತಾರೆ. ಆದರೆ ನರಭಕ್ಷಕ ಹುಲಿ ಅಂದರೆ ಮಾತ್ರ ಬಹಳ ಉತ್ಸುಕರಾಗಿ ಅವು ಮನುಷ್ಯರನ್ನು ಹೇಗೆ ಕೊಂದು ತಿಂದು ತೇಗಿದವು ಅಂತ ವಿವರವಾಗಿ ಕತೆ ಹೇಳಲಿಕ್ಕೆ ಶುರು ಮಾಡುತ್ತಾರೆ. ಈ "ಒಂದಾನೊಂದು ಕಾಲದ" ಕತೆಗಳಲ್ಲಿ "ಬಿಳಿ ಸಾಧು", "ಬಿಳಿ ಘಡವಾಲೀ", "ಚಡ್ಡಿ ತೊಟ್ಟ ಸಾಹೇಬ್" ಇತ್ಯಾದಿ ನಾಮಾವಳಿಗಳಿಂದ ಕರೆಯಲ್ಪಡುವ, ಅವರ ಭಾಷೆಯೂ ಬಲ್ಲ ವ್ಯಕ್ತಿಯೊಬ್ಬ ಹೇಗೆ ಕಾಡುಮೇಡಲೆಯುತ್ತಾ ನರಭಕ್ಷಕ ಹುಲಿಗಳನ್ನು ಕೊಲ್ಲುತ್ತಿದ್ದ ಅನ್ನುವ ಪ್ರಸ್ತಾಪಗಳು ಬಹಳಷ್ಟು ಬರುತ್ತವೆ.

ಆದ್ದರಿಂದಲೇ ನಾವು ಮೋಹನ್ ನರಭಕ್ಷಕ ಹುಲಿಯನ್ನು ಕಾರ್ಬೆಟ್ ಕೊಂದ ಜಾಗ ಹುಡುಕಿ ಹೊರಟಾಗ. ನಮಗೆ ದಾರಿ ತೋರಿಸಿದ್ದು ಇವೇ ಸಂಗತಿಗಳು. ಕಾರ್ಬೆಟ್ಟೆ ತನ್ನ ಪುಸ್ತಕಗಳಲ್ಲಿ ಬರೆದ ಕತೆಗಳ ಜೊತೆಜೊತೆಗೆ ಈ ಸ್ಥಳೀಯ ಜನರು ಪುರಾಣದೋಪಾದಿಯಲ್ಲಿ ಹೇಳುವ ಈ ಎಲ್ಲ ಕತೆ ಗಳೂ ಕೂಡ ನಮ್ಮನ್ನು ಮುಂದಕ್ಕೆ ಕರೆದೊಯ್ಯುತ್ತಿದ್ದವು.

ಕಾರ್ಬೆಟ್ ರಾಮನಗರದ ರೈಲು ನಿಲ್ದಾಣದಲ್ಲಿ ಬಂದು ಇಳಿದದ್ದು ಮೇ ತಿಂಗಳ ಒಂದು ಸುಡು ಮಧ್ಯಾಹ್ನ. ಅಲ್ಲಿಂದ ಮೋಹನ್ 22 ಕಿಲೋಮೀಟರು ಗಳ ದಾರಿ. ಅದು 20 ಕುಟುಂಬಗಳಿರುವ ಒಂದು ಸಣ್ಣ ಹಳ್ಳಿ. ಕಾರ್ಬೆಟ್ ಜೊತೆ ಇದ್ದದ್ದು ಇಬ್ಬರು ಕೆಲಸಗಾರರು ಮತ್ತು ಅವರು ಕ್ಯಾಂಪ್ ಮಾಡಲು ಬೇಕಾದ ಸಾಮಾನುಗಳು ಮತ್ತು ರೇಷನ್ ಸಾಮಾನು ಗಳನ್ನು ಹೊತ್ತ ಆರು ಗಟ್ಟಮುಟ್ಟಾದ ಘಡವಾಲಿಗಳು.

ರಾಮನಗರ ಇವತ್ತು ಹತ್ತಾರು ಟೂರಿಸ್ಟ್ ಜೆಪ್ಪಿಗಳು ಓಡಾಡುವ ಸುಮಾರು ದೊಡ್ಡದಾದ ಪಟ್ಟಣ. ಟ್ರಾಫಿಕ್ ಜಾಮುಗಳಿಗೂ ಬರ ಇಲ್ಲ. ಈಗ ವಾಹನಗಳು ಓಡಾಡಲು ಯೋಗ್ಯವಾದ ರೋಡು ಧಿಕುಲಿಯವರೆಗೆ ಘಟ್ಟ ಹತ್ತುತ್ತಾ ಹೋಗಿ ಅಲ್ಲಿಂದ ಮುಂದೆ ಗಾರ್ಜಿಯಾಗೆ ಇಳಿಜಾರಿನಲ್ಲಿ ಸಾಗಿ ಹೋಗುತ್ತವೆ. ಕೋಸಿ ನದಿಯ ದಡದಲ್ಲಿರುವ ಗಾರ್ಜಿಯಾದಲ್ಲಿ ಒಂದು ಪ್ರಸಿದ್ಧವಾದ ದೇವಿಯ ದೇವಸ್ಥಾನವಿದೆ. ಅಲ್ಲಿಂದ ಮೋಹನ್‌ವರೆಗೂ ಈಗ ರಸ್ತೆ ಇದೆ. ನೈನಿತಾಲ್ ಜಿಲ್ಲೆ ಮತ್ತು ಅಲ್ಮೋರ ಜಿಲ್ಲೆಗಳ ಗಡಿಯಾ ಚೆಕ್ ಪೋಸ್ಟ್‌ವರೆಗೂ ರಸ್ತೆ ಸಾಗುತ್ತದೆ.

ಮೋಹನ್‌ನಲ್ಲಿ ಇದ್ದ ನರಭಕ್ಷಕ ಹುಲಿ ಕುಮಾವ್‌ನ ಬ್ರಿಟಿಷ್ ಸರ್ಕಾರದ ಕಚೇರಿಯ ಮಂದಿಗೆ ಎರಡನೆಯ ದೊಡ್ಡ ತಲೆನೋವಾಗಿತ್ತು, ಮೊದಲನೆಯದು ಚೌಘರ್‌ನಲ್ಲಿ ಇದ್ದ ಜೋಡಿ ನರಭಕ್ಷಕ ಹುಲಿಗಳು. ಕಾಂಡಾದ ನರಭಕ್ಷಕ ಇವರನ್ನು ಥರಗುಟ್ಟಿಸಿದ ಇನ್ನೊಂದು ಹುಲಿ.

ಕಾರ್ಬೆಟ್ ಕಾಲದಲ್ಲಿ ರಾಮನಗರದಿಂದ ಗರ್ಜಿಯಾಕ್ಕೆ ಏರಿನ ಪಯಣ ಕೇವಲ 14 ಕಿಲೋಮಿಟರ್ ಮಾತ್ರವೇ ಆದರೂ ಸುಲಭದ್ದಾಗಿರಲಿಲ್ಲ, ಅಲ್ಲಿಯವರೆಗೆ ಉಸ್ಸಪ್ಪೋ ಅಂತ ಹತ್ತಿಕೊಂಡು ಹೋದರೆ ಅಲ್ಲಿಂದ ಕಡಿದಾದ ಇಳಿಜಾರು. ಕಾರ್ಬೆಟ್ ಕೋಸಿ ನದಿಯ ಪಕ್ಕದಲ್ಲಿಯೇ ನಡೆಯುತ್ತಾ ಗಾರ್ಜಿಯಾ ತಲುಪಿರಬೇಕು. ಇದರ ಬಗ್ಗೆ ಬರೆಯುತ್ತಾ ಕಾರ್ಬೆಟ್ ತಾನು ಸೂರ್ಯಾಸ್ತಕ್ಕೆ ಮುಂಚೆ ಗಾರ್ಜಿಯ ತಲುಪಿದ್ದಾಗಿ ಹೇಳುತ್ತಾನೆ. ಈಗ ರೋಡು ಇರುವ ದಾರಿಯಲ್ಲಿ ಅವನೇನಾದರು ಟ್ರೆಕ್ ಮಾಡಿಕೊಂಡು ಹೋಗಿದ್ದರೆ ಅಷ್ಟು ಬೇಗ ತಲುಪುವುದು ಸಾಧ್ಯವೇ ಇಲ್ಲ. ಇವತ್ತು ಹುಲಿಗಳನ್ನು ಅರಸುತ್ತಾ ಬರುವ ಸಾವಿರಾರು ಟೂರಿಸ್ಟುಗಳಿಗಾಗಿ ಇರುವ ಡಜನ್ನುಗಟ್ಟಲೆ ರೆಸಾರ್ಟುಗಳ ಹಿತ್ತಲಿನಲ್ಲಿಯೇ ಕೋಸಿ ನದಿ ಹರಿಯುತ್ತದೆ.

ತನ್ನ ಮೋಹನ್ ಸಾಹಸದ ಬಗ್ಗೆ ಬರೆಯುತ್ತಾ ಕಾರ್ಬೆಟ್ ಗಾರ್ಜಿಯಾ ಕೋಸಿ ದಂಡೆಯಲ್ಲಿ ಟೆಂಟ್ ಹಾಕಿಕೊಂಡು ಇದ್ದಾಗ ನಡೆದ ಘಟನೆಯ ಬಗ್ಗೆ ಹೇಳುತ್ತಾನೆ. ನಡುರಾತ್ರಿಯಲ್ಲಿ ಅವನಿಗೆ ಒಂದು ವಿಚಿತ್ರವಾದ ಸದ್ದು ಕೇಳಿ ಎಚ್ಚರವಾಗುತ್ತದೆ. ಎರಡು ಕಲ್ಲುಗಳನ್ನು ಬಲವಾಗಿ ಉಜ್ಜಿದರೆ ಯಾವ ಥರದ ಸದ್ದು ಆಗಬಹುದೋ ಥೇಟ್ ಅಂಥಾದ್ದೆ ಸದ್ದು ಅನ್ನುತ್ತಾನೆ. ಸದ್ದಿನ ಜಾಡು ಹಿಡಿದು ಹುಡುಕಿದಾಗ ಅವನಿಗೆ ಅದು ಮೇ ತಿಂಗಳಲ್ಲಿ ಕಪ್ಪೆಗಳು ವಿಚಿತ್ರವಾಗಿ ವಟಗುಟ್ಟುವ



ಸದ್ದು ಅಂತ ಗೊತ್ತಾಗುತ್ತದೆ. ನವೆಂಬರ್ ತಿಂಗಳಲ್ಲಿ ಅಲ್ಲಿ ಹೋಗಿದ್ದ ನನಗೆ ಈ ಥರದ ಯಾವ ಸದ್ದೂ ಕೇಳಲಿಲ್ಲ, ಮೇ ತಿಂಗಳಲ್ಲಿಯೇ ಹೋಗಿದ್ದರೂ ಎಷ್ಟರಮಟ್ಟಿಗೆ ಕೇಳುತ್ತಿತ್ತೋ ಅನುಮಾನ.

ರಾಮನಗರ ಬದಲಾದಷ್ಟು ಮೋಹನ್ ಬದಲಾಗಿಲ್ಲ. ಸುಮಾರಷ್ಟು ಮಟ್ಟಿಗೆ ಕಾರ್ಬೆಟ್ ಅಂದು ವಿವರಿಸಿದಂತೆಯೇ ಇಂದೂ ಮೋಹನ್ ಇದೆ. ಬಜಾರಿನಲ್ಲಿ ಮೂರು ನಾಲ್ಕು ಚಾಯ್ ಬಿಸ್ಕತ್ತು ಮಾರುವ ಅಂಗಡಿಗಳನ್ನು ಬಿಟ್ಟರೆ ಇನ್ನೇನೂ ಇಲ್ಲ. ರಾಣಿಖೇತ್‌ವರೆಗೆ ಜನರನ್ನು ಒಯ್ಯುವ ಒಂದೆರಡು ಬಸ್ಸುಗಳು ಆಗೀಗ ಓಡಾಡುವುದು ಬಿಟ್ಟರೆ ಹೆಚ್ಚು ವಾಹನ ಸಂಚಾರ ಇಲ್ಲ.

ಅಲ್ಲಿ ಆರಾಮವಾಗಿ ಕೂತಿದ್ದ ಒಂದು ಗುಂಪು ಮುದುಕರ ಜೊತೆಗೆ ಮಾತಿಗಿಳಿದೆ. ಕಾರ್ಬೆಟ್ ಬಗ್ಗೆ ನಿಮಗೆ ಗೊತ್ತಾ? ಅಂತ ಕೇಳಿದರೆ ನಾನು ಅರಣ್ಯಧಾಮದ ಬಗ್ಗೆ ಕೇಳುತ್ತಾ ಇದ್ದೇನೆ ಅಂದುಕೊಂಡು "ಪಾರ್ಕಾ?" ಅಂತ ಕೇಳಿದರು. ನರಭಕ್ಷಕ ಹುಲಿಗಳ ವಿಷಯ ಗೊತ್ತಾ ಅನ್ನುವ ಪ್ರಶ್ನೆ ಕೇಳಿದಾಗ ಮಾತ್ರ ಉತ್ತರಗಳು ಧಾರಾಕಾರ ಬಂದವು!

ಐದು ವರ್ಷಗಳ ಹಿಂದೆಯಷ್ಟೇ ಹುಲಿಯೊಂದು ಹೇಗೆ ಕಾಡಿನಿಂದ ನಾವು ನಿಂತಿದ್ದ ಮಾರ್ಕೆಟ್ಟಿಗೆ ನುಗ್ಗಿ ಬಂದು ಜನರ ಮೇಲೆ ದಾಳಿ ಮಾಡಿತ್ತು ಅಂತ ಸವಿವರವಾಗಿ ಹೇಳಿದರು. ಅಲ್ಲೇ ಒಂದು ಕಬ್ಬಿಣದ ನೇಮ್ ಬೋರ್ಡಿನ ಮೇಲೆ ಮೂಡಿದ್ದ ಮೂರು ಆಳವಾದ ಗುರುತುಗಳನ್ನು ತೋರಿಸಿ ಅದು ಹುಲಿಯೇ ಮಾಡಿದ್ದು ಅಂತ ಹೇಳಿದರು. "ಹುಲಿ ಪಂಜಾದಿಂದ ಹೊಡೆದಿದ್ದು" ಅಂತ ನರೇಂದ್ರ ಸಿಂಗ್ ರಾವತ್ ಎಂಬ ಚಾಯ್ ಅಂಗಡಿ ನಡೆಸುವವನೊಬ್ಬ ಹೇಳಿದ. ಅವತ್ತು ಇವನ ಅಪ್ಪನಿಗೆ ಗಾಯವೂ ಆಗಿತ್ತಂತೆ. ಆ ಹುಲಿ ನರಭಕ್ಷಕ ಆಗಿರುವುದಕ್ಕೆ ಸಾಧ್ಯವಿಲ್ಲ ಅನ್ನುವುದು ಸ್ಪಷ್ಟವಾಗಿತ್ತು, ಕಾಡಿನಿಂದ ದಾರಿ ತಪ್ಪಿ ಬಂದು ಹಳ್ಳಿಗೆ ನುಸುಳಿಬಿಟ್ಟ ಹುಲಿಯಾಗಿರಬೇಕು.


ಜನರನ್ನು ಹೊತ್ತುಕೊಂಡು ಹೋಗಿ ತಿಂದುಬಿಡುವಂಥ ಹುಲಿಯನ್ನು ಇಲ್ಲಿಯ ಜನ ನೋಡಿ ಎಷ್ಟು ಕಾಲ ಆಗಿತ್ತು?

ಈ ಪ್ರಶ್ನೆ ಕೇಳಿದ ನಂತರ ಸ್ವಲ್ಪ ಕಾಲ ಗುಂಪಿನಲ್ಲಿ ಮೌನ ಆವರಿಸಿತು. ನಂತರ ಮಂಗಲ್ ಸಿಂಗ್ ಅನ್ನುವ ವ್ಯಕ್ತಿ ಹಳೆಯ ಕಾಲದ ಮಸುಕಾಗಿದ್ದ ನೆನಪುಗಳನ್ನು ಕೆದಕುತ್ತಾ ಮಾತಿಗಿಳಿದ. "ನನ್ನ ಚಿಕ್ಕಪ್ಪ ಹಿಂದೆ ಇಲ್ಲಿಯೇ ಇದ್ದುಕೊಂಡು ನಮ್ಮಷ್ಟೇ ಚೆನ್ನಾಗಿ ನಮ್ಮ ಭಾಷೆ ಮಾತಾಡುತ್ತಿದ್ದ ಗೋರಾ ಒಬ್ಬನ ಬಗ್ಗೆ ಹೇಳುತ್ತಾ ಇದ್ದ. ಆ ಘಡವಾಲಿ ಯಾವಾಗಲೂ ಚಡ್ಡಿ ಹಾಕಿಕೊಂಡು ಓಡಾಡುತ್ತಾ ಇದ್ದನಂತೆ. ಬಹಳ ದಿಲ್ದಾರ್ ಮನುಷ್ಯ ಒಳ್ಳೆ ನಿಶಾನೆ ಬಾಜ್ ಅಂತೆ. ಅವನು ಅಗೋ ಆ ಬೆಟ್ಟದ ಮೇಲೆ ಒಂದು ನರಭಕ್ಷಕ ಹುಲಿ ಹೊಡೆದಿದ್ದ ಅಂತ ಚಿಕ್ಕಪ್ಪ ಹೇಳ್ತಿದ್ದ" ಅಂದ.

ಕಾರ್ಬೆಟ್ ಹುಲಿಯನ್ನು ಆಕರ್ಷಿಸುವುದಕ್ಕೆ ಹೊಲದಲ್ಲಿ ಕೆಲಸ ಮಾಡುವ ಹೆಂಗಸರ ಹಾಗೆ ಸೀರೆ ತೊಟ್ಟು ಹಾಡುತ್ತಾ ಇದ್ದದ್ದೂ ಉಂಟು ಅಂತ ಒಂದು ಪ್ರಚಲಿತ ಕತೆ ಬಹಳ ಹಿಂದಿ ನಿಂದಲೂ ಇದೆ. ಇದೇ ಕತೆಯನ್ನು ಮಂಗಲ್ ಸಿಂಗ್ ಕೂಡಾ ಮಸಾಲೆಭರಿತವಾಗಿ ಪುನರಾವರ್ತನೆ ಮಾಡಿದ. (ಹುಲಿಗಳಿಗೂ ಸೀರೆಯ ಬಗ್ಗೆ ಆಕರ್ಷಣೆ ಇದೆ ಅಂತ ಜನರಿಗೆ ನಂಬಿಕೆ ಇರುವುದು ಗಮನಿಸಬೇಕಾದ ಮಾತು!)

ಚಂಪಾವತ್ ನರಭಕ್ಷಕ ಹುಲಿಯ ಬಗ್ಗೆ ತಾನು ಬರೆದ ಲೇಖನದಲ್ಲಿ ಈ ಗಾಳಿಮಾತಿನ ಬಗ್ಗೆಯೂ ಕಾರ್ಬೆಟ್ ಬರೆಯುತ್ತಾನೆ. ತಾನು ಸೀರೆ ಉಟ್ಟು ಕಾಡಿಗೆ ಹೋಗಿ ಬರೀ ಕತ್ತಿಯಲ್ಲಿ ವೀರ ರಮಣಿಯಂತೆ ಹುಲಿ ಕೊಂದ ಕಥೆಯೆಲ್ಲಾ ಸುಳ್ಳೆಂದೂ, ಒಂದೆರಡು ಬಾರಿ ಸೀರೆ ಹೊದ್ದುಕೊಂಡು ಹುಲ್ಲು ಕೊಯ್ಯುತ್ತಲೋ, ಮರ ಏರಿಯೋ ಹುಲಿಯನ್ನು ಸೆಳೆಯುವ ಪ್ರಯತ್ನ ಮಾಡಿದಾಗಲು ಅದು ಸಫಲವಾಗಿಲ್ಲವೆಂದೂ ಹೇಳುತ್ತಾನೆ. "ಒಂದೆರಡು ಬಾರಿ ನಾನು ಹತ್ತಿದ್ದ ಮರದ ಬಳಿ ಹುಲಿ ಸುಳಿದದ್ದುಂಟು ಅಷ್ಟೇ," ಅಂತ ಬರೆಯುತ್ತಾನೆ.


ಆ ಗುಂಪಿನ ಮುದುಕರು ಅಲ್ಲಿಂದ ಸುಮಾರು 17 ಕಿಲೋಮೀಟರ್ ದೂರದ ಬೆಟ್ಟದತ್ತ ಬೆರಳು ಮಾಡಿ ತೋರಿಸಿ ಈ ಬಿಳಿ ಆಸಾಮಿ ನರಭಕ್ಷಕ ಹುಲಿ ಕೊಂದದ್ದು ಅಲ್ಲಿಯೇ ಎಂದರು. ಕಾರ್ಬೆಟ್ ಬರೆದ ಲೇಖನದಲ್ಲಿಯೂ ತನಗೆ ಕಾಡಿನ ಗಾರ್ಡ್ ಒಬ್ಬ ಬೆಟ್ಟ ತೋರಿಸಿ ಅಲ್ಲೊಂದು



ಫಾರೆಸ್ಟರ್ ಗುಡಿಸಲಿದೆ, ಅಲ್ಲಿ ಇದ್ದು ಹುಲಿ ಬೇಟೆ ಆಡಬಹುದು ಅಂತ ಹೇಳಿದ್ದಾಗಿ ಬರೆಯುತ್ತಾನೆ.

ಆ ಗುಡಿಸಲು ಇನ್ನೂ ಇರುವ ಸಾಧ್ಯತೆಗಳಿವೆಯೇ?

ಕಾರ್ಬೆಟ್ ವಿವರಿಸುವ ಕಾಟ್-ಕ-ನಾಲ ಹಳ್ಳಿಯನ್ನು ಇಂದು ಕಾಟ್ನಾ ಅಂತ ಚುಟುಕು ಮಾಡಿ ಕರೆಯುತ್ತಾರೆ. ಬೆಟ್ಟದ ಆಚೆಯ ಜನರಿಗೆ ಕಾರ್ಬೆಟ್‌ನ ನೆನಪು ಇಲ್ಲ. ಅಲ್ಲಿಯ ಬಾಲಗಂಜೀ ಮಾಸ್ಟರ್ ಸಾಬ್ ಅನ್ನುವವರಿಗೆ



ಮಾತ್ರ ಒಂದಷ್ಟು ಕತೆಗಳು ಗೊತ್ತು ಅಂತ ಮೋಹನ್ ಜನ ನನಗೆ ಹೇಳಿದರು. ಆದರೆ ಈ ಮಾಸ್ಟರ್ ಸಾಹೇಬ್ ಹಳ್ಳಿಯಲ್ಲಿ ಇರಲಿಲ್ಲ. ಅವರ ಕುಟುಂಬದ ಯಾರ[illegible] ತೀರಿಕೊಂಡಿದ್ದರಿಂದ ದೂರದ ಪಟ್ಟಣಕ್ಕೆ ಹೋಗಿದ್ದರ[illegible] ಅದರರ್ಥ ನಮಗೆ ದಾರಿ ತೋರಿಸುವ ಮಂದಿ ಯಾ[illegible] ಇಲ್ಲ ಅಂತ. ಕಾಟ್ನಾ ಕಡೆಯಿಂದ ಬೆಟ್ಟ ಹತ್ತಿ ಗುಡಿಸಲು ಹುಡುಕುತ್ತಾ ಹೊರಟೆವು. ಬಾವಲಿಗಳು ವ[illegible] ಮಾಡಿಕೊಂಡಿದ್ದ ಆ ಜಾಗದಲ್ಲಿ ರಾತ್ರಿ ಕಳೆದ ನಂ[illegible] ತನಗೆ ಲ್ಯಾರಿನ್ ಜೈಟಿಸ್ (ಗಂಟಲು ಊತ ಮತ್ತು ನೋ[illegible] ಇತ್ಯಾದಿ ಉಂಟು ಮಾಡುವ ಒಂದು ಸೋಂಕು) ಬಂದದ[illegible] ಬರೆಯುತ್ತಾನೆ ಕಾರ್ಬೆಟ್.

ಏದುಸಿರು ಬಿಡುತ್ತಾ ಬೆಟ್ಟ ಹತ್ತಿ ಮೇಲೆ ತಲು[illegible] ನನಗೆ ಮುರುಕಲು ಗುಡಿಸಲು ಕಣ್ಣಿಗೆ ಬಿದ್ದಾಗ ಒಂ[illegible] ರೀತಿಯ ರೋಮಾಂಚನ ಆಯಿತು. ಕಾರ್ಬೆಟ್ ವಿವರಿಸ[illegible] ಬಾಗಿಲ ಸರಳುಗಳೂ ಕೂಡ ಇನ್ನೂ ಹಾಗೆಯೇ ಇ[illegible] ಗುಡಿಸಲು ಇನ್ನೇನು ಬಿದ್ದುಹೋಗುವ ಸ್ಥಿತಿಯಲ್ಲಿ ಗೋಡೆಯ ತುಂಬಾ ಥರಾವರಿ ಆಶುಕವಿಗಳ ಬರಹಗ[illegible] ನೆಲದ ತುಂಬಾ ಕಾಲು ಇಡಲಾಗದಷ್ಟು ಕಸ. ಆ ಗುಡಿಸ[illegible] ಮಧ್ಯ ಭಾಗದಲ್ಲಿ ಒಂದು ಗೋಡೆಯಿದ್ದು ಅದು ಗುಡಿಸಲ[illegible] ಎರಡು ಭಾಗವನ್ನಾಗಿ ವಿಭಾಗಿಸುತ್ತದೆ ಎಂದು ಕಾರ್ಬೆ[illegible] ಬರೆಯುತ್ತಾನೆ. ಆ ಗೋಡೆ ಈಗ ಇಲ್ಲ. ಗುಡಿಸ[illegible] ಪಕ್ಕದಲ್ಲಿ ಒಂದು ಕಾಡಿನ ವಾಚ್ ಟವರ್ ಇದೆ.

ಕಾರ್ಬೆಟ್ ಹೇಳುವಂತೆ ಅಲ್ಲಿಂದ ಸ್ಪಷ್ಟವಾಗಿ ಮೋಹನ್ ಬಜಾರ್ ಕಾಣುತ್ತದೆ. ಅಲ್ಲಿಂದ ಕೆಳಗಿಳಿದರೆ ಕಣಿವೆ. ಅಲ್ಲಿ[illegible] ಕಾರ್ಬೆಟ್ ಮೋಹನ್ ನರಭಕ್ಷಕನನ್ನು ಸಾಯಿಸಿದ್ದು.

ರೋಚಕ ಕತೆ ನಡೆದ ದಾರಿಯಲ್ಲಿ ಮುಂದೆ ನಡೆಯು[illegible] ಆಸೆ ನಮಗೆ. ಆದರೆ ಆಗಲೇ ಲೇಟಾಗಿತ್ತು, ಕ[illegible] ಕವಿಯುವುದಕ್ಕೆ ಅರ್ಧ ಗಂಟೆ ಅಷ್ಟೇ ಇತ್ತು, ಕಾಟ್ನಾ[illegible] ವಾಪಾಸು ಹೋಗುವು ದೇನೂ ಸುಲಭ[illegible] ದಾರಿಯಾಗಿರಲಿಲ್ಲ. ನಾವು ನಿಂತ ಉತ್ತರ ದಿ[illegible] ನಂದಾ ದೇವಿ ಪರ್ವತ ಸಂಜೆಯ ಬೆಳಕಿನಲ್ಲಿ ಬಾ[illegible] ಕಟ್ಟಿ ಹೋಗುವಷ್ಟು ಭವ್ಯವಾಗಿ ಕಾಣುತ್ತಿತ್ತು. ನಂ[illegible] ದೇವಿಯನ್ನು ನೋಡುತ್ತಾ ಮೂಕವಿಸ್ಮಿತ[illegible] ಒಂದಷ್ಟು ಹೊತ್ತು ನಿಂತು ಮತ್ತೆ ಕಾಟ್ನಾ ಕ[illegible] ಹೆಜ್ಜೆ ಹಾಕಿದೆವು. ಕಾರ್ಬೆಟ್ ನಂದಾ ದೇವಿ[illegible] ಬಗ್ಗೆ ತನ್ನ ಕತೆಯಲ್ಲಿ ಏನೂ ಬರೆಯುವುದಿಲ್ಲವಲ್ಲ ಯ[illegible] ಅನ್ನುವ ಪ್ರಶ್ನೆ ನನ್ನನ್ನು ದಾರಿಯುದ್ದಕ್ಕೂ ಕಾಡುತ್ತಿತ್ತು.

(ಮುಂದುವರೆಯುವುದು)

> ಕಾರಣಾಂತರಗಳಿಂದ 'ಮಂಗನ ಬ್ಯಾಟೆ'
> ಈ ವಾರ ಪ್ರಕಟ ಮಾಡಲಾಗಲಿಲ್ಲ. ಮುಂದಿನ
> ಸಂಚಿಕೆಯಿಂದ ಎಂದಿನಂತೆ ಪ್ರಕಟಿಸಲಾಗುವುದು
> –ಸಂ

ಕ್ಷಮಿಸಿ, ಸಾಫ್ಟ್‌ವೇರ್ ಕರಪ್ಟಾಗಿದೆ



ಯಾಕೋ ಈ ನಾಡಿನ
ಸಾಫ್ಟ್‌ವೇರುಗಳೆಲ್ಲಾ ಕರಪ್ಟಾಗಿವೆ
ಐಕಾನುಗಳಿಗೆ, ಇಮೇಜುಗಳಿಗೆ
ಸಿಪಿಯುನೊಂದಿಗೆ ಸಂಬಂಧವೇ ಕಟ್ಟಾಗಿದೆ
ನೆಚ್ಚಿಕೊಂಡ ಪ್ರೋಗ್ರಾಮುಗಳಲ್ಲಿ
ppp ವೈರಸ್ ಹತ್ತಿಕೊಂಡಿದೆ
ಕರ್ನಾಟಕವನ್ನು ಎಷ್ಟೇ ಗೂಗಲಾಡಿದರೂ
ಎಲೆಕ್ಟ್ರಾನಿಕ್ ಸಿಟಿಯನ್ನು ಬಿಟ್ಟು ಬೇರೇನೂ ಬರದಂತಾಗಿದೆ

ಅಷ್ಟೇ ಇದ್ದರೆ ಪರವಿಲ್ಲ
ಇಲ್ಲಿ ಮದರ್ ಬೋರ್ಡಿಗೇ ಟ್ರೋಜನ್ ಹತ್ತಿಕೊಂಡಿದೆ
ಒಳದೊಳಗನ್ನು ಕೊರೆಯುತ್ತಾ
ಮೆಮೊರಿ ಫೈಲುಗಳನ್ನೆಲ್ಲಾ ನಾಶ ಮಾಡಿದೆ
ಈಗ ಯಾವ ಮೆಮೊರಿಯೂ ಇಲ್ಲ
ವಿದ್ಯೆ ಕೊಡದೆ ದಕ್ಷಿಣೆ ಪಡೆದುಕೊಂಡಿದ್ದೂ
ಮಹಾಮನೆಗೆ ಬೆಂಕಿಹಚ್ಚಿದ್ದು ತಥಾಗತನನ್ನು ಓಡಿಸಿದ್ದೂ
ಮಹಾಮಾನವನ ನಾಲಿಗೆಯನ್ನೇ ಕಿತ್ತದ್ದು
ಯಾವ ಮೆಮೊರಿಯೂ ಇಲ್ಲ
ಮೊನ್ನೆಮೊನ್ನೆ ಹಾಕಿಸಿದ ಗಣತಂತ್ರದ ಮದರ್‌ಬೋರ್ಡಿಗೆ
ಮೆಮೊರಿ ಆಪ್ಷನ್ನೇ ತೆಗೆದುಹಾಕಲಾಗಿದೆಯಂತೆ
ಈಗ ಪ್ರಜಾತಂತ್ರದ ಸಾಫ್ಟ್‌ವೇರೂ ಬರುವುದೇ ಹೀಗಂತೆ!
ಇಂದು ಭಾರತ, ನಾಳೆ ಈಜಿಪ್ಟ್, ಲಿಬಿಯಾ ಎಲ್ಲದ್ದು ಒಂದೇ ಕಥೆ
ಹಿಂದಿಗಿಂತ ಭಿನ್ನ ಹೌದು
ಏನೂ ಕೊಡಲ್ಲ ಅಂತೇನಲ್ಲ
ಬಿಲ್ಲನ್ನು ಕೊಡುತ್ತಾರೆ, ಬಾಣವನ್ನಲ್ಲ
ಬಂದೂಕು ಕೊಡುತ್ತಾರೆ, ಗುಂಡುಗಳನ್ನಲ್ಲ
ಅಕ್ಷರ ಕೊಡುತ್ತಾರೆ, ಅರ್ಥವನ್ನಲ್ಲ
ಮೆಮೊರಿ ಲಾಸಾಗಿದೆ, ಎಲ್ಲವೂ ಮರೆತಿದೆ

ಅನೆಸ್ತೇಷಿಯಾ ತಿನ್ನುತ್ತಾ ಆಪರೇಷನ್ ಟೇಬಲ್ಲಿನ ಮೇಲೆ
ಅರ್ಧ ಶತಮಾನ
ಕಳೆದದ್ದೂ ಮರೆತುಹೋಗಿದೆ
ಮತ್ತೆ
ಸಂವಿಧಾನದ ವೈರಸ್ ಗಾರ್ಡು ಎಕ್ಸ್‌ಪೈರಿ ಆಗಿಬಿಟ್ಟಿದೆ
ಕಾರ್ಯಾಂಗದ ಫೈಲುಗಳಲ್ಲೂ, ಶಾಸಕಾಂಗದ ಫೋಲ್ಡರುಗಳಲ್ಲೂ
ಜನತೆಯ ವಿಂಡೋ ಬಂದಾಗಿದೆ
ಈ ಪ್ರಜಾತಂತ್ರದ ಲ್ಯಾಪ್‌ಟಾಪಿಗೆ ಬ್ಯಾಟರಿ ಡ್ರೈವೇ ಇಲ್ಲ
ಜನಮನದ ಮೇನ್‌ಸ್ವಿಚ್ಚಿನೊಂದಿಗೆ ಕನೆಕ್ಷನ್ನೂ ಇಲ್ಲ
ಅದಕೆಂದೇ ಸತ್ತ ರೈತನ ಸೂತಕವಿದ್ದರೂ
ಇಲ್ಲಿ ಸಮ್ಮೇಳನ ಸಂಭ್ರಮಗಳು ನಡೆಯುತ್ತವೆ
ಕರುಳಿನ ಬೇನೆಯರಿಯದ ಮೆದುಳು
ಕೊಂದವನಿಗೇ ಜೈಕಾರ ಹಾಕುತ್ತದೆ
ಇನ್ನು ವೈರಸ್ ಗಾರ್ಡ್‌ಗಳಾಕಿ ಪ್ರಯೋಜನವಿಲ್ಲ
ಮೆಮೊರಿ ಮರೆಯದ ಮದರ್ ಬೋರ್ಡ್ ಹಾಕಬೇಕು
ಮನುಷ್ಯತ್ವಕ್ಕೆ ವೈರಸ್ ಹತ್ತದ ಸಾಫ್ಟ್‌ವೇರನ್ನು ಹಾಕಬೇಕು
ಅದಕ್ಕೆ ಬೇಕಾದ ಪ್ಲಾಟ್‌ಫಾರಮ್ಮು ಇಲ್ಲವೆಂದರೆ
ನಮ್ಮ ಲ್ಯಾಪು ಮತ್ತದರ ಟಾಪು ಎರಡನ್ನೂ ಬದಲಿಸಬೇಕು.

• ಶಿವಸುಂದರ್

...ಪಾನ್ ದೇಸದೋರು ಇರುಬುನ ಜಾತಿ ಜನ ಕಂಡ್ರ

...ಗ್ರಿ ಜಪಾನ್ ದೇಶ ಕೊಚ್ಚಕೊಂಡು ಹೋಗಿದ್ದನ್ನು ...ತ್ತ ಕಾಳಮಾವನನ್ನು ಬೆಚ್ಚಿಸಿದ್ದ. ಈ ನಡುವೆ ...ತಪ್ತ ರಾಜಕಾರಣಿಯಂತಿದ್ದ ಹಿರೀಸೇವೆ ಅಣ್ಣಯ್ಯನ ...ಲ್ಲಾರಿಗೂ ಬೇಕಿರಲಿಲ್ಲ. ಆದರೂ ಸೀರ ಮಧ್ಯೆ ...ಣ್ಣಯ್ಯನ ಗುಣಗಾನ ಮಾಡುತ್ತಲೇ ಇದ್ದ ಅಣ್ಣಯ್ಯನ ...ವನ್ನು ಮುಕ್ತಾಯ ಮಾಡಲು ಹವಣಿಸಿದ ಉಗ್ರಿ, ...ನೇಳದ್ಯಲ್ಲ ಸರಿ ಕಣೊ ಸೀರ ಮಾವ, ಆದ್ರು ...ಯ್ಯ ಕಡಿಗಾಲ್ದಲ್ಲಿ ಬಜೆಪಿಗೋಗಬಾರದಿತ್ತು."

...ಂಗ್ರೆಸ್ಸಿನೋರು ಸರಿಯಾಗಿ ನೋಡಿಕಂಡಿದ್ರೆ ...ಕೋಯಿತ್ತಿದ್ದಾ?"

...ಯ ಉ ಸೀ ಮೆ — ...ಡ್ಡಿಪುರಾಣ

▸ ಬಿ. ಚಂದ್ರೇಗೌಡ

...ರಿಯಾಗಿ ನೋಡಿಕಳಕ್ಕೆ ಅವುನೇನು ದನವೇನೊ? ...ಜ ಅರಸು ದ್ಯಾವೇಗೌಡನ್ನ ತುಣಿಬೇಕು ಅಂತ ...ಯ್ಯನ್ನ ಮಂತ್ರಿ ಮಾಡಿ ಮ್ಯಾಕ್ಕೆ ತಂದ. ಅಮ್ಯಾಲೆ ... ಅಧಿಕಾರಕ್ಕೆ ಬಂದಾಗ್ಯಲ್ಲ ಅಣ್ಣಯ್ಯ ಮಂತ್ರಿಯಾಗಿದ್ದ ...ಡೆಲಿ ಯಸ್ಸೆಂ ಕಿಷ್ಣ ರೆವಿನ್ಯೂ ಕಾತೆ ಕೊಟ್ಟು ...ನ್ನ ನೋಡಿದಂಗೇ ನೋಡಿಕಂಡಿದ್ದ. ಅಪ್ಪಾದ್ರು ... ಬಾಗಲಿಗೋಗಿ ತೀರಿಕಂಡ್ರೆ ಯಾರಿಗಳು ...ಳು" ಎಂದ ಉಗ್ರಿ.

...ವೇಗೌಡ್ರಿಗೋಲಿಸಿದ್ರೆ ಅಣ್ಣಯ್ಯ ವಳ್ಳೊನು ಕಂಡ್ಯ."

...ವೇಗೌಡನಿಗ್ಯಾಕೋಲುಸ್ತಿ? ಕತ್ತಿಗೂ, ಕುದಿರಿಗೂ ... ಮಾವನೆ ಅಂತ ದ್ಯಾವೇಗೌಡನೆ ಬ್ಯಾರೆ, ...ಯ್ಯನೆ ಬ್ಯಾರೆ."

...ನೇಳಿದ್ದು ಗುಣದಲ್ಲಿ ಕಂಡ್ಯ."

...ದೇನೊ ನಿಜ. ಪಾಪ ಅಣ್ಣಯ್ಯ ರಾಜಕಾರಣದಲ್ಲಿ ... ತುಣಿಲಿಲ್ಲ, ಯಾರಿಗೂ ಅನ್ಯಾಯ ಮಾಡಲಿಲ್ಲ, ...ನೂ ಲಪಟಾಯಿಸಲಿಲ್ಲ, ಆದ್ರು ಪಟೇಲನ ಮಗ ...ಬೇಕೊ ಅಂಗಿದ್ದ."

...ಳ್ಳೊಳ್ಳೆ ಕ್ಯಲಸ ಮಾಡಿಸಿದ್ದನಂತೆ ಕಂಡ್ಯ" ಎಂದ

"ಊ ಕಣ ಮಾವ. ಆ ಕಾಲದಲ್ಲೇ ಚನ್ನಾಪಟ್ಟದ ತಾಲೋಕಿನ ಯಲ್ಲ ಊರಿಗೂ ಬಸ್ಸ ಬರಂಗೆ ಮಾಡಿದ."

"ವಸಿ ಜನಕೆ ಕ್ಯಲಸ ಕೊಡಿಸಿದ್ನಲ್ಲ" ಎಂದ ಸೀರ.

"ನಿಜ ಕಣೊ, ಈ ಹಾಸನದ ಡಿಪ್ಪೋದಲ್ಲಿರೊ ಡ್ರೈವರ್, ಕಂಡಕ್ಟರ್‌ಲ್ಲ ಅವುನು ತುಂಬಿದವೆಯ. ಅದೂ ಅಲ್ದೆ ಮೇಷ್ಟ್ರ ಕಲಸಕ್ಕೆ ವಸಿ ಜನ ಸೇರಿಸಿದ್ನೆ."

"ಅವುನೆಡ್ತಿ ಸತ್ತು ಭಾಳ ವರ್ಸಾಗಿತ್ತಲವೆ?" ಎಂದಳು ಜುಮ್ಮಿ.

"ಊ ಕಣೆ. ಪಾಪ ಸಾಯಬಾರದ ವಯಿಸಲ್ಲಿ ಹೆಡತಿ ಸತ್ತಲು. ಅಂಗಾಗಿ ಶ್ರೀಕಂಠಯ್ಯ ತಿರಗ ಮದಿವಾಗಂಗಿಲ್ಲ, ಸುಮ್ಮನಿರಂಗಿಲ್ಲ ಆ ತರ ಪರದಾಡಿಬುಟ್ಟ. ರಾಜಕೀಯದಲ್ಲಿದ್ದ ಲೀಡ್ರುಗಳಿಗೆ ಹೆಡತಿ ಸತ್ರೆ ಏನೂ ತ್ವಂದ್ರೆ ಇಲ್ಲ, ಯಾಕಂದ್ರೆ ಅಲ್ಲಿ ತಲಿಡಕರಿರುತಾರೆ. ಅದೇ ನಮ್ಮಂಥೋರೆಡ್ತಿ ಸತ್ರೆ ಭಾಳ ಕಷ್ಟ."

"ಅದ್ಯಾರನೊ ಮಡಿಕಂಡಿದ್ನಂತಲ್ಲಾ?" ಎಂದ ಸೀರ. ಆ ಮಾತಿಗೆ ಸಿಟ್ಟಾದ ಕಾಳಮಾವ,

"ಆ ಸುದ್ದಿ ಕಟಗಂಡೇನ್ಲ ಈಗ? ಅಣ್ಣಯ್ಯ ದ್ವಡ್ಡ ಮನ್ಸ. ಜನಾಂಗಕ್ಕೆ ಬೇಕಾದೋಟು ಅನುಕೂಲ ಮಾಡಿದ. ಹೈಗ್ಗಾಳವಾಗಿ ಬದುಕಿದ. ಈ ತೀರಿಕಂಡ. ಅದು ಮಾತಾಡದು ಬುಟ್ಟು ಅವುಳಿಟಗಂಡಿದ್ದ ಇವುಳ ಮಡಿಕಂಡಿದ್ದ ಅನ್ನೊ ಸುದ್ದಿ ತಗಂಡು ಏನು ಮಾಡಂಗಿದ್ದಿರಿ ನೀವು?"

"ಅವುನು ಮಾಡಿರೊ ಉಪಕಾರ ಮಾತಾಡಕಿಂತ ಇವೇ ಚನಾಗಿರತವೆ ನಮ್ಮ ಸೀರಮಾವನಿಗೆ" ಎಂದು ಉಗ್ರಿ ಸೀರನ ವೋಲೆ ರೇಗುವಾಗ ವಾಟಿಸ್ಸೆ ಕಾಣಿಸಿಕೊಂಡು,

"ದ್ವಡಪ್ಪಾ, ಜಪಾನ್ ದೇಸದ ಭೂಕಂಪ ಇಲ್ಲಾಗಿದ್ರೆ ನಮ್ಮ ದೇಶ ಉಳಿತಿರಲಿಲ್ಲ ದ್ವಡಪ್ಪ" ಎಂದ.

"ನಿಜ ಬುಡು. ಇಲ್ಲಾವುದೊ ಹಳ್ಳರದು ಮನಿಗಳು ಕೊಚಗಂಡೋಗಿರದ್ನೆ ತಡಕಳಕ್ಯಾಯ್ತಾಯಿಲ್ಲ, ಇನ್ನೆನಾರ ಭೂಕಂಪಾದ್ರೆ ಉಳದವೆ ಇವು."

"ಈ ಪ್ರಪಂಚದಲ್ಲಿ ನಿಜವಾದ ಗಂಡುಜನ ಅಂದ್ರೆ ಜಪಾನ್ ದೇಸದೋರು ಕಣೊ" ಎಂದ ಉಗ್ರಿ.

"ಎಸ್, ಡೆಪನೆಟ್ಲಿ ಕಣೊ ಉಗ್ರಿ. ಅಮೆರಿಕದೋರು ತಂದು ಹಾಕಿರೊ ಅಣುಬಾಂಬಿನ ಜಾಗ ಏನಾಯ್ತಪ್ಪ ಅನ್ನಂಗೆ ದೇಶ ಕಟ್ಟಿ ನಿಲ್ಲಿಸಿದ್ರು. ಈ ಭೂಕಂಪಕೆ ಸವಾಲಾಗಿ ದೇಶ ಕಟತರೆ ನೋಡು."

"ಒಂಥರ ಇರುಬುನ ಜಾತಿ ಜನ ಅವುರು."

"ನಿಜ ಕಣೊ. ಯಾವಾಗ್ಲು ಕ್ಯಲಸ ಮಾಡೊ ಜನ ಅಂದ್ರೆ ಅವುರೆಯ. ಅಂಥೋರ ಯಾವ ಬಾಂಬು, ಭೂಕಂಪ, ಏನೂ ಮಾಡಕ್ಯಾಗದಿಲ್ಲ."



"ಜಪಾನ್ ನಾಟಿ ಬಂದಿದ್ದು ಅವುರಿಂದ್ಲೆ ಅಲವೇನ್ಲ" ಎಂದ ಸೀರ.

"ಊ ಚಿಗಪ್ಪ, ಅದಕೂ ಮದ್ಲು ನಾವು ಯಂಗೆ ನಾಟಿ ಮಾಡತಿದ್ವೊ ಅಂದ್ರೇ ನಮ್ಮ ಬದುಕ್ಯಂಗಿತ್ತೊ ಅಂಗೆ ಸಸಿ ನಾಟನು ಮಾಡತಿದ್ವೊ. ನಾಕಾ ಮೂಲಿಗೂ ಲೈನು ಕಾಣಂಗೆ ನಾಟಿ ಮಾಡದು ಕಲ್ತಿದ್ದೇ ಜಪಾನ್ ದೇಸದೋರು ತೋರಿ ಕೊಟ್ಟ ಮ್ಯಾಲೆ" ಎಂದ ವಾಟಿಸ್ಸೆ.

"ಏಟು ಜನ ಸತ್ತರಂತೇ" ಎಂದ ಕಾಳಮಾವ.

"ಲಕ್ಷಾಂತರ ಜನ ಸತ್ತಿರಬವುದು ದ್ವಡಪ್ಪ, ಆದ್ರೇ ಅವುರು ನಮ್ಮಂಗೆ ಹೇಳಿಕಳದಿಲ್ಲ, ಏ ಒಂದತ್ತದನೈದು ಸವುರ ಸತ್ತಿರಬವುದು, ಡೋಂಟ್ ವರಿ, ನಾವ್ಯಲ್ಲಾನು ನಿಭಾಯಿಸಿಗತ್ತಿವಿ ಅನ್ನೊ ಜನ. ಅಗೇ ನಮ್ಮಲ್ಲಿ ಅಂಗಾದ್ರೆ ಇಡೀ ಪ್ರಪಂಚವೇ ಬಂದು ನೋಡಂಗೆ ಕಿರಿಚಿಗತ್ತಿವಿ. ಏನು ಕೊಟ್ರು ಸಾಲದಿಲ್ಲ ನಮಿಗೆ" ಎಂದ ವಾಟಿಸ್ಸೆ.

"ಲೇ ವಾಟಿಸ್ಸೆ, ಇದೊಂದು ವಿಷಯದಲ್ಲಿ ನೀನು ತಪ್ಪು ಮಾತಾಡ್ತಾಯಿದ್ದಿ. ನಮ್ಮ ಜನ ಅನಾಹುತಕ್ಕೆ ಸಿಕ್ದಾಗ ಅಳತರೆ ನಿಜ, ಆದ್ರೆ ಯಲ್ಲಾನು ತಮ್ಮ ಹಣೆಬರದ ಮ್ಯಾಲಾಕ್ತ ಕಾಲ ಹಾಕಿಬುಡ್ತರೆ ಕಣೊ" ಎಂದ ಉಗ್ರಿ.

"ಸಾರಿ ಕಣೊ ಉಗ್ರಿ, ನೀನೇಳದು ನಿಜ. ಆ ಉತ್ತರ ಕರ್ನಾಟಕದಲ್ಲಿ ಪ್ರವಾಹ ಬಂದು ಬೀದಿಗೆ ಬಿದ್ದೋರು ಇದ್ಯಲ್ಲ ನಾವು ಪಡಕಂಡು ಬಂದಿದ್ದು ಅಂತ ಸುಮ್ಮನಾದ್ರೆ ವರತೂ, ಮೂವತ್ತು ಕೋಟಿ ಖರ್ಚು ಮಾಡಿ ವಿಶ್ವ ಕನ್ನಡ ಮೇಳ ಮಾಡಿದೋರತ್ರ ತಿರಗ ಕೈ ಚಾಚಲಿಲ್ಲ. ಯಾರಿಗೋಲಿಸಿದ್ರು ನಮ್ಮ ಜನಕೆ ಸ್ವಾಭಿಮಾನನೆ ಜಾಸ್ತಿ ಕಣೊ."

"ಎಡೂರಪ್ಪಾಕೆ ಅಲ್ಲಿ ಮನೆ ಕಟ್ಟಿಕೊಡ್ಲಿಲ್ಲಾ" ಎಂದ ಕಾಳಮಾವ.


"ಮನೆ ಕಳಕೊಂಡೋರ್‍ಯಲ್ಲ ಬಡುವುರು, ಹಿಂದುಳದೋರಂತೆ ದ್ವಡಪ್ಪ ಈ ಬಜೆಪಿ ಹೇಳಿಕೇಳಿ ಮೇಲುಜಾತಿ ಜನಗಳ ಸರಕಾರ. ಅಂಗಾಗಿ ಕಟ್ಟಿಕೊಡಲಿಲ್ಲವಂತೆ" ಎಂದ ವಾಟಿಸ್ಸೆ.

"ನಿನ್ನ ಮಾತು ಸರಿಲ್ಲ ಕಣೊ ವಾಟಿಸ್ಸೆ. ಈ ಎಡೂರಪ್ಪ ಒಂಥರ ಬಚ್ಚೆ ವಾತ ಇದ್ದಂಗೆ. ಕೆಲ ವಾತ ಆಡಿನಿಂದೆ ತಿರಿಕಂಡು ಬಚ್ಚೆ ಹಾಕತವೇ ವರತು ಹತ್ರದೂಯಿಲ್ಲ, ಬ್ಯಾರೆ ವಾತನಿಗೆ ಅವುಕಾಸನೂ ಕೊಡದಿಲ್ಲ, ಆ ತರದ ಮನಸ. ಯಾವ ಸಮಸ್ಯೆನೇ ತೋರು ಹಣ ಕೊಡ್ತಿನಿ ಅಂತನೆ ಅಷ್ಟೆ. ಕೊಟ್ಟೊ ಬುಟ್ಟೋ ಆ ಕ್ಯಲಸ ಆಯ್ತೋ ಇಲವೊ ಅಂತ ನೋಡದಿಲ್ಲ. ಆ ಬಾಗಲಕೋಟೆ ನವನಗರ ಕಟ್ಟಿದ ಜಾಮದಾರನ್ನ ಅಲ್ಲಿಬುಟ್ಟು ದುಡ್ಡು ಕೊಟ್ಟಿದ್ರೆ ಈಟೊತ್ತಿಗೆ ಯಲ್ಲಾರಿಗೂ ಮನೆ ಕಟ್ಟಿಕೊಡೋನು."

"ನನ್ನ ಪ್ರಶ್ನೆ ಅದಲ್ಲ ಕಣೊ ಉಗ್ರಿ. ವಿಶ್ವ ಕನ್ನಡ ಮೇಳಕೆ 30 ಕೋಟಿ ಕೊಟ್ಟು ಅದ ಮೂರುದಿನಕೆ ಖರ್ಚು ಮಾಡ್ತಿರಲ್ಲಾ; ಅದೇ ತರ ಪ್ರವಾಹದ ಪ್ರಾಬ್ಲುಮ್ಮಿಗೂ ಶ್ಯಾಂಕ್ಷನ್ ಮಾಡಿ ಊರು ಕಟ್ಟಿಕ್ಯಾಯಿತ್ತರಲಿಲ್ಲವೆ ಅನ್ನದು ನನ್ನ ಪ್ರಶ್ನೆ. ಹೋಗ್ಲಿ ಬುಡು, ಈ ಎಡೂರಪ್ಪನಂಥೋರಿಗೆ ಇಂತವೆಲ್ಲ ಹ್ವಳಿಯದಿಲ್ಲ." ●

ಅವಮಾನದ ಹಲವು ಸ್ತರಗಳು

...ಪೋಪ್ ಜಾನ್ ಪಾಲ್ ಅವರಿಗೆ ಒಂದು ಮನವಿ' ಎಂಬ ಟಿಪ್ಪಣಿಯನ್ನು ನಾನು ಬರೆದದ್ದು ಯಾಕೆ ಎಂದು ...ಗಿ ವಿವರಿಸಬೇಕಾಗಿದೆ. ಒಬ್ಬ ಮನುಷ್ಯನ ಮೇಲೆ ಇನ್ನೊಬ್ಬನ ದಬ್ಬಾಳಿಕೆ ಸಹಿಸುವುದು ಕಷ್ಟ; ಆದರೆ ...ಮನವನ್ನು ಮನುಕುಲ ಅನೇಕ ಸಲ ನೋಡಿದೆ. ಆದರೆ ಮನುಷ್ಯ ಕಂಡುಹಿಡಿದಿರುವ ಅವಮಾನಿಸುವ ...ಗೆಯ ರೀತಿಗಳು ವಿಚಿತ್ರ. ಅತ್ತೆ ತನ್ನ ಸೊಸೆಗೆ ಅವಮಾನ ಮಾಡುವುದು, ಗಂಡ ಹೆಂಡತಿಗೆ ...ಭಂಗ ಮಾಡುವುದು ಇವೆಲ್ಲಕ್ಕಿಂತ ಕ್ರೂರವಾದ ಅವಮಾನದ ರೀತಿಗಳನ್ನು ಮನುಷ್ಯ ಕಂಡುಹಿಡಿದಿದ್ದಾನೆ. ಇದೆಲ್ಲ ಇಲ್ಲಿ ಸಾಧ್ಯವಾಗುವುದು ಯಾಕೆ ಎಂದು ನಮ್ಮೆಲ್ಲರಿಗೆ ಗೊತ್ತು. ಜೀವಿಸಲು ನಮಗೆಲ್ಲ ಆಶೆ. ಇವತ್ತು ಸಾಯಬಹುದಾದ ವ್ಯಕ್ತಿ ನಾಳೆಯ ಸೂರ್ಯೋದಯ ನೋಡಿ ಆನಂದಿಸುತ್ತಾನೆ; ತನಗೆ ಇನ್ನೊಂದು ದಿನ ದೊರೆತದ್ದಕ್ಕೆ ಧನ್ಯವಾಗುತ್ತಾನೆ.




ಇಂಥದನ್ನು ಕಾಣಲಾರದ ಧರ್ಮಗುರುಗಳು, ಪೋಪ್ ಕಾಲ್‌ಗಳು ಎಲ್ಲವೂ ನೀತಿಯ, ಸನ್ನಡತೆಯ, ಕರುಣೆಯ ಮಟ್ಟದಲ್ಲಿ ನಡೆದುಹೋಗುತ್ತದೆಂದು ತಿಳಿಯುತ್ತಾರೆ. ಒಬ್ಬ ಮನುಷ್ಯ ಸದ್ಗೃಹಸ್ಥನಾಗಿದ್ದು ದೇವರನ್ನು ಆರಾಧಿಸಿ, ಪೋಪ್‌ರನ್ನು ಮನ್ನಿಸಿ ಎಲ್ಲರಿಂದ ಒಳ್ಳೆಯವನೆನ್ನಿಸಿಕೊಂಡು ತೀರಿಕೊಂಡರೆ ಅವನ ಬಾಳು ಆದರ್ಶದ್ದು. ಆದರೆ ಈ ಬದುಕನ್ನು ಮೀರಿದ್ದು ಇಲ್ಲಿದೆ.

ಚೈನಾದ ಸಾಂಸ್ಕೃತಿಕ ಕ್ರಾಂತಿಯ ವೇಳೆಯಲ್ಲಿ ಮನಸ್ಸುಗಳನ್ನು ತಿರುಚಿದ್ದು, ರಷ್ಯಾದ ಬೋಲ್ಶೆವಿಕ್ ದಬ್ಬಾಳಿಕೆಯ ಕಾಲದಲ್ಲಿ ಹೇಳಬೇಡದ್ದು ಹೇಳಿಸಿದ್ದು, ಸರ್ಬಿಯಾದ ಕ್ರೂರಿಗಳು ಜನರನ್ನು ಗೊಂಬೆಗಳಿಗಿಂತ ಕಡೆಯಾಗಿಸಿದ್ದು, ಮಾಡಬಾರದ್ದನ್ನು ಮಾಡಿಸುವುದಕ್ಕಿಂತ ಹೆಚ್ಚಾಗಿ ...ಬಾರದ್ದನ್ನು ಹೇಳಿಸಿದ್ದು, ನಂಬಬಾರದ್ದನ್ನು ನಂಬಿಸಿದ್ದು.... ಇದು ಪ್ರಾಣಿಲೋಕದಲ್ಲಿ ...ಕದಲ್ಲಿ ಆಗದಿರುವ ಚಿತ್ರಹಿಂಸೆ ಮತ್ತು ಅವಮಾನ. ಕಂಚನಹಳ್ಳಿ ಗಂಗಾಧರಮೂರ್ತಿಯವರ ...ಬದಿಂದ ಹೀಗೆ ಮಾಡಬಾರದ್ದನ್ನು ಮಾಡಿಸಿದರು–ಶಿವರಾಮೇ ಗೌಡರ ಪರವಾಗಿ ... ಮಾಡಲು ಒತ್ತಾಯಿಸಿ ಹಿಂಸಿಸಿದರು ಎಂಬ ಸುದ್ದಿ ಕೇಳಿ ದಂಗಾಗಿ ಅದನ್ನು ...ದು ಒಂದು ಉದಾಹರಣೆಯಾಗಿ ನೀಡಿದೆ.

...ಗಂಗಾಧರಮೂರ್ತಿಯವರ ಪತ್ನಿ, ತಾವು ಪ್ರಚಾರ ಮಾಡಲಿಲ್ಲ ಎಂದು ಹೇಳಿದ್ದಾರೆ; ...ಹಿಂಸೆಯನ್ನು ಅನುಭವಿಸದಂತೆ ತಮ್ಮ ಸುತ್ತಣ ಜನ ತಮ್ಮನ್ನು ರಕ್ಷಿಸಿದ್ದಾರೆ ಎಂದು ...ದ್ದಾರೆ. ಇದರಿಂದ ನನಗೆ ಕೊಂಚ ಸಮಾಧಾನವಾಗಿದೆ.

...ನರೆ ಮನುಷ್ಯಲೋಕದ ಮಾನ, ಅವಮಾನದ ಪರಿಗಳನ್ನು ಸೋಜಿಗದಿಂದ ನೋಡುತ್ತಲೇ ... ನಾವು ಜೀವ ಬಿಡಲು ತಯಾರಿದ್ದರೆ ಮಾತ್ರ ಇಂಥ ಹಿಂಸೆಯಿಂದ ಮುಕ್ತರಾಗಲು ...ಗಲು ಸಾಧ್ಯವಾಗುತ್ತದೆ. ಆದರೆ ಜೀವ ಎಷ್ಟು ಅಮೂಲ್ಯ!



ವಯಸ್ಕರ ಶಿಕ್ಷಣ?

ನನಗೆ ವೈಯಕ್ತಿವಾಗಿ ಈ ವಯಸ್ಕರ ಶಿಕ್ಷಣ ಸಮಿತಿಯ ಬಗ್ಗೆ ಒಳ್ಳೆಯ ನೆನಪುಗಳಿವೆ; ನಾನು ಆಗತಾನೆ ಓದುವುದನ್ನು ಕಲಿಯುತ್ತಿದ್ದಾಗ ಕೆಲವು ಅತ್ಯುತ್ತಮ ಕತೆಗಳನ್ನು ನನ್ನ ಕೈಯಲ್ಲಿಟ್ಟ ನಮ್ಮೂರ ಲೈಬ್ರರಿ ಈ ಸಮಿತಿಯದು. 'ನಮಗೆಷ್ಟು ಭೂಮಿ ಬೇಕು?' ಧ್ರುವ, ಚಂದ್ರಹಾಸ ಮುಂತಾದ ಕತೆ ಓದಿದ್ದು ಈ ಪುಟ್ಟ ಪುಸ್ತಕ ಭಂಡಾರದಲ್ಲಿ. ಗೊರೂರು ರಾಮಸ್ವಾಮಿ ಅಯ್ಯಂಗಾರ್‍ರ 'ಗರುಡಗಂಬದ ದಾಸಯ್ಯ' ಎಂಬ ಪುಸ್ತಕವನ್ನು ನಾನು ನೋಡಿದ್ದು, ಓದಿದ್ದು ಇದರಲ್ಲಿ. ಆಮೇಲೆ ಆ ಪುಸ್ತಕ ನನಗೆ ಸಿಕ್ಕಲೇ ಇಲ್ಲ. ರಾಮಸ್ವಾಮಿ ಅಯ್ಯಂಗಾರ್‍ರು ಪರಿಚಯವಾದರು. ಅವರ ಮಗ ಸೀತಾರಾಮ್ ನನ್ನ ಗೆಳೆಯನಾಗಿದ್ದ. ಅಯ್ಯಂಗಾರ್‍ರ 'ಆಯ್ಸು', 'ರಸಿಕರು', 'ವೀರಭದ್ರಾ ಬಾಲಿ', 'ಶಾಲು ಸಾಬಿ' ಎಲ್ಲ ನನ್ನ ಜೀವನಕ್ಕೆ ಬಂದುಹೋದವು. ಆದರೆ ವಯಸ್ಕರ ಶಿಕ್ಷಣ ಸಮಿತಿ ಮಾತ್ರ ಎಂದೋ ತೀರಿಕೊಂಡಿತ್ತು.



ಟಿ.ಆರ್. ನಾಗಪ್ಪ ಎಂಬುವರು ಈಗ 'ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ–ಒಂದು ಚಿಂತನೆ' ಎಂಬ ಪುಸ್ತಕವನ್ನು ಬರೆದು ತಾವೇ ಪ್ರಕಟಿಸಿದ್ದಾರೆ. ಹಳೇ ಕಾಲದ ವ್ಯಕ್ತಿ; ಆದರ್ಶವುಳ್ಳ ವ್ಯಕ್ತಿ. ಗಾಂಧೀಜಿಯಿಂದ ಪ್ರಭಾವಿತರಾಗಿ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ, ಅಚ್ಚುಕಟ್ಟಾಗಿ ಮಾಡಿ ಜನಸೇವೆ ಮಾಡಬೇಕು ಎಂಬ ಶ್ರದ್ಧೆ ಇಟ್ಟುಕೊಂಡು ದಶಕಗಟ್ಟಲೆ ವಯಸ್ಕರ ಶಿಕ್ಷಣ ಸಮಿತಿಗೆ ದುಡಿದ ಈ ನಾಗಪ್ಪನವರ ಕಣ್ಣೆದುರೇ ಭ್ರಷ್ಟರ ಸಾಕ್ಷರತೆಯ ಅವಾಂತರ ಸಾಗಿದೆ. ಅವರ ಕಾಲದ ಶಿಕ್ಷಣಕ್ಕೂ ಈಗಿನ ಕಾಲದ ಶಿಕ್ಷಣಕ್ಕೂ ಇರುವ ವ್ಯತ್ಯಾಸ ಅವರನ್ನು ದುಃಖಿತರನ್ನಾಗಿ ಮಾಡಿದೆ.

ಏನಿಲ್ಲವೆಂದರೂ ನಾಗಪ್ಪನವರ ನಿರ್ಮಲ ನೋಟಕ್ಕಾಗಿ ಈ ಪುಸ್ತಕವನ್ನು ಸಾಕ್ಷರತೆಯ ಆಂದೋಲನದಲ್ಲಿ ತೊಡಗಿರುವವರು ಓದುವುದು ಒಳ್ಳೆಯದು. ಹಾಗೂ ಭಾರತದಲ್ಲಿ ಕೆಲವರು ಕಟ್ಟಿದ ಒಳ್ಳೆಯ ಸಂಸ್ಥೆಗಳು ಹೇಗೆ ಸ್ವಾರ್ಥಿಗಳು ಮತ್ತು ಭ್ರಷ್ಟರಿಂದಾಗಿ ಮುರಿದುಬಿದ್ದವು ಎಂಬುದನ್ನು ಸಾಂಕೇತಿಕವಾಗಿ, ಸ್ಪಷ್ಟವಾಗಿ ಈ ಪುಸ್ತಕ ತೋರುತ್ತದೆ.

ಈಗ ಅನೇಕ ವಿಷಯಗಳು ಸಾಂಕೇತಿಕ ಮಾತ್ರ. ವಯಸ್ಕರ ಶಿಕ್ಷಣದ 'ಐಡಿಯಾ' ಡೆನ್ಮಾರ್ಕಿನಿಂದ ಬಂತೋ ರಷ್ಯಾದಿಂದ ಬಂತೋ ಮುಖ್ಯವಲ್ಲ; ಅದು ಇಲ್ಲಿ ಸ್ವಲ್ಪ ಕಾಲ ಲಕ್ಷಾಂತರ ಲಾಟೀನುಗಳಾಗಿ ಬೆಳಕು ಚೆಲ್ಲಿ ಕಣ್ಮರೆಯಾಯಿತು. ಆದರಿಂದ ವಿದ್ಯಾವಂತರಾದವರು (ಈಗಿನ ಸಾಕ್ಷರತೆಯ ಆಂದೋಲನದಿಂದ ಆದವರಂತೆಯೇ) ತೀರಾ ಕಡಿಮೆ.

ವಾಸ್ತವವನ್ನು ನಾಗಪ್ಪನವರಂಥವರು ನೋಡುವುದು ಕಷ್ಟ. ಈ ಬಗೆಯ ಜನರ ಸಜ್ಜನಿಕೆಯೇ ಅಂಥದು.

–ಫೆಬ್ರವರಿ 15, 1995

ಮದುವೆ ಕರೆಯೋಲೆಯಲ್ಲಿ ವಧುವರರ ಹೆಸರೇ ಇಲ್ವಂತೆ!

ಬೆಳಗಾವಿಯ 2ನೇ ವಿಶ್ವ ಕನ್ನಡ ಸಮ್ಮೇಳನ ಅಭೂತಪೂರ್ವ ಯಶಸ್ಸು ಕಂಡಿತು ಎಂದು ಮಾಧ್ಯಮಗಳು ಸಾರುತ್ತಿವೆ. ಸಂಘಟಕರ ನಡುವೆ ನಡೆದ ಜಟಾಪಟಿ, ಕೈಕೈ ಮಿಲಾಯಿಸುವಿಕೆ ಸಮ್ಮೇಳನದಷ್ಟೇ ಅದ್ದೂರಿಯಾಗಿ ಪುಕ್ಕಟೆ ಮನರಂಜನೆ ನೀಡಿರುವುದನ್ನ ಕೇಳಿ, ನೋಡಿ ಆನಂದಿಸಿದ್ದೇವೆ. ಇದರ ನಡುವೆ ಅಲ್ಲಿನ ಮೇಯರ್ ಎನ್.ಬಿ. ನಿರ್ವಾಣಿಯವರು ತಮಗೆ ಸೂಕ್ತ ಸ್ಥಾನಮಾನ ನೀಡದೆ ನಿರ್ಲಕ್ಷಿಸಲಾಗಿದೆ ಎಂದು ಆರೋಪಿಸಿ ರಾಜೀನಾಮೆ ನೀಡುತ್ತೇನೆ ಎಂದದ್ದು, ನೀಡಿದ್ದೇನೆ ಎಂದದ್ದೂ ಸುದ್ದಿ ಆಯಿತು. ಆ ನಂತರದಲ್ಲಿ ಮಂತ್ರಿಯವರು ನಿಮ್ಮನ್ನು ನಿರ್ಲಕ್ಷಿಸಲಾಗಿಲ್ಲ ಎಂದು ಆಶ್ವಾಸನೆ ನೀಡಿದ ಮೇರೆಗೆ ಅವರ ಮಾನ 'ಇನ್‌ಟ್ಯಾಕ್ಟ್' ಆಗಿದೆ ಎಂಬುದರ ಅರಿವಾಗಿ ರಾಜೀನಾಮೆ ಹಿಂಪಡೆದರಂತೆ. ಸನ್ಮಾನ್ಯ ಮೇಯರ್ ಅವರ 'ಮಾನ' ಎಲ್ಲಿ ಹೋಗಿತ್ತು ಅಂದರೆ ಆಹ್ವಾನ ಪತ್ರಿಕೆಯಲ್ಲಿ! ಅಲ್ಲಿ ಅವರ ಹೆಸರೇ ಇರಲಿಲ್ಲವಂತೆ! 'ವಂತೆ' ಯಾಕೆ ಎಂದರೆ ಮಹಾಜನತೆಗೆ ಹಾಗಿರಲಿ, ಬಹಳ ಮಂದಿ ಆಹ್ವಾನಿತ ಮಹನೀಯರುಗಳಿಗೂ ಅದರ ದರ್ಶನ ಮಾಡುವ ಸೌಭಾಗ್ಯ ದೊರೆಯಲಿಲ್ಲ ಎಂಬ ಕಾರಣಕ್ಕಾಗಿ. ಆಹ್ವಾನ ಪತ್ರಿಕೆಯೂ ಗೋಪ್ಯ ಇರಬೇಕು! ಇರಲಿ.

ಈ ಆಮಂತ್ರಣ ನಡೆಯುತ್ತಿದ್ದ ಶುಭಮುಹೂರ್ತದಲ್ಲೇ ವಿಧಾನಪರಿಷತ್ ಅಧಿವೇಶನವೂ ನಡೆಯುತ್ತಿತ್ತು. ಪರಿಷತ್ತಿನ ಸದಸ್ಯರು ಅಂದರೆ ಜಾಣಾತಿಜಾಣರು ಅಲ್ಲವೇ? ಚುನಾಯಿತ ಪ್ರತಿನಿಧಿ ನಗರದ ಪ್ರಥಮ ಪ್ರಜೆಗೆ ಆಹ್ವಾನ ಪತ್ರಿಕೆಯಲ್ಲಿ ಸ್ಥಾನ ಇಲ್ಲ ಎಂದರೆ ಮಹಾಜನತೆಗೆ ಎಸಗಿದ ಅವಮಾನ ಎಂದು ಅರ್ಥೈಸಿದರು. ಸರ್ಕಾರವನ್ನೇ ತರಾಟೆಗೆ ತೆಗೆದುಕೊಂಡರು. ಇಂತಹ ಇಕ್ಕಟ್ಟಿನ ಪ್ರಶ್ನೆಗಳಿಗೆ ಪ್ರಚಂಡ ಜಾಣರೇ ಉತ್ತರಿಸುವುದು ಸಮಂಜಸ ಎಂದು ಪರಿಭಾವಿಸಿದ ಘನ ಸರ್ಕಾರ ತಮ್ಮ ಮಂತ್ರಿಮಂಡಲದಲ್ಲಿಯೇ ಅಂತಹ ಮೇಧಾವಿತನವನ್ನು ಮೈಗೂಡಿಸಿಕೊಂಡಿರುವ ಸನ್ಮಾನ್ಯ ಡಾ. ವಿ.ಎಸ್. ಆಚಾರ್ಯ ಅವರಿಗೆ ಈ ಜವಾಬ್ದಾರಿಯನ್ನು ವಹಿಸಿತು. ಶ್ರೀಯುತರು ಸಮರ್ಪಕವಾಗಿಯೇ ತಮ್ಮ ಕರ್ತವ್ಯವನ್ನು ನಿಭಾಯಿಸಿದರು. ಅದು ಹೇಗೆಂದರೆ 'ನಾನೂ ಎಂಟು ವರ್ಷಗಳ ಪರ್ಯಂತ ಮೇಯರ್ ಆಗಿದ್ದೆನು. ಆ ಸ್ಥಾನದ ಮಹತ್ವದ ಅರಿವು ನನಗಿದೆ. ನಮ್ಮ ಘನ ಸರ್ಕಾರವು ಅವರ ಹೆಸರನ್ನು ಬೇಕೆಂದು ಬಿಟ್ಟಿಲ್ಲ. ಆಹ್ವಾನ ಪತ್ರಿಕೆಯಲ್ಲಿ ಸ್ಥಳಾಭಾವ ಇದ್ದುದರಿಂದ ಬಿಡಲಾಗಿದೆಯಷ್ಟೇ' ಎಂಬ ಸ್ಪಷ್ಟನೆ ನೀಡುವ ಮೂಲಕ!

ಸ್ಥಳ ಸಾಲದೇ ಬಂದಲ್ಲಿ ಆಹ್ವಾನ ಪತ್ರಿಕೆಯ ಅಳತೆಯನ್ನೇ ಹಿಗ್ಗಿಸಬಹುದಾಗಿತ್ತು ಅಥವಾ ಅಕ್ಷರಗಳ ಗಾತ್ರವನ್ನೇ ಇಳಿಸಬಹುದಾಗಿತ್ತು ಎಂದು ಕೆಲವರು ಪ್ರತಿಕ್ರಿಯಿಸಬಹುದು. ಆದರೆ ಅದು ಅಷ್ಟು ಸರಳ ಅಲ್ಲ. ಪ್ರಸಿದ್ಧ ಜ್ಯೋತಿಷಿಗಳು ಸಮಾರಂಭದ ಯಶಸ್ಸಿಗೆ ಕೆಲವು ಸೂತ್ರಗಳನ್ನು ಸೂಚಿಸಿರಬಹುದು. ಆಹ್ವಾನ ಪತ್ರಿಕೆ ಅಳತೆ, ಅಕ್ಷರಗಳ ಗಾತ್ರ, ಇಂತಿಷ್ಟೇ ಇರಬೇಕೆಂದು ಆದೇಶಿಸಿರಬಹುದು. ಅದರಲ್ಲಿ ಯಾವುದೇ ವ್ಯತ್ಯಾಸ ಆದರೂ ಸಮ್ಮೇಳನವೇ ವಿಫಲವಾಗುವ ಸಂಭವವಿರುತ್ತಿತ್ತು!



ಹೀಗಾಗಿ ಅದನ್ನು ಬದಲಾಯಿಸಿ ಮೇಯರ್ ಅವರ ಹೆಸರನ್ನು ಮುದ್ರಿಸಬೇಕಾಗಿತ್ತು ಎಂಬ ಆಕ್ಷೇಪ ಸಮರ್ಥನೀಯವಲ್ಲ. ಇದನ್ನು ಅರಿತೇ ಜಾಣರ ಮನೆ ಎಂದು ಕರೆಯಲಾಗುವ ಪರಿಷತ್ತಿನ ಸನ್ಮಾನ್ಯ ಸದಸ್ಯರೆಲ್ಲರೂ ಮಾನ್ಯ ಮಂತ್ರಿಗಳ ವಿವೇಕಯುತ ಸಮರ್ಥನೆಗೆ ಸಮ್ಮತಿಸಿದರು ಎಂಬುದನ್ನು ಆಕ್ಷೇಪವೆತ್ತುವವರ ಗಮನಕ್ಕೆ ತರಲು ಬಯಸುತ್ತೇವೆ. ಇಂತಹ ಸಮಜಾಯಿಷಿಯ ನಂತರವೂ ಕೆಲವು ಅತಿ ಬುದ್ಧಿವಂತ ಓದುಗರು 'ಇದು ಹೇಗಾಯಿತು ಅಂದರೆ ಮದುವೆ ಆಮಂತ್ರಣ ಪತ್ರಿಕೆ ಅದ್ದೂರಿಯಾಗಿದೆ. ಆದರೆ ವಧುವರರ ಹೆಸರನ್ನು ಸ್ಥಳಾಭಾವದಿಂದ ಹಾಕಲು ಸಾಧ್ಯವಾಗಿಲ್ಲ ಅಂದಹಾಗಾಯಿತು' ಎಂಬ ಗೇಲಿಮಾತು ಆಡಬಹುದು. ಆದರೆ ಈ ಮಾತನ್ನು ನಾವು ಒಪ್ಪುವುದಿಲ್ಲ, ಯಾಕೆಂದರೆ ಮದುವೆಗೆ ವಧುವರರ ಹೆಸರನ್ನು ನೋಡಿಬರುವವರು ವಿರಳ. ಅವರ ತಂದೆತಾಯಿಗಳ ಅಂತಸ್ತು ಅಧಿಕಾರದ ಮೋಡಿಗೆ ಒಳಗಾಗಿ ಹೀಗೆ ಮಾಡುವರು ಎಂದೇ ನಮ್ಮ ಅಚಲ ನಂಬಿಕೆ. ಆದುದರಿಂದ ವಧುವರರ ಹೆಸರಿಲ್ಲದ ಆಹ್ವಾನ ಪತ್ರಿಕೆ ಅಪರಾಧ ಅಲ್ಲ; ಹಾಗೇನೇ ಇಲ್ಲಿಯೂ ಕೂಡ!

ಹಣಪಡಿ ಹೊರಕ್ಕೆ ನಡಿ

ಇನ್ನೋ ನಾಣಿ ಬೇಡ

ಹಲವರ ಕೂಗು

ನರಿಯ ಕೂಗು ಗಗನ ಮುಟ್ಟಲಿಲ್ಲ

ನಾರಾಯಣಮೂರ್ತಿ ಬಂದರು.

ಉದ್ಘಾಟನೆ ಮಾಡಿದರು. ಉದ್ಘಾಟನೆ ಅಂದಮೇಲೆ ಭಾಷಣನೂ ಇರಬೇಕಲ್ಲ, ಮಾಡಿದರು.

ಹಣದ ಹಿಂದೆ ಬೀಳಬೇಡಿ.

ಆಗ ಅದು ಓಡಿಹೋಗುತ್ತೆ.

ಕಷ್ಟಪಟ್ಟು ನಿಮ್ಮ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಿ.

ಹಣ ನಿಮ್ಮ ಹಿಂದೆ ಬೀಳುತ್ತೆ.

ಇದು ಅವರ ಭಾಷಣದ ತಿರುಳು.

ಉದ್ಘಾಟನೆಯ ದಿವಸ ರಾತ್ರಿ ಇದರ ಸಾಕ್ಷಾತ್ಕಾರ ಆಯಿತು.

ಕೆಲವು ಕಲಾವಿದರು ತಮ್ಮ ಕಲೆಯ ಪ್ರದರ್ಶನಕ್ಕೆ ಹಾತೊರೆಯುತ್ತಿದ್ದರು. ಆದರೆ ಏನು ಮಾಡ್ತೀರಿ. ಗೌರವಾನ್ವಿತ ಅತಿಥಿಗಳ ಭಾಷಣ ಕಲಾಪ್ರದರ್ಶನದ ಸಮಯವನ್ನೆಲ್ಲವನ್ನು ನುಂಗಿತ್ತು. ದೂರದೂರದ ಊರುಗಳಿಂದ ಬಂದಿದ್ದ ಕಲಾವಿದರಿಗೆ ಅವಕಾಶವೇ ದೊರೆಯಲಿಲ್ಲ. ಕಲಾಪ್ರದರ್ಶನಕ್ಕೆ ವಂಚನೆಯಾಗಿತ್ತು ನಿಜ. ಆದರೆ ಹಣಕ್ಕೇನೂ ಮೋಸ ಆಗಲಿಲ್ಲ. ರಾತ್ರಿ ಹನ್ನೆರಡಾದರೂ ವೇದಿಕೆ ಮೇಲೆ ಅವಕಾಶ ದೊರೆಯದಿದ್ದರೂ ಚೆಕ್ ನೀಡಿ ಹೊರಸಾಗಿಸಿದರು!

ಪಾರದರ್ಶಕ ಸ್ನಾನ!

ರಣಬಿಸಿಲು. ಸ್ನಾನ ಅತ್ಯಗತ್ಯ.

ಆದರೆ ಸ್ನಾನದ ಮನೆ ಎಲ್ಲಿ?

ಲಿಂಗರಾಜ ಕಾಲೇಜಿನ ಕ್ಯಾಂಪಸ್ ನೋಡಿ.

ತಾತ್ಕಾಲಿಕ ಸ್ನಾನದ ಮನೆ.

ಬಿದಿರಿನ ತಟ್ಟಿ ಬಳಸಿ ಚಚ್ಚೌಕದ ಆಕಾರ ನಿರ್ಮಿಸಿದ್ದರು. ಎರಡು ಬದಿಯಲ್ಲಿ ತಟ್ಟಿಗಳನ್ನು ಬಳಸಿ ಪ್ರತ್ಯೇಕ ಸ್ನಾನದ ಮನೆಗಳು. ಮುಂಭಾಗ ಸಂಪೂರ್ಣ ತೆರವು, ಬಾಗಿಲುಗಳಿಲ್ಲ.

ಹೆಂಗಸರು ಗಂಡಸರು ಎಲ್ಲರಿಗೂ ಒಟ್ಟಿಗೆ ಸ್ನಾನವೇ?

ಛೇ ಹಾಗೇನೂ ಇಲ್ಲ. ಮಧ್ಯದಲ್ಲಿ ಉದ್ದಕ್ಕೆ ಬಿದಿರಿನ ತಟ್ಟಿಯಿಂದ ಎರಡನ್ನೂ ವಿಭಾಗಗೊಳಿಸಲಾಗಿತ್ತು. ಒಂದು ಭಾಗ ಸ್ತ್ರೀಯರಿಗೆ ಇನ್ನೊಂದು ಭಾಗ ಪುರುಷರಿಗೆ.

ಆದರೆ.....

ಮಧ್ಯದ ಅಡ್ಡತಡಿಕೆ ಇದ್ದದ್ದು ನೆಲದಿಂದ ಒಂದೂವರೆ ಎರಡು ಅಡಿಗಳ ಮೇಲೆ!

ಪುರುಷರ ಸ್ನಾನಗೃಹದ ಒಳಹೊಕ್ಕು ಸ್ನಾನಕ್ಕೆ ಕುಳಿತರೆ ಮಹಿಳೆಯರ ಸ್ನಾನಗೃಹದ ಸಂಪೂರ್ಣ ದೃಶ್ಯ ನೋಡಬಹುದು. ಅದೇರೀತಿ ಸ್ತ್ರೀಯರ ಸ್ನಾನಗೃಹದಿಂದ ಪುರುಷರ ಸ್ನಾನಗೃಹದ ಸಂಪೂರ್ಣ ದೃಶ್ಯಗೋಚರವಾಗುತ್ತಿತ್ತು. ಒಂದು ರೀತೀಲಿ ಪಾರ ದರ್ಶಕ ಸ್ನಾನಗೃಹಗಳನ್ನೇ ನಿರ್ಮಿಸಲಾಗಿತ್ತು! ಇಂತಹ ಸ್ನಾನಗೃಹ ನಿರ್ಮಾಣಕ್ಕೆ ಕಾರಣೀಭೂತರಾದ ಇಂಜಿನಿಯರ್ ಮಹಾಶಯರ ಕಾಣಿಕೆಯನ್ನು ಎಷ್ಟು ಜನ ಅನುಭವಿಸಿದರು ಎಂಬ ಬಗ್ಗೆ ನಿಖರ ಮಾಹಿತಿ ಇಲ್ಲ!



ಎಚ್.ಎಲ್. ಕೇಶವಮೂರ್ತಿ

ಅಣಕ

ಕನ್ನಡ ಎಂದರೆ ಯಡ್ಯೂರಪ್ಪ

ಪ್ರತಿ ಜಿಲ್ಲೆಯಿಂದ ಐವತ್ತು ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದು ಸಮಂಜಸವೇ ಆಗಿತ್ತು, ಯಾಕೆಂದರೆ ಇದು ಕನ್ನಡದ ಕೆಲಸ ನೋಡಿ. ಬೆಳಗಾವಿಯಲ್ಲೂ ಅಷ್ಟೆ. ಎಲ್ಲೆಲ್ಲಿ ವಸತಿಗೆ ವ್ಯವಸ್ಥೆ ಮಾಡಲಾಗಿದೆ ಎಂಬುದರ ಸಂಪೂರ್ಣ ಮಾಹಿತಿ ದೊರಕುವಂತೆ ನೋಡಿಕೊಳ್ಳಲಾಗಿತ್ತು. ಅದು ಹೇಗೆಂದರೆ....

ಮಾಹಿತಿ ಕೇಂದ್ರಕ್ಕೆ ಹೋಗಿ ನಿಮ್ಮ ಜಿಲ್ಲೆಗೆ ನಿಗದಿಯಾಗಿರುವ ಸ್ಥಳ ವಿಚಾರಿಸುತ್ತೀರಿ. ಅವರು ಯಾವುದೋ ಒಂದು ಹೇಳುತ್ತಾರೆ. ಅಲ್ಲಿಗೆ ಹೋಗುತ್ತೀರಿ. ಅದು ಆಗಲೇ ಭರ್ತಿಯಾಗಿರುತ್ತೆ, ಮತ್ತೆ ಅವರನ್ನು ಸಂಪರ್ಕಿಸುತ್ತೀರಿ. ಬೇರೆ ವಿಳಾಸ ಹೇಳುತ್ತಾರೆ. ಅಲ್ಲಿಗೆ ಹೋದರೆ ಅಲ್ಲಿಯೂ ಅದೇ ಕತೆ. ಹೀಗೆ ಸುಮಾರು 4-5 ಗಂಟೆ ಸುತ್ತಾಟದ ನಂತರ ಯಾವುದೋ ಒಂದು ವಸತಿ ಅಂತ ಆಗುತ್ತೆ. ನೀವು ಸುತ್ತುವಾಗ ಕನ್ನಡ ಉಳಿಸುವವರು ಯಾರು ಎಂಬ ಸತ್ಯ ಗೋಚರಿಸುತ್ತೆ. ಅವರು ಯಾರು ಅಂತೀರಿ. ಸನ್ಮಾನ್ಯ ಯಡ್ಯೂರಪ್ಪನವರು! ಬೀದಿಬೀದಿಗಳಲ್ಲೆಲ್ಲ ಅವರದ್ದೇ ಕಟೌಟು, ಫ್ಲೆಕ್ಸು. ಕನ್ನಡದ ಹೊರೆನ ಈ ಪಾಟ ಹೊರುತ್ತಿದ್ದಾರಲ್ಲ ಅವರೇನಾಗಬೇಕು ಅಂದುಕೊಳ್ಳುವ ಹೊತ್ತಿಗೆ ಗೋವಿಂದ ಕಾರಜೋಳ ಅವರ ಫ್ಲೆಕ್ಸ್ ಕಾಣಿಸುತ್ತೆ ಬೃಹತ್ ಜೋಳದ ರಾಶಿಯಲ್ಲಿ ಮುಗ್ಗಲು ಕಾಳು ಕಾಣಿಸಿದಂತೆ!

ವಸತಿ ಸ್ಥಳ ತೋರಿಸೋಕೆ ಇಷ್ಟೊಂದು ಸುತ್ತಿಸಿದರಲ್ಲ, ಇದೇನು ಅನುಭವದ ಕೊರತೆಯೋ? ಅಥವಾ ಯಡ್ಯೂರಪ್ಪನವರ ದರ್ಬಾರು ತೋರಿಸುವ ಹುನ್ನಾರವೋ?


ಫೋನಿ-ಇಂಡಿಯನ್-ರಿಲೀಜಿಯಸ್-ಮಾಫಿಯಾ


ಬಂದ ಪತ್ರ

ಮಾನ್ಯರೆ,

ಈ ವಾರದ ಲಂಕೇಶ್‌ನಲ್ಲಿ ನಾಲ್ಕು ಲೇಖನಗಳಲ್ಲಿ ಒಂದು ವಿಷಯ ಕಾಮನ್ ಆಗಿದೆ. ಅದು ಸಾಮಾನ್ಯ ಜನರ ನಂಬಿಕೆಯನ್ನು ದುರುಪಯೋಗಪಡಿಸಿ ನಡೆದ ಭಾರಿ ಮೋಸ. ಮೊದಲನೆಯದು ಅಮೆರಿಕದ ಶಿಶುಕಾಮಿ, ಎರಡನೆಯದು ಪೇಜಾವರರ ಮಂಕುಬೂದಿ, ಮೂರನೆಯದು ದಗಲ್ಬಾಜಿ ರವಿಶಂಕರ್, ನಾಲ್ಕನೆಯದು ಉಮಾ ಎಂಬ ಹೊಸ ಬ್ಲೇಡು. ಇದರಲ್ಲಿ ಮೊದಲ ಮೂರು ಹಿಂದೂ ಧರ್ಮ ಹಾಗೂ ದೇವರ ಹೆಸರಲ್ಲಿ ವ್ಯಾಪಾರ ನಡೆಸುವವರು ನಡೆಸಿದ ಮೋಸ. ನಾಲ್ಕನೆಯದು ಮನಿ ಚೈನ್ ತರದ ಕ್ರಿಮಿನಲ್ ಅಪರಾಧ. ಮನಿ ಚೈನ್, ಬ್ಲೇಡ್ ಅಥವಾ ಇತರ ಯಾವುದೇ ತರದ ಮೋಸ ಒಂದಿಲ್ಲೊಂದು ದಿನ ಸಿಕ್ಕಿಬಿದ್ದೇ ಬೀಳುತ್ತದೆ ಹಾಗೂ ಅವರ ಬುದ್ಧಿವಂತಿಕೆಗೆ ತೆರೆ ಬಿದ್ದೇ ಬೀಳುತ್ತದೆ. ಆದರೆ ದೇವರು-ಧರ್ಮದ ಹೆಸರಲ್ಲಿ ನಡೆಯುವ ಮೋಸ ಕೊನೆತನಕ ಹೊರಬೀಳುವುದೇ ಇಲ್ಲ. ಅಮೆರಿಕ ಆಗಿದ್ದಕ್ಕೆ ಶಿಶುಕಾಮಿ ಸಿಕ್ಕಿಬಿದ್ದು ಶಿಕ್ಷೆ ಅನುಭವಿಸಿದನು. ಆದರೆ ಇದೇ ಅಪರಾಧ ಭಾರತದಲ್ಲಿ ಮಾಡಿದ್ದರೆ ಅವನಿಗೆ ಶಿಕ್ಷೆಯಾಗುವುದು ಸಾಧ್ಯವೇ ಇರಲಿಲ್ಲ, ಕಾರಣ ನಮ್ಮ ದೇಶದ ಕಾನೂನು ವ್ಯವಸ್ಥೆ ದೇವಮಾನವರ ಮುಂದೆ ಅಷ್ಟೊಂದು ನಿಸ್ಸಹಾಯಕವಾಗಿದೆ. ಆಧುನಿಕ ವಾತ್ಸಾಯನ ಸ್ವಾಮಿ ನಿತ್ಯಾನಂದ ಜೈಲಿನಿಂದ ಬಂದು ತನ್ನ ಧರ್ಮದ ವ್ಯಾಪಾರವನ್ನು ಹಿಂದಿನಷ್ಟೇ ಜೋರಾಗಿ ಮಾಡುತ್ತಿಲ್ಲವೆ? ಇನ್ನು ಕೆಲವೇ ದಿನಗಳಲ್ಲಿ ಅವನ ವಿರುದ್ಧದ ಕೇಸುಗಳೆಲ್ಲಾ ಬಿದ್ದು ಹೋಗಬಹುದು. ಇಂತಹ ಬೇರೆ ದೇವಮಾನವರ ಮೋಸದ ಬಗ್ಗೆ ನಮಗೆ ಸಿಕ್ಕ ಪುರಾವೆಗಳನ್ನು ಬರೆದು ನಾವು ಪತ್ರಿಕೆಗಳಿಗೆ ಕಳುಹಿಸಿದರೂ ಅವು ಓದುಗರ ಧಾರ್ಮಿಕ ಭಾವನೆ ಗೌರವಿಸುವ ನೆಪದಲ್ಲಿ ಪ್ರಕಟವಾಗುವುದೇ ಇಲ್ಲ. ಉದಾಹರಣೆಗೆ ಈ ಕೆಳಗಿನ ಘಟನೆ:

ಎರಡು ವರ್ಷಗಳ ಹಿಂದೆ ನಾವು ಕೆಲವರು ಇಲ್ಲಿಯ ಪಾರ್ಕ್‌ಗೆ ಬೆಳಗಿನ ಜಾವ ವಾಯುವಿಹಾರಕ್ಕೆ ಹೋಗಿದ್ದಾಗ ಅಲ್ಲಿ ಸಂಶಯಾಸ್ಪದವಾಗಿ ತಿರುಗಾಡುತ್ತಿದ್ದ ಒಬ್ಬ ಬಿಳಿ ವಿದೇಶಿ ಮಹಿಳೆಯನ್ನು ಪ್ರಶ್ನಿಸಿದಾಗ ತಾನು 'ಅಮ್ಮ'ನ ಭಕ್ತಳೆಂದು ಹೇಳಿ ಜಾರಿಗೊಳ್ಳಲು ನೋಡಿದಳು. ಆದರೆ ಪಟ್ಟುಬಿಡದೇ ನಾವು ಧರ್ಮದ ವಿಷಯ ಅವಳೊಡನೆ ಚರ್ಚಿಸಿದಾಗ ಆಕೆ ಸಿಕ್ಕಿಬಿದ್ದು ನಿಜ ಹೇಳಿದಳು- ಈ ಕೇರಳದ ದೇವ-ಮಾನವಳ ಸುತ್ತ ಇರುವ ಬಿಳಿಯರೆಲ್ಲಾ ಕೇವಲ 'ಬಾಡಿಗೆ ಭಕ್ತರು', ನಿಜ ಭಕ್ತರಲ್ಲ, ಹಣಕ್ಕಾಗಿ ಕಾಂಟ್ರಾಕ್ಟ್ ಮೇಲೆ ಬಂದಿರುವವರು. ದಕ್ಷಿಣ ಅಮೆರಿಕದ ದೇಶಗಳಲ್ಲಿಯ ಬಿಳಿಯರಲ್ಲೂ ಭಾರತದಷ್ಟೇ ಬಡತನವಿದ್ದು ಅವರೇ ಈ ಕಾಂಟ್ರ್ಯಾಕ್ಟ್ ಭಕ್ತರಂತೆ. ಶ್ರೀಮಂತ ಭಾರತೀಯರಿಗೆ ಬಿಳಿಯ ವಿದೇಶಿಗಳಿಂದ ಸುತ್ತುವರಿದಿರುವ ದೇವಮಾನವನನ್ನು ಕಂಡರೆ ತಕ್ಷಣ ಭಕ್ತಿ ಹುಟ್ಟುತ್ತದಂತೆ. ಆದರೆ ಜಾತಿವಾದಿ ಭಾರತೀಯರಿಗೆ ಕರಿಯರನ್ನು ಕಂಡರೆ ಅಷ್ಟು ಗೌರವವಿಲ್ಲ, ಹಾಗಾಗಿ ಬಾಬಾ-ಅಮ್ಮಗಳ ಸುತ್ತ 'ನಿಗ್ರೋ ಬಾಡಿಗೆ ಭಕ್ತ'ರನ್ನು ನೇಮಿಸಿಕೊಳ್ಳುವುದಿಲ್ಲವಂತೆ. ಜೊತೆಗೆ ಭಾರತೀಯ ಮೂಲದ ಬಾಡಿಗೆ ಭಕ್ತರನ್ನೂ ಸಭಿಕರ ನಡುವೆ ಕೂಡಿಸಿ ಅವರಿಂದ ಹೀಗೆ ಹೇಳಿಸಲಾಗುತ್ತದಂತೆ-ನನಗೆ ಘೋರ ರೋಗವಿತ್ತು, ಅಥವಾ ನನ್ನ ದೊಡ್ಡ ಉದ್ಯಮ ಭಾರಿ ನಷ್ಟದಲ್ಲಿತ್ತು, ಆದರೆ ಈ ದೇವಮಾನವನ ಕೃಪೆಯಿಂದ ಎಲ್ಲಾ ಸರಿಯಾಯಿತು. ಮುಗ್ಧರು ಧಾರ್ಮಿಕ-ವ್ಯಾಪಾರಿಗಳ ಬುಟ್ಟಿಗೆ ಬೀಳಲು ಇದಕ್ಕಿಂತ ಹೆಚ್ಚೇನು ಬೇಕು.





ಭಾರತದ ಎಲ್ಲಾ ಅರೆ-ಸಾಕ್ಷರ ಬಾಬಾ-ಅಮ್ಮ-ಗುರೂಜಿಗಳ ಸುತ್ತ ಇರುವ ಬಿಳಿ ವಿದೇಶಿಯರೆಲ್ಲಾ ಇಂತಹ ಬಾಡಿಗೆ-ಭಕ್ತರಂತೆ. ಇದಕ್ಕೆ ವಿದೇಶದಲ್ಲಿರುವ ಹೆಸರು: "ಫೋನಿ-ಇಂಡಿಯನ್-ರಿಲೀಜಿಯಸ್-ಮಾಫಿಯಾ". ಹಲವು ಬಾರಿ ಮೋಸ ಹೋಗಿಯೂ ಮತ್ತೆಮತ್ತೆ ಮೋಸ ಹೋಗಲು ಸ್ವ-ಇಚ್ಛೆಯಿಂದ ಬರುವ ಗ್ರಾಹಕರಿರುವ ಒಂದೇ ಒಂದು ವ್ಯಾಪಾರವೆಂದರೆ ಅದು 'ಧಾರ್ಮಿಕ ವ್ಯಾಪಾರ'. ಅದೂ 40% ಭಾರತೀಯರು ಧಾರ್ಮಿಕ-ಮನೋರೋಗಿಗಳು ಆಗಿರುವಾಗ ಈ ವ್ಯಾಪಾರ ತುಂಬಾ ಭರ್ಜರಿಯಾಗಿ ನಡೆಯುತ್ತದೆ.

-ಪಿ.ಎಸ್. ಶೆಟ್ಟಿ


ಮಂಗಳೂರು

ರಮ್ಯಾಳ ದಂಡ ಮತ್ತು ದಶಗುಣ!




ಬಹುಶಃ ರಮ್ಯಾಳ ರಗಳೆಗಳಿಗೆ ಕೊನೆಯೇ ?

ಒಂದಿಲ್ಲೊಂದು ವಿವಾದದ ಗುಂಡಿ ಹೊರಳಾಡುವ ರಮ್ಯಾ ಈ ಬಾರಿ ಫಿಲಂ ರ್ ಲೀಡರುಗಳ ತಲೆಗೇ ಹುಳಾ ಬಿಟ್ಟಿದ್ದಾಳೆ. ಣ ಇಷ್ಟೇ: 'ದಂಡಂ ದಶಗುಣಂ' ುಳಿ ಬಿಡುಗಡೆಗೆ ಬರುತ್ತೇನೆಂದು ಮಾತು ರಮ್ಯಾ ಕೊನೆಗೆ ಕೈ ತ್ತಾಳೆ. 'ರಮ್ಯಾ ಈಗ ಬರ್ತಾಳೆ ರ್ತಾಳೆ' ಎಂದು ಕಾಯುತ್ತಾ ನಿರ್ಮಾಪಕ ಕಂ ವಾಣಿಜ್ಯ ಕಾರ್ಯದರ್ಶಿ ಗಣೇಶ್ ರಮ್ಯಾ ವಿರುದ್ಧ ಹೋರಾಟ ಸಿದ್ದಾರೆ.



ತಮ್ ಮೆನನ್ ನಿರ್ದೇಶನದ 'ಕಾಕ ಕಾಕ' ಚಿತ್ರದ 'ದಂಡಂ ದಶಗುಣಂ' ಚಿತ್ರದಲ್ಲಿ ವಿ ಸರ್ಜಾ ಮತ್ತು ರಮ್ಯಾ ನಟಿಸಿದ್ದಾರೆ. ದಿನ ವಿಟ್ರಿಯಾ ಹೋಟೆಲ್‌ನಲ್ಲಿ ಈ ಚಿತ್ರದ ುಳಿ ಬಿಡುಗಡೆ ಕಾರ್ಯಕ್ರಮವನ್ನು ಜಿಸಲಾಗಿತ್ತು. ಸಾಮಾನ್ಯವಾಗಿ ಕಾರ್ಯಕ್ರಮಗಳೆಂದರೆ, ಅಲ್ಲಿ -ಹೀರೋಯಿನ್ನೇ ಹೈಲೇಟು. ನಾಯಕಿಯರು ಬಂದರೆ ರಿಗೂ ಬರೆಯಲು ಒಂದಿಷ್ಟು ಯಲ್ಲಿ ಸಿಗುತ್ತದೆ ಆ ಕ ಸಿನಿಮಾಕ್ಕೂ ಒಂದಿಷ್ಟು ಸಿಗುತ್ತದೆ. ಈ ಕಾರಣಕ್ಕೇ ಬಾರಿ ಕಲಾವಿದರ ೊತ್ತು ನೋಡಿಕೊಂಡೇ ಇಂಥಾ ಕ್ರಮಗಳು ಏರ್ಪಾಡಾಗುತ್ತವೆ. ಆದರೆ ಮ್ಮ ನಾಯಕ, ನಾಯಕಿಯರು ತಮಗೆ ಚಿದ್ದ ಸಂಭಾವನೆಯಲ್ಲಿ ನಯಾಪೈಸೆ ಯಾದರೂ ಚಿತ್ರದ ಆಡಿಯೋ ಬಿಡುಗಡೆ, ೋಷ್ಠಿಗಳಿಗೆ ಬರದೇ ಆಟಾಡಿಸುವುದೂ .



ರಮ್ಯಾ ವಿಚಾರದಲ್ಲೂ ಹಾಗೇ ಆಗಿದೆ. ರಮ್ಯಾ ಈ ಚಿತ್ರಕ್ಕೆ ಮೂವತ್ತೆರಡು ಲಕ್ಷ ರೂಪಾಯಿಗಳ ಸಂಭಾವನೆ ಕೇಳಿದ್ದಳಂತೆ. ಆದರೆ ನಿರ್ಮಾಪಕ ಗಣೇಶ್ ಸಿನಿಮಾ ಚಿತ್ರೀಕರಣ ಮುಗಿದರೂ ಸಂಪೂರ್ಣ ಮೊತ್ತವನ್ನು ರಮ್ಯಾಗೆ ತಲುಪಿಸಿರಲಿಲ್ಲ, ರಮ್ಯಾಳನ್ನು ಆಡಿಯೋ ರಿಲೀಸ್‌ಗೆ ಆಹ್ವಾನಿಸಿದಾಗ 'ನನ್ನ ಸಂಭಾವನೆಯಲ್ಲಿ ಬಾಕಿ ಉಳಿದಿರುವ ಹಣವನ್ನು ಕೊಟ್ಟರೆ ಬರ್ತೀನಿ' ಎಂದಳಂತೆ. ರಮ್ಯಾ ಬರಲಿಲ್ಲ ಎಂದರೆ ಚಿತ್ರದ ಪ್ರೊಮೋಷನ್ ಕಷ್ಟ ಆಗುತ್ತೆ ಎಂದು ಗಣೇಶ್ ಅಲ್ಲಿಇಲ್ಲಿ ಹಣ ಹೊಂಚಿ ರಮ್ಯಾಗೆ ಕೊಡಬೇಕಿದ್ದ ಬಾಕಿ ದುಡ್ಡು ನೀಡಿದರಂತೆ.


ಅಂದು ರಾತ್ರಿ ಏಳು ಗಂಟೆಗೆ ನಡೆಯಬೇಕಿದ್ದ ಕಾರ್ಯಕ್ರಮಕ್ಕೆ ಆಹ್ವಾನಿತರೆಲ್ಲ ಆಗಮಿಸಿದ್ದರು. ಸಮಾರಂಭವೂ ಆರಂಭವಾಯಿತು. ಆದರೆ ಎತ್ತ ಹುಡುಕಿದರೂ ರಮ್ಯಾ ಮಾತ್ರ ನಾಪತ್ತೆ. ನಿರ್ಮಾಪಕ ಗಣೇಶ್ ಫುಲ್ ಟೆನ್ಷನ್‌ನಿಂದ ಮೊಬೈಲು ಕೈಲಿಡಿದು ಒಂದೇ ಸಮನೆ ಆಕೆಗೆ ಫೋನ್ ಮಾಡುತ್ತಲೇ ಇದ್ದರು. ಅವರು ಎಷ್ಟೇ ಪ್ರಯತ್ನ ಪಟ್ಟರೂ ರಮ್ಯಾ ಮಾತ್ರ ಕರೆ ಸ್ವೀಕರಿಸಲೇ ಇಲ್ಲ. ಕೊನೆಗೆ ರಾತ್ರಿ ಒಂಭತ್ತು ಗಂಟೆಗೆ ಕರೆ ಸ್ವೀಕರಿಸಿದ ರಮ್ಯಾ 'ನಾನು ಮನೆಗೆ ಫರ್ನೀಚರ್ಸ್ ಪರ್ಚೇಸ್ ಮಾಡ್ತಾ ಇದೀನಿ. ಆದ್ದರಿಂದ ಫಂಕ್ಷನ್‌ಗೆ ಬರೋಕಾಗಲ್ಲ' ಎಂದು ರಾಗ ಎಳೆದಳು.

ಮೊದಲೇ ಸಾಲ ಮಾಡಿ ಆಕೆಗೆ ಸಂಪೂರ್ಣ ಸಂಭಾವನೆ ನೀಡಿದ್ದ ಗಣೇಶ್ ಕೆಂಡಾಮಂಡಲರಾಗಿ ಪತ್ರಕರ್ತರು, ಟೆಲಿವಿಜನ್ ಮಾಧ್ಯಮದವರ ಮುಂದೆಯೇ ರಮ್ಯಾಳನ್ನು ಸಕತ್ತಾಗಿ ಉಗಿದರು. ಸಮಾರಂಭಕ್ಕೆ ಬಂದಿದ್ದ ಛೇಂಬರ್ ಅಧ್ಯಕ್ಷ ಬಸಂತ ಕುಮಾರ್ ಪಾಟೀಲ್ ಕೂಡಾ ರಮ್ಯಾಳ ವರ್ತನೆ ಬಗ್ಗೆ ಸಿಕ್ಕಾಪಟ್ಟೆ ಅಸಮಾಧಾನಗೊಂಡರು. ಸಂಭಾವನೆ ಪಡೆದ ಮೇಲೆ ಚಿತ್ರದ ಧ್ವನಿಸುರುಳಿ ಬಿಡುಗಡೆ ಕಾರ್ಯಕ್ರಮಕ್ಕೂ ಹಾಜರಾಗಬೇಕು ಎಂಬ ನೀತಿ ರೂಪಿಸಲು ನಿರ್ಧರಿಸಲಾಗುವುದು ಎಂದು ಪಾಟೀಲ್ ಸಾಹೇಬರು ಫತ್ವಾ ಹೊರಡಿಸಿದರು.

ಗಣೇಶ್ ವಾಣಿಜ್ಯ ಮಂಡಳಿಯ ಪ್ರಧಾನ ಕಾರ್ಯದರ್ಶಿ ಎಂಬ ಕಾರಣಕ್ಕೆ ಅವರಿಗಾದ ಅನ್ಯಾಯದ ವಿರುದ್ಧ ಪಾಟೀಲರು ಸೇರಿದಂತೆ ಎಲ್ಲರೂ ಆಕಾಶ-ಭೂಮಿ ಒಂದಾಗುವಂತೆ ಅರಚಾಡಿದರು. ಆದರೆ ಇದೇ ರೀತಿ ಬೇರೆ ನಿರ್ಮಾಪಕರಿಗೆ ಎಷ್ಟು ಜನ ನಟನಟಿಯರು ರೋದನೆ ಕೊಟ್ಟಿಲ್ಲ? ಆಗ ತೋರದ ಕಾಳಜಿ ಈಗ ಮಾತ್ರ ಯಾಕೆ?

ತಮ್ಮ ಬುಡಕ್ಕೇ ಬೆಂಕಿ ಬಿದ್ದಾಗ ಎಚ್ಚೆತ್ತುಕೊಳ್ಳುವ ಛೇಂಬರ್ ಮಂದಿ ಎಲ್ಲರಿಗೂ ಇದೇ ನ್ಯಾಯವನ್ನು ಅಪ್ಲೈ ಮಾಡಬೇಕಲ್ಲವೆ..?

• ಅರುಣ್




ಹಿಂದೂ ಕಾಳಜಿಯೋ ಕಾಸು ಮಾಡುವ ಪ್ಲಾನೋ?

ನಟ, ನಿರ್ಮಾಪಕ, ನಿರ್ದೇಶಕ ಇನ್ನೂ ಏನೇನೋ ಆಗಿರುವ ಮದನ್ ಪಟೇಲ್ ಏನೋ ಸ್ಕೆಚ್ ಹಾಕಿರುವಂತೆ ಕಾಣುತ್ತಿದೆ.

ಯಾವತ್ತಿಗೂ ಲಾಭವಿಲ್ಲದೆ ಯಾವ ಕೆಲಸವನ್ನೂ ಮಾಡದ ಮದನ್ ಪಟೇಲ್ ಇದ್ದಕ್ಕಿದ್ದಂತೆ "ನಿತ್ಯಾನಂದನಿಂದ ಹಿಂದೂ ಸಂಸ್ಕೃತಿ ಹಾಳಾಗುತ್ತಿದೆ. ಆತನಿಂದ ಹಿಂದೂ ಮಹಿಳೆಯರನ್ನು ರಕ್ಷಿಸಬೇಕು. ನಾನೊಬ್ಬ ಹಿಂದೂ ಆಗಿ ಆತನ ಬಗ್ಗೆ ಒಂದು ಸಿನಿಮಾದ ಮಾಡುವ ಮೂಲಕ ನಿತ್ಯಾನಂದನನ್ನು ಮಟ್ಟ ಹಾಕುತ್ತೇನೆ" ಎಂದೆಲ್ಲಾ ಭಾಷಣ ಹೊಡೆಯುತ್ತಿದ್ದಾರೆ.

ನಿತ್ಯಾನಂದಸ್ವಾಮಿಯ ರಾಸಲೀಲೆಯ ಕುರಿತು 'ಸತ್ಯಾನಂದ' ಚಿತ್ರ ನಿರ್ಮಿಸಬಾರದೆಂದು ನಿತ್ಯಾನಂದ ಕಡೆಯವರು ಹಗಲೂರಾತ್ರಿ ಮದನ್‌ಗೆ ಫೋನ್ ಮಾಡಿ ಬೆದರಿಕೆ ಒಡ್ಡುತ್ತಿದ್ದಾರಂತೆ. ಆದರೆ ಯಾವತ್ತೂ ಎಂತಹ ಸಾಮಾಜಿಕ ಕಾಳಜಿಯನ್ನು ತೋರಿಸದಿರುವ ಮದನ್ ಮಲ್ಲು ಈಗ್ಯಾಕೆ ಹೀಗೆಲ್ಲ ಅಬ್ಬರಿಸುತ್ತಿದ್ದಾರೆ? 'ಸತ್ಯಾನಂದ' ಚಿತ್ರದ ಮುಹೂರ್ತದ ಆಹ್ವಾನಪತ್ರಿಕೆಯಲ್ಲಿ ನಿತ್ಯಾನಂದನ ಫೋಟೋ ಎದ್ದುಕಾಣುವಂತೆ ಪ್ರಿಂಟು ಮಾಡಿಸಿದ್ದರ ಹಿಂದಿನ ಮರ್ಮವೇನು? ಅಸಲಿ ಈ ಸಿನಿಮಾ ನಿಜಕ್ಕೂ ಸಂಪೂರ್ಣಗೊಳ್ಳುತ್ತದಾ? ಅಥವಾ ನಿತ್ಯಾನಂದನನ್ನೇ ಬ್ಲಾಕ್‌ಮೇಲ್ ಮಾಡಿ ಒಂದಿಷ್ಟು ಕಾಸು ಮಾಡಿಕೊಳ್ಳುವುದು ಮದನ್ ಮಲ್ಲು ಮಾಸ್ಟರ್ ಪ್ಲಾನಾ? ಅನ್ನೋದು ಗಾಂಧಿನಗರದವರ ಅನುಮಾನ...

ಬಿಜೆಪಿಯ ಸಕ್ರಿಯ ಸದಸ್ಯನಾಗಿರುವ ಮದನ್‌ನ ಈ ಪರಿಯ ಹಿಂದೂ ಸೇವೆಯ ಕಂಡು ಹಿಂದೂ ದೇವತೆಯರು ಧನ್ಯರಾಗಿರಬೇಕು...



ಪ್ಯಾಟೆ ಹುಡುಗೀರ ಹೀನಾಯ ಲೈಫು!

ಮೂರಾರದ್ದಾದರೂ ಒಂದು ಉರುಳುವ ತನಕ ಿಟಿ ಶೋಗಳನ್ನು ಸುತ್ತಿರುವ ಟೀವಿ ರ್ಗಳಿಗೆ ಾನವಾಗುವ ಹಾಗೆ ಲ್ಲ...

ದಷ್ಟು ಥರ್ಡ್ ಕ್ಲಾಸ್ ಗಳ ನಾಯಕಿಯರಾಗಿ , ಸಂಗೀತಾ ಶೆಟ್ಟಿ, ಸ್ವಾತಿ, ಮತ್ತು ಒಂದಷ್ಟು ಟೀವಿ ವನ್ನು ತುಂಬಿಸಿಕೊಂಡು ಟೀವಿಯಲ್ಲಿ 'ಪ್ಯಾಟೆ ೀರ ಹಳ್ಳಿ ಲೈಫು' ಎಂಬ ಿಟಿ ಶೋ ಾಗುತ್ತಿದೆ. ಮೊನ್ನೆ ಹೆಚ್ಚೂ ಾಗಿದ್ದಿದ್ದರೆ ಈ ಕ್ರಮದಲ್ಲಿ ೊಸುತ್ತಿರುವ ಕುಮುದ ಹುಡುಗಿಯೊಬ್ಬಳು ತನ್ನ ಕಳೆದುಕೊಳ್ಳುತ್ತಿದ್ದಳು.

ಟೆ 'ಹಳ್ಳಿ ಹೈದ ' ಬಂದ' ಎಂಬ ಶೆಟ್ಟಿ ಿಟಿ ಶೋ ಮತ್ತು



ಅದರಲ್ಲಿನ 'ಟಾಸ್ಕ್'ಗಳ ಬಗ್ಗೆ 'ಲಂಕೇಶ್' ಬರೆದಿತ್ತು. ಆಗ ಎಲ್ಲಾ ಸ್ಪರ್ಧಿಗಳಿಗೂ ಬೇಧಿ ಮಾತ್ರೆ ಬೆರೆಸಿದ್ದ ಊಟವನ್ನು ತಿನ್ನಿಸಿದ್ದರು. ಹೊಟ್ಟೆ ಬಿರಿಯುವಂತೆ ಉಂಡಿದ್ದ ಹುಡುಗರು ಟಾಯ್ಲೆಟ್ಟಿಗೆ ಹೋಗುವಂತಿರಲಿಲ್ಲ. ಯಾರು ಕೆಳಗೆ ಕಿತ್ತುಕೊಂಡು ಬರುವ ಶೌಚವನ್ನು ಕೊನೆಯವರೆಗೂ ತಡೆದಿಟ್ಟುಕೊಳ್ಳುತ್ತಾರೋ ಅವರು 'ಟಾಸ್ಕ್' ಗೆದ್ದಂತೆ. ತಡೆಯಲಾರದೇ ಟಾಯ್ಲೆಟ್ಟಿಗೆ ನುಗ್ಗಿದವರನ್ನು ಶೋನಿಂದ ಎಲಿಮಿನೇಟ್ ಮಾಡಿದ್ದರು.

ಈಗ ಪ್ಯಾಟೆ ಹುಡುಗೀರ ಕಾರ್ಯಕ್ರಮದಲ್ಲೂ ಅಂಥವೇ ಅಮಾನವೀಯ ಟಾಸ್ಕ್‌ಗಳು ನಡೆಯುತ್ತಿವೆ. ಮೊನ್ನೆ ರಾಶಿ ರಾಶಿ ಮೆಣಸಿನಕಾಯಿಯನ್ನು ಕುಟ್ಟಿ ಪುಡಿ ಮಾಡದ ಹುಡುಗಿಯರಿಗೆ ಹಿಡಿ ಹಿಡಿ ಮೆಣಸಿನಕಾಯಿ ತಿನ್ನಿಸಿದ್ದಾರೆ. ಕುಮುದ ಎಂಬ ಹುಡುಗಿ ಮೆಣಸಿನಕಾಯಿ ಪುಡಿ ಮಾಡದೇ ಇದ್ದುದರಿಂದ ಆ ಕಾರ್ಯಕ್ರಮದ ಸೂತ್ರಧಾರ ಆಕುಲ್ ಎಂಬ ಕಮಂಗಿ ಆಕೆಗೆ ಹನ್ನೆರಡು ಬ್ಯಾಡಗಿ ಮೆಣಸಿನ ಕಾಯಿ ತಿನ್ನಿಸಿಬಿಟ್ಟಿದ್ದಾನೆ. ಮೆಣಸಿನ ಕಾಯಿ ಒಳಹೋಗುತ್ತಿದ್ದಂತೇ ಹುಡುಗಿ ಮುಖ ಕೆಂಪಾಗಿ ಹೋಗಿದೆ. ಹೊಟ್ಟೆಗೆ ಕೆಂಡ ಸುರುವಿದಂತಾಗಿ ಆಕೆ ಪ್ರಜ್ಞೆ ಕಳೆದುಕೊಂಡಿದ್ದಾಳೆ. ಉಸಿರಾಟವೂ ಕೈಕೊಟ್ಟು ಸದ್ಯ ಆಕೆಯನ್ನು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಗಾಯತ್ರಿ ಎಂಬ ಮತ್ತೊಬ್ಬ ಹುಡುಗಿಗೆ ರಾತ್ರಿಯಿಡೀ ನಿದ್ರೆ ಮಾಡಲು ಬಿಡದೆ ಸೈಕಲ್ ತುಳಿಸಿ ಹೈರಾಣಾಗುವಂತೆ ಮಾಡಿದ್ದಾರೆ.

ಇಷ್ಟೇ ಅಲ್ಲ, ಡ್ರೈವಿಂಗು ಗೊತ್ತಿರದ ಹುಡುಗಿಯರಿಂದ ಟ್ರಾಕ್ಟರ್ ರೇಸ್



ಮಾಡಿಸಿದ್ದಾರೆ. ಹುಡುಗಿಯರು ಯದ್ವಾತದ್ವಾ ಟ್ರಾಕ್ಟರ್ ಚಲಾಯಿಸಿದ್ದರಿಂದ ಎರಡು ಟ್ರಾಕ್ಟರ್‌ಗಳು ಗುದ್ದಿಕೊಂಡು ಸ್ವಾತಿ ಎಂಬಾಕೆ ಮಂಡಿ ಮುರಿದುಕೊಂಡಿದ್ದಾಳೆ.

ಇನ್ನು ಚಿತ್ರೀಕರಣ ಮುಗಿದ ನಂತರ ಈ ರಿಯಾಲಿಟಿ ಟೀಂನಲ್ಲಿರುವ ಕೆಲವು ಹುಡುಗಿಯರು ಮಾದಕವಸ್ತುಗಳನ್ನು ಬಳಸಿ ರಾದ್ಧಾಂತ ಮಾಡಿಕೊಂಡಿದ್ದಾರೆ ಎಂಬ ಸುದ್ದಿ ಕೂಡಾ ಹೊರಬಿದ್ದಿದೆ. ಹಿಂದೆ ಇದೇ ಕಾರ್ಯಕ್ರಮದ ಮೊದಲ ಸುತ್ತಿನಲ್ಲಿ ಅನುಮತಿಯಿಲ್ಲದೆ ಮರವನ್ನು ಕಡಿದ ಕಾರಣಕ್ಕೆ ಈ ರಿಯಾಲಿಟಿ ತಂಡದ ವಿರುದ್ಧ ಎಫ್‌ಐಆರ್ ಕೂಡಾ ದಾಖಲಾಗಿತ್ತು. ಅಪೂರ್ವ ಶೆಟ್ಟಿ ಎಂಬಾಕೆ ಕಾಡಿನಲ್ಲೇ ಆತ್ಮಹತ್ಯೆಗೆ ಪ್ರಯತ್ನಿಸಿದ್ದಳು. ಈಗ ಮತ್ತದೇ ಅಪೂರ್ವ ಸೀಸನ್-2 ನಲ್ಲೂ ಭಾಗವಹಿಸಿದ್ದಾಳೆ.

ಇನ್ನು ಈ ರಿಯಾಲಿಟಿ ಶೋ ಮುಗಿಯುವ ಹೊತ್ತಿಗೆ ಇನ್ನೂ ಎಂತೆಂಥ ಅನಾಹುತಗಳು ನಡೆಯಲಿವೆಯೋ? ಎಷ್ಟು ಜನ ಬಲಿಬೀಳುತ್ತಾರೋ? ●

Regd.No.KA/RNP/BGS/2036/2010-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 30-3-2011


ನಕಲು ನಕ್ಷತ್ರಗಳು

ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ಸುಮಾರು 30 ಬಸ್ಸುಗಳಲ್ಲಿ ಹೋದ ಸಿನಿಮಾರಂಗದ ಕಲಾವಿದರು, ತಂತ್ರಜ್ಞರು ಅಲ್ಲಿ ಮನರಂಜನಾ ಕಾರ್ಯಕ್ರಮ ನೀಡಿದರು. ಅಷ್ಟೇ ಅಲ್ಲ ಬೆಳಗಿನ ಜಾವ ಮೂರಗಂಟೆ ತನಕ ಇವರೆಲ್ಲ ಕುಣಿದು ಕುಪ್ಪಳಿಸಿ ತಮ್ಮ ಕನ್ನಡ ಪ್ರೇಮವನ್ನು ಪ್ರದರ್ಶಿಸಿದರು. ಆ ಮೂಲಕ ತಾವೆಲ್ಲ ಕನ್ನಡ ಭಾಷೆಯ ಪ್ರೇಮಿಗಳು ಎಂದು ಸಾರಿದರು.

ಆದರೆ ವಾಸ್ತವ ಸ್ಥಿತಿಯೇ ಬೇರೆಯದ್ದಾಗಿದೆ. ಯಾಕೆಂದರೆ ನಮ್ಮ ಚಿತ್ರರಂಗದ ಕಲಾವಿದರು ಹೊರಗೆ ಕನ್ನಡ ಪ್ರೇಮವನ್ನು ಪ್ರದರ್ಶಿಸಿದರೂ ಅವರ ಹೃದಯದಲ್ಲಿರುವುದು ಪರಭಾಷಾ ಚಿತ್ರಗಳ ಬಗೆಗಿನ ವ್ಯಾಮೋಹ! ಮೊನ್ನೆ ಸಮ್ಮೇಳನದಲ್ಲಿ ಭಾಗವಹಿಸಿದ ಬಹುತೇಕ ಕಲಾವಿದರ ಬಿಡುಗಡೆಯಾಗಲಿರುವ ಚಿತ್ರಗಳೆಲ್ಲವು ರಿಮೇಕ್ ಎಂಬುದು ಅತ್ಯಂತ ಆಘಾತದ ವಿಷಯ. (ಶಿವರಾಜ್ ಕುಮಾರ್ ಮಾತ್ರ ತಾನು ರೀಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ ಎಂಬ ಶಪಥಕ್ಕೆ ಇವತ್ತಿಗೂ ಬದ್ಧರಾಗಿದ್ದಾರೆ.) ಉಳಿದ ಚಿತ್ರರಂಗದ ನಟನಟಿಯರ ಇಬ್ಬಂದಿತನಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ ನೋಡಿ:







ವಿಶ್ವ ಕನ್ನಡ ಸಮ್ಮೇಳನ ನಡೆಯುವ ಹಿಂದಿನ ದಿನ ಬಿಡುಗಡೆಯಾದ ಸುದೀಪ್ ನಟಿಸಿ-ನಿರ್ದೇಶಿಸಿರುವ 'ಕೆಂಪೇಗೌಡ' ಚಿತ್ರ ತೆಲುಗಿನ ಸೂಪರ್‌ಹಿಟ್ ಚಿತ್ರ 'ಸಿಂಹಂ'ನ ರಿಮೇಕ್.



ಬಾಕ್ಸಾಫೀಸ್ ಕಿಂಗ್ ಎಂಬ ಬಿರುದು ಗಳಿಸಿರುವ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಬಿಡುಗಡೆಯಾಗಲಿರುವ ಚಿತ್ರ 'ಹುಡುಗರು' ಕೂಡಾ ತಮಿಳಿನಲ್ಲಿ ಸೂಪರ್‌ಹಿಟ್ ಆಗಿದ್ದ 'ನಾಡೋಡಿಗಳ್' ಚಿತ್ರದ ಜೆರಾಕ್ಸ್ ಕಾಪಿ.





ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟಿಸುತ್ತಿರುವ 'ಪ್ರಿನ್ಸ್' ಚಿತ್ರ ಸದ್ಯದಲ್ಲೇ ತೆರೆ ಕಾಣಲಿದೆ. ಆದರೆ 'ಪ್ರಿನ್ಸ್' ರೀಮೇಕ್ ಅಲ್ಲ; ಅದೊಂದು ಹಲವಾರು ಪರಭಾಷಾ ಚಿತ್ರಗಳ ರೀ-ಮಿಕ್ಸ್ ಚಿತ್ರವಾಗಲಿದೆ ಎಂಬುದು ಇಡೀ ಗಾಂಧಿನಗರಕ್ಕೆ ತಿಳಿದಿರುವ ವಿಷಯ.

ರಿಯಲ್ ಸ್ಟಾರ್ ಉಪೇಂದ್ರ ಕೂಡಾ ಇತ್ತೀಚೆಗೆ ಪರಭಾಷೆಯ ಚಿತ್ರಗಳಲ್ಲಿ ನಟಿಸುವುದನ್ನೇ ಹವ್ಯಾಸ ಮಾಡಿಕೊಂಡಿದ್ದಾರೆ. ಅವರು ಮತ್ತು ಅವರ ಶ್ರೀಮತಿ ಪ್ರಿಯಾಂಕ ನಟಿಸಿರುವ 'ಶ್ರೀಮತಿ' ಎಂಬ ಚಿತ್ರ ಸದ್ಯದಲ್ಲೇ ತೆರೆಕಾಣಲಿದ್ದು, ಇದು ಕೂಡಾ ರಿಮೇಕ್ ಚಿತ್ರವಾಗಿದೆ.

ಕನ್ನಡ ಚಿತ್ರರಂಗದ ಸಜ್ಜನ ನಟ ಎಂದೇ ಪರಿಗಣಿಸಲಾಗಿರುವ ರಮೇಶ್ ತಮ್ಮ ಚಿತ್ರಗಳ ಆಯ್ಕೆಯಲ್ಲಿ ಅದೇ ಸಜ್ಜನಿಕೆಯನ್ನು ಉಳಿಸಿಕೊಂಡಿಲ್ಲ. ರಮೇಶ್ ಇತ್ತೀಚೆಗೆ ರಿಮೇಕ್ ಪ್ರಿಯರಾಗಿಬಿಟ್ಟಿದ್ದಾರೆ. ಅವರು ನಟಿಸಿರುವ 'ಹ್ಯಾಪಿ ಹಸ್ಬೆಂಡ್' ಕೂಡ ರೀಮೇಕ್ ಚಿತ್ರ.

ಕಳೆದ ನಾಲ್ಕು ವರ್ಷಗಳಿಂದ 'ಮಂಜಿನ ಹನಿ' ಎಂಬ ಸ್ವಮೇಕ್ ಚಿತ್ರವನ್ನು ಕ್ರೇಜಿ ಸ್ಟಾರ್ ರವಿಚಂದ್ರನ್ ಮಾಡುತ್ತಲೇ ಬಂದಿರುವುದು ನಿಜವಾದರೂ ಅದೇ ರವಿ ಅದೇ ಅವಧಿಯಲ್ಲಿ ಐದಾರು ರಿಮೇಕ್ ಚಿತ್ರಗಳಲ್ಲಿ ನಟಿಸಿದ್ದಾರೆ. ಅಷ್ಟೇ ಅಲ್ಲ, ಸದ್ಯದಲ್ಲೇ ತೆರೆ ಕಾಣಲು ರೆಡಿಯಾಗಿರುವ ಅವರ ಎರಡು ಚಿತ್ರಗಳಾದ 'ಮಲ್ಲಿಕಾರ್ಜುನ' ಮತ್ತು 'ಹ್ಯಾಪಿ ಹಸ್ಬೆಂಡ್' ರೀಮೇಕ್ ಚಿತ್ರಗಳಾಗಿದ್ದು ಅವರು ಕನ್ನಡಿಗರಿಗೆ ಹಳಸಿದ ಅನ್ನವಾಗಲಿದೆಯೇ ಹೊರತು ಖಂಡಿತವಾಗಿಯೂ ಮೃಷ್ಟಾನ್ನ ಭೋಜನವಲ್ಲ.

ಹಿರಿಯ ಕಲಾವಿದರು ಹೀಗೆ ರಿಮೇಕ್ ಚಿತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಅವರಿಗಿಂತ ನಾವೇನು ಕಡಿಮೆ ಎಂಬ ಮನೋಭಾವ ಕಿರಿಯ ಕಲಾವಿದರದ್ದು. ಇನ್ನೂ ಸ್ಟಾರ್‌ಡಂನ ಸಂಪೂರ್ಣ ರುಚಿ ಅನುಭವಿಸದಿರುವ ಚಾಕಲೇಟ್ ಹೀರೋ ದಿಗಂತ್ ಮತ್ತು ಪ್ರಜ್ವಲ್ ದೇವರಾಜ್ ಕೂಡಾ ಪರಭಾಷಾ ಚಿತ್ರಗಳ ಕ್ಯಾಸೆಟ್ ತೆಗೆದುಕೊಂಡು ಬರುವ ನಿರ್ದೇಶಕರಿಗೆ ಕಾಲ್‌ಶೀಟ್ ನೀಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಸದ್ಯಕ್ಕೆ ಇವರು ಕೂಡ್ಲು ರಾಮಕೃಷ್ಣ ನಿರ್ದೇಶನದ 'ಮಿಸ್ಟರ್ ಡೂಪ್ಲಿಕೇಟ್' ಚಿತ್ರದಲ್ಲಿ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ. ಕೂಡ್ಲು ಈ ಚಿತ್ರದ ಬಗ್ಗೆ ಇನ್ನೂ ಏನೂ ಬಾಯಿ ಬಿಟ್ಟಿಲ್ಲವಾದರೂ ಇದು ರಿಮೇಕ್ ಚಿತ್ರ ಎಂದೇ ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಒಂದೆಡೆ ದಿಗಂತ್ 'ಪುತ್ರ' ಎಂಬ ರಿಮೇಕ್ ಚಿತ್ರದಲ್ಲೂ, ಇನ್ನೊಂದೆಡೆ ಪ್ರಜ್ವಲ್ 'ಭದ್ರ' ಎಂಬ ರಿಮೇಕ್ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಗೋಲ್ಡನ್ ಸ್ಟಾರ್ ಗಣೇಶ್ ಕೂಡಾ ರಿಮೇಕ್ ಚಿತ್ರಗಳಿಗೆ ಮಣೆಹಾಕಿದ್ದು ನಿಮಗೆಲ್ಲಾ ಗೊತ್ತಿರುವ ವಿಷಯವೇ. ಅವರು ನಟಿಸಿದ್ದ 'ಏನೋ ಒಂಥರಾ', 'ಉಲ್ಲಾಸ ಉತ್ಸಾಹ' ಚಿತ್ರಗಳೆರಡೂ ಯಶಸ್ವಿ ರಿಮೇಕ್ ಚಿತ್ರದ ಜೆರಾಕ್ಸ್ ಕಾಪಿಯಾದರೂ ಬಾಕ್ಸಾಫೀಸ್‌ನಲ್ಲಿ ಮಾತ್ರ ಸಂಪೂರ್ಣವಾಗಿ ನೆಲಕಚ್ಚಿತು. ಈಗ ಸದ್ಯಕ್ಕೆ 'ಕೂಲ್' ಎಂಬ ಚಿತ್ರದ ಮುಖಾಂತರ ಗಣೇಶ್ ಮತ್ತೆ ಕಳೆದುಹೋದ ತಾರಾವರ್ಚಸ್ಸನ್ನು ಮರಳಿ ಪಡೆಯಲು ಸರ್ಕಸ್ ಮಾಡುತ್ತಿದ್ದಾರೆ.

ಹೊಸ ನಾಯಕನಟರಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಚಿರಂಜೀವಿ ಸರ್ಜಾ ಮತ್ತು ಲೂಸ್ ಮಾದ ಯಾನೆ ಯೋಗೇಶ್ ಕೂಡ ರಿಮೇಕ್ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆ. ತೆಲುಗಿನ ಸೂಪರ್‌ಹಿಟ್ ಚಿತ್ರ 'ಕಾಕಾ ಕಾಕಾ'ದ ಪಡಿಯಚ್ಚಾಗಿರುವ 'ದಂಡಂ ದಶಗುಣಂ' ಚಿತ್ರದಲ್ಲಿ ಚಿರು ಮತ್ತು ರಮ್ಯಾ ಜೋಡಿಯಾಗಿ ನಟಿಸಿದ್ದಾರೆ. ಹಾಗೆಯೇ ಲೂಸ್ ಮಾದ ಮತ್ತು ಐಂದ್ರಿತಾ ರೇ ನಟಿಸಿರುವ 'ಧೂಳ್' ಚಿತ್ರ ಕೂಡಾ ರಿಮೇಕ್ ಚಿತ್ರವಾಗಿದೆ.

'ದುನಿಯಾ' ಚಿತ್ರದಿಂದ ಏಕ್‌ದಂ ತಾರಾ ವರ್ಚಸ್ಸು ಪಡೆದ ವಿಜಯ್ ಕೂಡಾ ಈಗ ರಿಮೇಕ್ ಚಿತ್ರಗಳತ್ತ ಹೆಚ್ಚು ಒಲವು ತೋರಿಸುತ್ತಿದ್ದಾರೆ. ಅವರು ನಟಿಸಿದ 'ಕಂಠೀರವ' ಎಂಬ ರಿಮೇಕ್ ಚಿತ್ರ ಬಾಕ್ಸಾಫೀಸ್‌ನಲ್ಲಿ ಅಪೂರ್ವವಾಗಿ ನೆಲಕಚ್ಚಿದ್ದರೂ ವಿಜಿ ನಾಲ್ಕೈದು ರಿಮೇಕ್ ಚಿತ್ರಗಳಿಗೆ ಸಹಿ ಹಾಕುವ ಘಟ್ಟದಲ್ಲಿದ್ದಾರೆ.

'ಮರೆಯುವ ಮುನ್ನ ನನ್ನ ನೆನಪಿರಲಿ' ಎಂಬಂತಾಗಿರುವ 'ನೆನಪಿರಲಿ' ಖ್ಯಾತಿಯ ನಟ ಪ್ರೇಮ್ ತಾನು ರಿಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ ಎಂದು ಆರಂಭದಲ್ಲಿ ಘೋಷಿಸಿ ಎಲ್ಲರನ್ನೂ ಚಕಿತಗೊಳಿಸಿದ್ದರು. ಆದರೆ ಅವರು ಈಗ ನಟಿಸುತ್ತಿರುವ 'ದಗ್..ದಗಾ..ದಗ್..' ಎಂಬ ಚಿತ್ರ ರಿಮೇಕ್ ಚಿತ್ರವಾಗಿದೆ.

ಪ್ರೇಮ್ ತರಹ ಮೈಸೂರಿನವರೇ ಆದ ಮತ್ತೊಬ್ಬ ಯುವ ನಾಯಕ ನಟ ಯಶ್ ಕೂಡಾ ಆರಂಭದಲ್ಲೇ ರಿಮೇಕ್ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆ. ಈತ ನಟಿಸುತ್ತಿರುವ 'ಕಿರಾತಕ' ಎಂಬ ರೀಮೇಕ್ ಚಿತ್ರ ಆತನ ಪಾಲಿಗೆ ವರವಾಗಲೂ ಬಹುದು; ಶಾಪವಾಗಲೂಬಹುದು.

ಬೇರೆಯವರಿಗಿಂತ ನಾವೇನು ಕಡಿಮೆ ಎಂದು ನವರಸ ನಾಯಕ ಜಗ್ಗೇಶ್ ಮತ್ತು ಅವರ ಸಹೋದರ ಕೋಮಲ್ ಕೂಡಾ ರಿಮೇಕ್ ನದಿಯಲ್ಲಿ ಸ್ನಾನಮಾಡುತ್ತಿದ್ದಾರೆ. ಕೋಮಲ್ ನಟಿಸಿದ 'ವಾರೆವ್ಹಾ' ಮತ್ತು 'ಕಳ್‌ಮಂಜ' ಚಿತ್ರಗಳೂ ರಿಮೇಕ್ ಎಂಬುದು ಜಗಜ್ಜಾಹೀರಾಗಿರುವ ವಿಷಯ. ಸದ್ಯದಲ್ಲೇ ಆರಂಭವಾಗಲಿರುವ ಕೋಮಲ್ ಅವರ ಹೊಸ ಚಿತ್ರ 'ಮರೆಯದ ರಾಮಣ್ಣ' ಎಂಬ ಚಿತ್ರ ಕೂಡಾ ರಿಮೇಕ್ ಎಂಬುದನ್ನು ಮರೆಯಬೇಕಿಲ್ಲ. ಅದೇರೀತಿ ಜಗ್ಗೇಶ್ ಅತ್ಯಂತ ಉತ್ಸಾಹದಿಂದ ನಟಿಸುತ್ತಿರುವ 'ಡಬಲ್ ಡಕ್ಕರ್' ಚಿತ್ರ ಕೂಡ ಮಲೆಯಾಳಂ ಚಿತ್ರದ ಜೆರಾಕ್ಸ್ ಕಾಪಿ. ಈ ಹಿಂದೆ ಮೊನ್ನೆ ಮೊನ್ನೆ ಬಂದು ಹೋದ ಅವರ 'ಲಿಫ್ಟ್ ಕೊಡ್ಲಾ?' ಚಿತ್ರ ಕೂಡಾ ಅಪ್ಪಟ ರಿಮೇಕ್ ಎಂಬುದನ್ನು ಮರೆಯುವ ಹಾಗಿಲ್ಲ.







ಹೀರೋಗಳೇ ರಿಮೇಕ್ ರಂಗೋಲಿ ಕೆಳಗೆ ನುಸುಳಿದರೆ ಇನ್ನು ನಮ್ಮ ಗತಿಯೇನು ಎಂಬುದು ನಾಯಕಿಯರ ಮನಸ್ಥಿತಿ! ಪೂಜಾ ಗಾಂಧಿ ನಟಿಸುತ್ತಿರುವ ನಾಯಕಿ ಪ್ರಧಾನವಾದ 'ಜನವರಿ 1 ಬಿಡುಗಡೆ' ಎಂಬ ಚಿತ್ರ ಕೂಡಾ ರಿಮೇಕ್. ಈ ಹಿಂದೆ ಪೂಜಾ ಗಾಂಧಿ 'ರಾಣಿ-ಮಹಾರಾಣಿ' ಮತ್ತು 'ಅನು' ಎಂಬೆರಡು ರಿಮೇಕ್ ನಾಯಕಿ ಪ್ರಧಾನ ಚಿತ್ರಗಳಲ್ಲಿ ನಟಿಸಿದ್ದರು. ಆದರೆ ಪ್ರೇಕ್ಷಕರು ಈ ಎರಡು ಚಿತ್ರಗಳನ್ನು ಬಾಕ್ಸಾಫೀಸ್‌ನಲ್ಲಿ ತಿರಸ್ಕರಿಸಿದ್ದರು.







ಹೀಗೆ ಪಟ್ಟಿ ಮಾಡುತ್ತಾ ಹೋದರೆ ಇಡೀ ಕನ್ನಡ ಚಿತ್ರರಂಗ ರಿಮೇಕ್ ಚಿತ್ರಗಳ ಕೊಚ್ಚೆಯಲ್ಲಿ ಮುಳುಗಿಹೋಗಿರುವುದು ಸ್ಪಷ್ಟವಾಗುತ್ತದೆ. ಹಳೆಕಾಲದ ನಟರು ಮಾತ್ರವಲ್ಲ; ಹೊಸ ಜಮಾನದ ಯುವಕರು ಕೂಡಾ ಒಬ್ಬ ನಿರ್ದೇಶಕ ಪರಭಾಷಾ ಚಿತ್ರದ ಕ್ಯಾಸೆಟ್ ತಂದಕೂಡಲೇ ಆತನಿಗೆ ತಮ್ಮ ಕಾಲ್‌ಶೀಟ್ ಕೊಡುತ್ತಿದ್ದಾರೆ. ಆದರೆ ಕನ್ನಡದ ಒಬ್ಬ ನಿರ್ದೇಶಕ ತನ್ನ ಕ್ರಿಯಾಶೀಲತೆಯನ್ನು ಬಳಸಿ ಕಥೆ ಮಾಡಿಕೊಂಡು ಈ ಹೀರೋಗಳ ಮನೆ ಬಾಗಿಲಿಗೆ ಹೋದರೆ ಆತನಿಗೆ ಒಂದು ಪೈಸೆಯಷ್ಟು ಗೌರವವೂ ಸಿಗುತ್ತಿಲ್ಲ.... ರಿಮೇಕ್ ಚಿತ್ರಗಳಲ್ಲಿ ನಟಿಸುವುದು ಖಂಡಿತ ದೊಡ್ಡ ಅಪರಾಧವೇನೂ ಅಲ್ಲ; ಆದರೆ ರಿಮೇಕ್ ಚಿತ್ರಗಳನ್ನೇ ನಂಬಿಕೊಂಡು 'ಕಲಾಸೇವೆ' ಮಾಡುವ ಈ ಕಲಾವಿದರಿಗೆ ನಮ್ಮ ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಮಾತನಾಡಲು ಯಾವ ಹಕ್ಕಿದೆ?

ಆದರೂ ಈ ರಿಮೇಕ್ ಚಿತ್ರಗಳ ದೊರೆಗಳೇ ಬೆಳಗಾವಿಯಲ್ಲಿ ಲಕ್ಷಾಂತರ ಜನರೆದುರು ಕನ್ನಡ ಭಾಷೆ ಉಳಿಸಿ, ಕನ್ನಡ ಚಿತ್ರಗಳನ್ನು ಬೆಳೆಸಿ ಎಂದು ಭಾಷಣ ಬಿಗಿದಿದ್ದಾರೆ.

ಕನ್ನಡಾಂಬೆ ಧನ್ಯಳೋ, ಧನ್ಯಳು!!

• ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore